ಪುಸ್ತಕ ಪ್ರಪಂಚ

ಸಂಪುಟ ೩೮ ೧೯೮೪ ಏಪ್ರಿಲ್ ಸಂಚಿಕೆ ೬



ವಿಷಯ ಸೂಚಿ

ಮುಖಚಿತ್ರ : ಬಿ. ಪುಟ್ಟಸ್ವಾಮಯ್ಯ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೮ ಏಪ್ರಿಲ್ ೧೯೮೪ ಸಂಚಿಕೆ ೯

ಬಿ. ಪುಟ್ಟಸ್ವಾಮಯ್ಯ

ಸಾಹಿತ್ಯ-ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ಸಾರ್ಥಕ ಸೇವೆ ಸಲ್ಲಿಸಿ ಕೀರ್ತಿಶೇಷರಾದ ಬಸಪ್ಪ ಪುಟ್ಟಸ್ವಾಮಯ್ಯನವರು (೧೮೯೪-೧೯೮೭) ಕನ್ನಡದ ಗಣ್ಯ ಲೇಖಕರಲ್ಲಿ ಒಬ್ಬರಾಗಿದ್ದರು. ಬಡತನದಲ್ಲಿ ಹುಟ್ಟಿ-ಬೆಳೆದು, ಪ್ರತಿಕೂಲ-ಪರಿಸ್ಥಿತಿಗಳನ್ನೂ ಎದುರಿಸಿ, ಸ್ವಸಾಮರ್ಥ್ಯದಿಂದ ಮುಂದಕ್ಕೆ ಬಂದ ಪುಟ್ಟಸ್ವಾಮಯ್ಯನವರದು 'ಹೋರಾಟದ ಬದುಕು.' ಬೆಂಗಳೂರಿನಲ್ಲಿ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಜನನ. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡು, ಶಾಲಾವ್ಯಾಸಂಗವನ್ನು ಬಿಟ್ಟು, ಸಂಸಾರದ ಹೊರೆ ಹೊರಬೇಕಾಯಿತು. ಹೊಟ್ಟೆಪಾಡಿಗಾಗಿ ಸಣ್ಣ-ಪುಟ್ಟ ಸಂಸ್ಥೆಗಳಲ್ಲಿ ಕೆಲಸ ಮಾಡಿದರು. ಮುಂದೆ ಪತ್ರಿಕೋದ್ಯಮದಲ್ಲಿ ಪಳಗಿದರು. ಆಗ್ಗೆ ಪ್ರಕಟವಾಗುತ್ತಿದ್ದ 'ನ್ಯೂ ಮೈಸೂರ್' ಎಂಬ ವಾರಪತ್ರಿಕೆಯಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿ ಮುಂದೆ ಮೈಸೂರಿನಿಂದ ಪ್ರಕಟವಾಗುತ್ತಿದ್ದ 'ಮೈಸೂರು ಸ್ಟಾರ್' ಪತ್ರಿಕೆಗೆ ಬೆಂಗಳೂರಿನ ವರದಿಗಾರರೆಂದು ಐದು ವರ್ಷಗಳ ಕಾಲ ಕೆಲಸ ಮಾಡಿದರು. ಆನಂತರ ಬೆಂಗಳೂರು ಒಕ್ಕಲಿಗರ ಸಂಘದ 'ಒಕ್ಕಲಿಗರ ಪತ್ರಿಕೆ'ಗೆ ಸಂಪಾದಕರಾಗಿ ನೇಮಕಗೊಂಡರು. ಅಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿದ ಮೇಲೆ 'ಜನವಾಣಿ' ಪತ್ರಿಕೆ ಸೇರಿದರು. 'ಪ್ರಜಾವಾಣಿ' ಪತ್ರಿಕೆ ಪ್ರಾರಂಭವಾದಾಗ ಅದರ ಮೊದಲ ಸಂಪಾದಕರಾಗಿ ಕಾರ್ಯ ನಿರ್ವಹಿಸಿದವರು ಇವರೇ. ಮುಂದೆ 'ಜನ್ಮಭೂಮಿ' ಪತ್ರಿಕೆಯಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿದರು. ಪತ್ರಿಕಾರಂಗವನ್ನು ಪೂರ್ಣವಾಗಿ ಕೈಬಿಟ್ಟು ಸಾಹಿತ್ಯ ಕ್ಷೇತ್ರ ಪ್ರವೇಶಿಸಿದರು. ಇಲ್ಲಿಯೂ ಅವರು ತಮ್ಮ 'ಹೆಜ್ಜೆ ಗುರುತು' ಮೂಡಿಸಿದರು.

ಶಾಲಾವ್ಯಾಸಂಗವನ್ನು ಚಿಕ್ಕಂದಿನಲ್ಲಿಯೇ ಬಿಟ್ಟ ಪುಟ್ಟಸ್ವಾಮಯ್ಯನವರು,

ಸ್ವಂತ ಪರಿಶ್ರಮದಿಂದ ಕನ್ನಡದ ಜತೆಗೆ ಸಂಸ್ಕೃತ, ಹಿಂದಿ, ತೆಲುಗು ಮತ್ತು ಬಂಗಾಳಿ ಭಾಷೆಗಳಲ್ಲೂ ಪರಿಣತಿ ಪಡೆದುಕೊಂಡರು. ಜೊತೆಗೆ ಕರ್ನಾಟಕದ ಇತಿಹಾಸ ಮತ್ತು ಶಾಸನಗಳನ್ನೂ ಅಧ್ಯಯನ ಮಾಡಿದ್ದರು. 'ಓದುವ ಚಟ' ವನ್ನು ಅಂಟಿಸಿಕೊಂಡಿದ್ದ ಅವರು ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ಷೇಕ್ಸ್‌ಪಿಯರ್‌ನ ಎಲ್ಲ ನಾಟಕಗಳನ್ನೂ ಮತ್ತು ಡಿಕನ್ಸ್, ಸ್ಕಾಟ್ ಮುಂತಾದ ಪ್ರಸಿದ್ಧ ಲೇಖಕರ ಕಾದಂಬರಿಗಳನ್ನೂ ಓದಿದ್ದರಂತೆ!

ರಂಗಭೂಮಿಯ ಬಗ್ಗೆ ಚಿಕ್ಕಂದಿನಲ್ಲಿಯೇ ಇವರಿಗೆ ಒಲವು. ಆಗ್ಗೆ ಬೆಂಗಳೂರು ತುಳಸೀ ತೋಟದಲ್ಲಿ ಪಾರ್ಸೀ ಕಂಪೆನಿ ಪ್ರದರ್ಶಿಸುತ್ತಿದ್ದ ನಾಟಕಗಳಿಂದ ಮತ್ತು ವರದಾಚಾರ್ಯರ ನಾಟಕಗಳಿಂದ ಪ್ರಭಾವಿತರಾಗಿ ನಾಟಕ ರಚನೆಯನ್ನು ಆರಂಭಿಸಿದರು. ಅವರು ಬರೆದ ಮೊದಲ ನಾಟಕ 'ಷಾಜಹಾನ್' (೧೯೫೮) ಬಂಗಾಳಿ ನಾಟಕದ ಅನುವಾದ. 'ಗೌತಮಬುದ್ಧ' (೧೯೬೩) ಮೊದಲ ಸ್ವತಂತ್ರ ನಾಟಕ. ಇದು ರಂಗಭೂಮಿಯ ಮೇಲೆ ಪ್ರದರ್ಶನಗೊಂಡು ಜನಪ್ರಿಯವಾಯಿತು. ಪುಟ್ಟಸ್ವಾಮಯ್ಯನವರು ಬರೆದಿರುವ ನಾಟಕಗಳಲ್ಲಿ ಮುಖ್ಯವಾದವು: 'ಅಭಿನೇತ್ರಿ' (೧೯೫೩); 'ಅಕ್ಕಮಹಾದೇವಿ' (೧೯೬೧); 'ಬಭ್ರುವಾಹನ' (೧೯೬೫); 'ಸತೀತುಲಸೀ' (೧೯೬೪); 'ಕುರುಕ್ಷೇತ್ರ' (೧೯೬೪); 'ದಶಾವತಾರ' (೧೯೫೮); 'ಸಂಪೂರ್ಣ ರಾಮಾಯಣ' (೧೯೬೧) ಮತ್ತು 'ಪ್ರಚಂಡ ಚಾಣಕ್ಯ' (೧೯೭೦). 'ಕುರುಕ್ಷೇತ್ರ' ಮತ್ತು 'ದಶಾವತಾರ' ನಾಟಕಗಳು ಗುಬ್ಬಿರಂಗಭೂಮಿಯ ಮೇಲೆ ದೀರ್ಘಕಾಲ ಪ್ರದರ್ಶನಗೊಂಡು ಅಪಾರ ಯಶಸ್ಸನ್ನು ಕಂಡವು; ಪುಟ್ಟಸ್ವಾಮಯ್ಯನವರಿಗೆ ಕೀರ್ತಿಯನ್ನು ತಂದುಕೊಟ್ಟವು. ವೃತ್ತಿರಂಗಭೂಮಿಯ ಇತಿಹಾಸದಲ್ಲಿ ಈ ಎರಡು ನಾಟಕಗಳಿಗೆ ಗಣ್ಯ ಸ್ಥಾನ ಇದೆ.

ಪುಟ್ಟಸ್ವಾಮಯ್ಯನವರು ಕಾದಂಬರಿ ಪ್ರಕಾರದಲ್ಲಿ ಮಾಡಿರುವ ಕೆಲಸ ದೊಡ್ಡಮಟ್ಟದ್ದು. ಕರ್ನಾಟಕದ ಇತಿಹಾಸವನ್ನು ಶಾಸನಗಳ ಆಧಾರದಿಂದ ಅಧ್ಯಯನ ಮಾಡಿ ವಿಪುಲ ಸಾಮಗ್ರಿಯನ್ನು ಸಂಗ್ರಹಿಸಿಕೊಂಡಿದ್ದ ಅವರು ಅನೇಕ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದರು. ಅವರು ಬರೆದ ಮೊದಲ ಕಾದಂಬರಿ 'ರೂಪಲೇಖಾ' (೧೯೫೩) ವಿಜಯನಗರದ ಪ್ರೌಢದೇವರಾಯನ ಕಾಲಕ್ಕೆ ಸಂಬಂಧಿಸಿದ್ದು. ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿ ನಡೆದ ರಾಜಕೀಯ ಮತ್ತು ಸಾಂಸ್ಕೃತಿಕ ಕ್ರಾಂತಿಗೆ ಕಾರಣರಾಗಿದ್ದ ಬಸವಣ್ಣನವರ ಕಾಲಕ್ಕೆ ಸಂಬಂಧಿಸಿದಂತೆ ಪುಟ್ಟಸ್ವಾಮಯ್ಯನವರು ರಚಿಸಿರುವ

ಕಾದಂಬರಿಗಳಿವು: 'ಉದಯರವಿ' (೧೯೬೪); 'ರಾಜ್ಯಪಾಲ' (೧೯೬೫); 'ಕಲ್ಯಾಣೇಶ್ವರ' (೧೯೬೪); 'ನಾಗಬಂಧ' (೧೯೬೨); 'ಮುಗಿಯದ ಕನಸು' ಮತ್ತು 'ಕ್ರಾಂತಿ ಕಲ್ಯಾಣ' (೧೯೬೩). ಈ ಕಾದಂಬರಿಗಳ ಮಾಲೆಗೆ 'ಮಕುಟಮಣಿ' ಯಂತಿರುವುದು 'ಕ್ರಾಂತಿ ಕಲ್ಯಾಣ.' ಈ ಕಾದಂಬರಿಯಲ್ಲಿ ಬಸವಣ್ಣ ಮತ್ತು ಬಿಜ್ಜಳನ ಪಾತ್ರಗಳು ಜೀವಂತವಾಗಿ ಮೂಡಿವೆ. 'ಚಾಲುಕ್ಯ ತೈಲಪ' (೧೯೪೯); 'ಚಹಕಟ್ಟಿದ ಸಾಮ್ರಾಜ್ಯ' (೧೯೬೬); ಮತ್ತು 'ದ್ವಾ-ಸುಪರ್ಣ'—ಇವು ಪುಟ್ಟಸ್ವಾಮಯ್ಯನವರು ಬರೆದಿರುವ ಇತರ ಐತಿಹಾಸಿಕ ಕಾದಂಬರಿಗಳು. 'ಇತಿಹಾಸ ಪುಟಗಳಿಂದ' (೧೯೭೦) ಎಂಬುದು ಅವರು ಪ್ರಕಟಿಸಿರುವ ಒಂದು ಕಥಾ ಸಂಕಲನ.

ಪುಟ್ಟಸ್ವಾಮಯ್ಯನವರು ಬರೆದಿರುವ 'ದುರ್ಗಾಸಪ್ತಸತೀ' (೧೯೭೮) ಎಂಬುದು ದೇವೀ ಮಹಾತ್ಮ್ಯದ ಕಾವ್ಯರೂಪ. ಅವರ ಇನ್ನೊಂದು ಕೃತಿ: 'ಭಾರತದ ಬೆಳಗುತಿದೆ ಕನ್ನಡ ಜ್ಯೋತಿ' (೧೯೭೨) ಎಂಬುದು ಹಿರಿಯ ರಾಜಕಾರಣಿ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಜೀವನ ಚರಿತ್ರೆ.

ಪತ್ರಿಕೋದ್ಯಮ, ರಂಗಭೂಮಿ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಗಾಗಿ ಪುಟ್ಟಸ್ವಾಮಯ್ಯನವರಿಗೆ ಅನೇಕ ಪ್ರಶಸ್ತಿಗಳು ಲಭಿಸಿದವು. ಪತ್ರಿಕೋದ್ಯಮದಲ್ಲಿ ಸಲ್ಲಿಸಿದ ಸೇವೆಗಾಗಿ ೧೯೭೧ ರಲ್ಲಿ ಅವರಿಗೆ 'ಜನ್ಮಭೂಮಿ ಟ್ರಸ್ಟ್ ಪ್ರಶಸ್ತಿ' ಬಂತು. ಅವರ 'ಕ್ರಾಂತಿ ಕಲ್ಯಾಣ' ಕಾದಂಬರಿಗೆ ೧೯೬೫ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು. ಅದೇ ವರ್ಷ ಅವರನ್ನು ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ 'ಪ್ರಶಸ್ತಿ' ನೀಡಿ ಗೌರವಿಸಿತು.

'ಹಿರಿಯ ಬದುಕ'ನ್ನು ಬದುಕಿದ ಪುಟ್ಟಸ್ವಾಮಯ್ಯನವರು ತಮ್ಮ ಎಂಬತ್ತೇಳನೆಯ ವಯಸ್ಸಿನಲ್ಲಿ (೨೫-೧-೧೯೮೪) ಬೆಂಗಳೂರಿನಲ್ಲಿ ತೀರಿ ಹೋದರು.

ಎಸ್. ಚನ್ನಪ್ಪ

ಅನೇಕರು ಸಮುದ್ರದ ಗಂಭೀರ ಗರ್ಜನೆಯಂತೆ ಮಾತನಾಡುತ್ತಾರೆ. ಆದರೆ ಅವರ ಜೀವನ ಕೊಳೆತು ನಾರುವ ನೀರಿನ ಗುಂಡಿ.

—ಖಲೀಲ್ ಗಿಬ್ರಾನ್

ಅಮೆರಿಕಾದ ಜನಜೀವನ

ಹಳೇದನ್ನು ಎಸೆವ ಸಂಪ್ರದಾಯ : ಯಾವ ವಸ್ತುವೇ ಆಗಲಿ, ಹಳೆಯದಾದ ಕೂಡಲೆ ದೂರಕ್ಕೆಸೆದು ಹೊಸದನ್ನು ಕೊಳ್ಳುವುದು ಅಲ್ಲಿಯ ಸಂಪ್ರದಾಯ. ಹಳೇದರ ರಿಪೇರಿ ಎಂದರೆ ಅವರಿಗಾಗದು. ಇದು ಕಾರಿಗೆ ಮಾತ್ರ ಅನ್ವಯಿಸುವುದಿಲ್ಲ. ವೇಷಭೂಷಣಗಳು, ಕಾಲಿಗೆ ಹಾಕುವ ಬೇರೆ ಬೇರೆ ತರದ ಪಾದರಕ್ಷೆಗಳು, ಗೃಹೋಪಕರಣಗಳು—ಎಲ್ಲವನ್ನೂ 'ಗಾರ್ಬೇಜಿಗೆ' ಆಹುತಿ ಗೈಯ್ಯುವುದು–ಸರ್ವೇಸಾಮಾನ್ಯ.

ಸಣ್ಣಪುಟ್ಟ ರಿಪೇರಿಯಾದರೆ ಅವರವರೇ ಮಾಡಿಕೊಳ್ಳುತ್ತಾರೆ. 'Do it yourself' ನಿನ್ನ ಕೆಲಸ ನೀನೇ ಮಾಡು.

ವೇಷಭೂಷಣಗಳ 'ಫ್ಯಾಶನ್'ಗಳು ದಿನದಿನಕ್ಕೆ ಬದಲಾಗುತ್ತಿರುತ್ತವೆ. ಹಾಗಾಗಿ ಕೆಲವರು ಹಳೆಯ ಬಟ್ಟೆಗಳನ್ನು ಸೇವಾ ಸಂಸ್ಥೆಗಳಿಗೆ ದಾನಮಾಡುತ್ತಾರೆ. ಇಲ್ಲವೇ ಗಾರ್ಬೇಜ್ ಲಾಂಗಳಲ್ಲಿ ಸಾಗಹಾಕುತ್ತಾರೆ. ನಗರಗಳಲ್ಲಿ ಹೊಲಿಗೆಯವರಾಗಲಿ, ಶೂ ರಿಪೇರಿ ಮಾಡುವವರಾಗಲಿ ಸಿಗುವುದೇ ಅಪರೂಪ. ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ತಯಾರಾದ ಸಿದ್ಧ ಉಡುಪುಗಳು, ಸಿದ್ಧ ಶೂಗಳು ಮಾರಾಟಕ್ಕೆ ದೊರಕುತ್ತವೆ. ಬಟ್ಟೆಕೊಂಡು ಹೊಲಿಸಿಕೊಳ್ಳುವುದು ಬಹುಕಷ್ಟ ಹಾಗೂ ಬಹುವೆಚ್ಚದ ಕೆಲಸ. ಮನೆಯಲ್ಲಿರುವ ಹೊಲಿಗೆ ಮಿಶನ್‌ಗಳ ಮೂಲಕ ಸಣ್ಣಪುಟ್ಟ ಹೊಲಿಗೆ, ರಿಪೇರಿ ಮಾಡಿಕೊಳ್ಳುವುದಿದೆ. ಆದರೆ ರಿಪೇರಿ ಮಾಡುವುದಕ್ಕಿಂತ ಹೊಸದು ಕೊಳ್ಳುವುದೇ ಉತ್ತಮ–ಎಂಬ ಮನೋಭಾವ ಸಾಧಾರಣವಾಗಿದೆ.

ಹಾಲು, ಪಾನೀಯಗಳನ್ನು ತುಂಬಿಸಿದ ಬಾಟ್ಲಿಗಳು, ಹಣ್ಣುಗಳನ್ನು ತುಂಬಿಸಿದ್ದ ಪ್ಲಾಸ್ಟಿಕ್ ಚೀಲಗಳು, ದಿನನಿತ್ಯ ಬರುವ ವಾರ್ತಾಪತ್ರಿಕೆಗಳು, ಜಾಹೀರಾತು ಪತ್ರ, ಪುಸ್ತಕಗಳು–ಇವನ್ನೆಲ್ಲ ಕೇಳುವವರೇ ಇಲ್ಲ. ಕ್ರಯ ಕೊಟ್ಟುಕೊಂಡುಕೊಳ್ಳುವವರಂತು ಇಲ್ಲವೇ ಇಲ್ಲ. ಹಾಗಾಗಿ ಇವಕ್ಕೆಲ್ಲ ಗಾರ್ಬೇಜ್ ಚೀಲಗಳೇ ಗತಿ.

ಪ್ರತಿವಾರ ಮನೆ ಬಾಗಿಲಿಗೆ ಕಸದ ಚೀಲ (ಗಾರ್ಬೇಜ್) ಕೊಂಡೊಯ್ಯುವ ದೊಡ್ಡಲಾರಿ ಬರುತ್ತದೆ. ಆ ದಿನ ಬೇಡದ್ದನ್ನೆಲ್ಲ ದೊಡ್ಡ ಕಸದ ಚೀಲದಲ್ಲಿ ಹಾಕಿ ಮನೆಬಾಗಿಲಲ್ಲಿಟ್ಟರೆ ಸಾಕು. ಅವನ್ನೆಲ್ಲ ಆ ಲಾರಿ ಕೊಂಡೊಯ್ದು ಎಲ್ಲೋ ಹೊಂಡದಲ್ಲಿ ಸುರಿಯುತ್ತದೆ. ಭಾರತದ ಹಳೇ ಪೇಪರ್ ವ್ಯಾಪಾರಿಗಳು ಹೋದರೆ ಹಳೆಯ ಪೇಪರ್ ಬ್ರಹ್ಮಾಂಡವನ್ನೇ ಧರ್ಮಕ್ಕೆ ಹೊತ್ತುತರಬಹುದು.

ಅಮೆರಿಕಾದವರಿಗೆ ಅಪಾರ ಸಂಪತ್ತಿದೆ. ಎಷ್ಟು ಎಸೆದರೂ ಮುಗಿಯದ ಕಾರಣ ದರ್ಬಾರ್ ನಡೆಸುತ್ತಾರೆ. ನಮ್ಮಂತೆ ಅವರು 'ಕಸದಿಂದ ರಸ' ತೆಗೆಯಬೇಕಾಗಿಲ್ಲ.

ಕಾರು, ಮನೆ: ಏಳೆಂಟು ವರ್ಷಗಳ ಹಿಂದೆ ಅರಬ್ ರಾಷ್ಟ್ರಗಳೆಲ್ಲ ಒಗ್ಗಟ್ಟಾಗಿ ಪೆಟ್ರೋಲ್ ಬೆಲೆಯನ್ನು ಒಂದಕ್ಕೈದಾರು ಪಾಲು ಏರಿಸಿದರು. ಆದರೆ ಅಮೆರಿಕಾದಲ್ಲಿ ಪೆಟ್ರೋಲ್ ಬೆಲೆ, ಹೆಚ್ಚುಕಡಿಮೆ ಇಮ್ಮಡಿಯಾಯಿತಲ್ಲದೆ ಅದಕ್ಕೆ ಮೀರದಂತೆ ನೋಡಿಕೊಂಡರು. ದಕ್ಷಿಣಅಮೆರಿಕಾದಿಂದ ಹೆಚ್ಚಿಗೆ ಎಣ್ಣೆ ತರಿಸಿ, ತಮ್ಮ ತೈಲೋತ್ಪಾದನೆಯನ್ನು ಹೆಚ್ಚಿಸಿ, ಬೆಲೆ ಮಿತಿಮೀರದಂತೆ ನೋಡಿಕೊಂಡರು. ಏಕೆಂದರೆ ಅಲ್ಲಿಯ ಜನಜೀವನವೇ ಕಾರು, ಟ್ರಕ್ಕುಗಳನ್ನು ಹೊಂದಿಕೊಂಡಿದೆ. ಹೆಚ್ಚಿನವರೆಲ್ಲ ಆಗ, ದೊಡ್ಡದೊಡ್ಡ ಕಾರುಗಳನ್ನು ಬಿಟ್ಟು ಪೆಟ್ರೋಲ್ ಹೆಚ್ಚು ಕುಡಿಯದ ಸಣ್ಣ ಕಾರುಗಳನ್ನು ಕೊಂಡುಕೊಳ್ಳಲಾರಂಭಿಸಿದರು. ಹಾಗಾಗಿ ಪೆಟ್ರೋಲ್ ಬಳಕೆ ಕಡಿಮೆಯಾಯಿತು. ಬೆಲೆಯೂ ಹತೋಟಿ ತಪ್ಪಲಿಲ್ಲ. ಈಗಲೂ ಗೆಲನ್ನಿಗೆ (ಸಾಮಾನ್ಯ ಐದೂವರೆ ಲೀಟರ್) ಪೆಟ್ರೋಲ್ ಬೆಲೆ ಒಂದೂಕಾಲು ಡಾಲರಿಗಿಂತಲೂ ಕಡಿಮೆ ಇದೆ. ಆದರೆ ನಾವಿಲ್ಲಿ ಅದರ ಐದಾರು ಪಾಲು ಹೆಚ್ಚು ಬೆಲೆ ಕೊಡುತ್ತಿದ್ದೇವೆ.

ವಾಸವಿರುವುದಕ್ಕೆ ನಗರಗಳಲ್ಲಿ ಕಿರುಮನೆಗಳ (Apartments) ಸಮುದಾಯವುಳ್ಳ ದೊಡ್ಡದೊಡ್ಡ ಕಟ್ಟಡಗಳಿರುತ್ತವೆ. ದೊಡ್ಡ ಕಂಪೆನಿಗಳವರು ಎಲ್ಲ ಸವಲತ್ತುಗಳನ್ನೊಳಗೊಂಡ ಸ್ವಯಂಪೂರ್ಣ ಗೃಹಕೂಟಗಳನ್ನು ನಿರ್ಮಿಸಿದ್ದಾರೆ. ನ್ಯಾಯ ಬಾಡಿಗೆಗೆ ಅವು ದೊರೆಯುತ್ತವೆ. ಪ್ರತ್ಯೇಕ ಸ್ವಂತ ಮನೆ ಬೇಕೆಂದಿದ್ದರೂ ನಿರ್ಮಿತ ಗೃಹಗಳೂ ಸಿಗುತ್ತವೆ. ನಗರದ ಹೊರಗೆ ದೊರಕುವ ಖಾಲಿ ನಿವೇಶನಗಳಲ್ಲಿ ಮನೆಕಟ್ಟಿಸಿಕೊಡುವ ಖಾಸಗೀ ಕಂಪೆನಿಗಳೂ ಇವೆ.

ಅವುಗಳ ಬೆಲೆಯ ೧೦% ಅಥವಾ ೧೫% ಕೊಟ್ಟರೆ ಉಳಿದುದನ್ನು ಪಾವತಿ ಮಾಡಲು ಬ್ಯಾಂಕಿನವರು ಮುಂದೆ ಬರುತ್ತಾರೆ. ಪ್ರತಿತಿಂಗಳು ಕಂತುಗಳಲ್ಲಿ ಆ ಸಾಲ ಪೂರೈಸಿ ಸ್ವಂತ ಮನೆಯ ಮಾಲೀಕನಾಗುವುದು ಸುಲಭ. ಬಾಡಿಗೆ ಬದಲಾಗಿ ಸಾಲದ ಕಂತು ಕೊಡುತ್ತ ಬಂದರೆ ಸಾಕು. ಈ ಎಲ್ಲ ಸೌಕರ್ಯಗಳಿರುವುದರಿಂದ ಸಂಪಾದಿಸತೊಡಗಿದೊಡನೆಯೇ ಸ್ವಂತ ಕಾರು, ಸ್ವಂತ ಮನೆ–ಎಲ್ಲ ಮಾಡಿಕೊಳ್ಳಬಹುದು.

ಆದರೆ ಭಾರತದಲ್ಲಿ ಸೇವೆಯಿಂದ ನಿವೃತ್ತನಾಗುವ ಹೊತ್ತಿಗೆ ಒಬ್ಬ ಪ್ರಾಮಾಣಿಕ ಮನುಷ್ಯ ಒಂದು ಸ್ವಂತ ಮನೆ ಮಾಡಿಕೊಂಡರೆ–ಅದೊಂದು

ದೊಡ್ಡಸಾಧನೆ! ಈ ಕಾರಣದಿಂದಾಗಿಯೇ ನಮ್ಮ ಯುವಕರು ಒಮ್ಮೆ ಅಮೆರಿಕಾ ನೋಡಿದರೆ ಮತ್ತೆ ಹಿಂದೆ ಬರಲು ಮನಸ್ಸು ಮಾಡುವುದಿಲ್ಲ.

ವಿವಾಹವೂ ಒಂದು ವ್ಯಾಪಾರ: ಹೀಗೆ ಎಲ್ಲ ವಿಚಾರದಲ್ಲೂ ಅಮೆರಿಕಾ ಎಂದರೆ ದೇವಲೋಕ, ಅಲ್ಲಿರುವವರೆಲ್ಲ ಸದಾ ಸುಖಿಗಳು–ಎಂದು ಭಾವಿಸ ಬೇಕಾಗಿಯೂ ಇಲ್ಲ. ಅಲ್ಲಿಯೂ ಕೆಲವೆಲ್ಲ ಕಳಂಕರಾಶಿಗಳಿವೆ.

ಸಂಸಾರದಲ್ಲಿ ಗಂಡಹೆಂಡಿರೊಳಗೆ ಪ್ರೇಮ, ಹಿರಿಯರಲ್ಲಿ ಗೌರವ, ವಿಶ್ವಾಸ, ಕಿರಿಯರ ಮೇಲೆ ಪ್ರೀತಿ, ಆದರ–ಇವೆಲ್ಲ ದಿನದಿನಕ್ಕೆ ಕಡಿಮೆಯಾಗುತ್ತಿವೆ. ಪ್ರತಿಮೂರು ವಿವಾಹಗಳಲ್ಲಿ, ಒಂದು ವಿವಾಹ, ವಿಚ್ಛೇದನದಲ್ಲಿ ಪರ್ಯವಸಾನ ಗೊಳ್ಳುತ್ತದೆ. ಈ ಸಂಖ್ಯೆ ಏರುತ್ತಿದ್ದು ಅದು ಈಗ, ಎರಡರಲ್ಲಿ ಒಂದು–ಎಂದಾಗುವುದರಲ್ಲಿದೆಯಂತೆ.

ವಿವಾಹಪೂರ್ವ ಪ್ರೇಮ, ಸಂಭೋಗಗಳು–ನೀತಿಬಾಹಿರವೆಂದು ತಿಳಿಯಲ್ಪಡುವುದಿಲ್ಲ. ಹೈಸ್ಕೂಲು ವಿದ್ಯಾರ್ಥಿನಿಯರು ಗರ್ಭವತಿಯರಾಗುವುದು ಅಪರೂಪವಲ್ಲ. ಇದು ಹುಡುಗಿಗೆ ಅಥವಾ ಕುಟುಂಬಕ್ಕೆ ಕಳಂಕವೆಂದು ಭಾವಿಸಲ್ಪಡುವುದಿಲ್ಲ. ಅವರಿಗೆ ಎಲ್ಲ ವಿಧದ ಸೌಕರ್ಯಗಳನ್ನು ಸರ್ಕಾರ ಒದಗಿಸುತ್ತದೆ. ಗರ್ಭಪಾತ ಅಥವಾ ಹೆರಿಗೆ ನಡೆಸಲು ಕಷ್ಟವಿಲ್ಲ.

ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಮಾರಬಾರದೆಂದು ಕಾನೂನಿದೆ. ಆದರೂ ಮದ್ಯಪಾನ ಮಾಡುವ, ಗಾಂಜಾ ಸೇವಿಸುವ ಯುವಕರ ಸಂಖ್ಯೆ ಏರುತ್ತಿದೆ. ಗಲಭೆ ಎಬ್ಬಿಸಿ ಅಂಥವರು ದೊಡ್ಡ ಸಮಸ್ಯೆಗಳನ್ನುಂಟು ಮಾಡುತ್ತಾರೆ. ಮಾತಾಪಿತರ ಹತೋಟಿ ಅಂತಹ ಯುವಕರ ಮೇಲೆ ಸ್ವಲ್ಪವೂ ಇರುವುದಿಲ್ಲ. ಶೇಕಡಾ ಹತ್ತರಷ್ಟಿರುವ ಕರಿಜನರು ಕೆಲವೇಳೆ ಕಷ್ಟದ ನಿಕೃಷ್ಟ ಜೀವನ ನಡೆಸುತ್ತಾರೆ. ಎಷ್ಟೋ ವೇಳೆ ಅವರೆಲ್ಲ ದಂಗೆಧರೋಡೆ ನಡೆಸುವುದೂ ಇದೆ. ಹಿರಿಯರ ಹಿಡಿತ ಕಿರಿಯರ ಮೇಲೆ ಸಾಕಷ್ಟಿಲ್ಲದ್ದರಿಂದ ಶಾಲಾಕಾಲೇಜು ಗಳಲ್ಲಿ ಶಿಸ್ತು ಸಂಯಮ ಕಾಪಾಡಿಕೊಳ್ಳುವುದು ಕಠಿನತರವಾಗಿದೆ.

ಈ ವಿಚಾರದಲ್ಲಿ ಸರ್ಕಾರದಿಂದ ನೇಮಿತವಾದ ತಜ್ಞಸಮಿತಿಯವರು Teenagers are in Troubles—ಹದಿಹರೆಯದವರು ತೊಂದರೆ ಯಲ್ಲಿದ್ದಾರೆ–ಎಂದು ಮೊದಲಾಗಿ ಹೇಳಿದ್ದಾರೆ. ಅದಕ್ಕೆ ಕೆಲ ಪರಿಹಾರ ಮಾರ್ಗಗಳನ್ನೂ ಸೂಚಿಸಿದ್ದಾರೆ. ಸರ್ಕಾರವೂ ಈ ವಿಚಾರದಲ್ಲಿ ಎಚ್ಚರ ವಹಿಸಿ, ದೇಶದ ಪ್ರಗತಿ ಕುಂಠಿತವಾಗದಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಕೊರಿಯಾ ಯುದ್ಧ, ವಿಯೆಟ್‌ನಾಮ್ ಯುದ್ಧ, ಮುಂದಿನ ಯುದ್ಧಗಳ

ತಯಾರಿ—ಈ ಮೊದಲಾದ ಕಾರಣಗಳಿಂದಾಗಿ ಅಲ್ಲಿ ಗಂಡಸರಿಗಿಂತ ಹೆಂಗಸರ ಸಂಖ್ಯೆ ಹೆಚ್ಚಾಗಿದೆ. ಗಂಡು ಹೆಣ್ಣು ೯೫:೧೦೦ರ ಪ್ರಮಾಣದಲ್ಲಿದ್ದಾರೆ. ಅದರಿಂದಾಗಿ ಹೆಂಗಸರೂ ಸರಿಸರಿ ಕೆಲಸ ಮಾಡುತ್ತಾರೆ. ಏಕಾಕಿ ಮಹಿಳೆ ಸಹ ತನ್ನ ಕಾರು ಓಡಿಸಿಕೊಂಡು ಊರಿಂದೂರಿಗೆ ನಿರ್ಭಯವಾಗಿ ಹೋಗಿ ಬರುತ್ತಾಳೆ. ದೊರಕಿದ ಒಳ್ಳೆಯ ಗಂಡಸಿನ ಮೇಲೆ ಬಲೆಬೀಸುತ್ತಾಳೆ. ಮದುವೆ ಮಕ್ಕಳ ಜಂಜಾಟ—ಹೆಚ್ಚಿನವರಿಗೆ ಬೇಡವಾಗಿದೆ. ಲೈಂಗಿಕ ಸುಖಮಾತ್ರ ಸಾಕೆಂದಾಗಿದೆ. ಮಕ್ಕಳಾದರೆ ಸ್ವತಂತ್ರ ಜೀವನ, ವಿವಾಹ ವಿಚ್ಛೇದನಗಳಿಗೆ ಅಡ್ಡಿ–ಎಂದು ಭಾವಿಸುವವರು ಹೆಚ್ಚು.

ಕೆಲದಂಪತಿಗಳು ವಯಸ್ಸಾದ ಮೇಲೆ ಮಕ್ಕಳು ಬೇಕೆಂದು ತೋರಿದರೆ ದತ್ತು ಮಕ್ಕಳನ್ನು ಹಣತೆತ್ತು ಕೊಂಡು ಸಾಕುತ್ತಾರೆ. ಬಿಳಿಬಣ್ಣದ ಭಾರತದ ಮಕ್ಕಳಿಗೆ ಅಲ್ಲಿ ಒಳ್ಳೆಯ ಬೇಡಿಕೆ ಇದೆ. ಅವನ್ನೊದಗಿಸುವ ಕೆಲವು ಸಂಘಸಂಸ್ಥೆಗಳೂ ಇವೆ. ಒಂದೆರಡು ಸಾವಿರ ಡಾಲರಿಗೆ ಒಂದು ಮಗು ದೊರಕುವುದಂತೆ. ಒಳ್ಳೆಯ ನಾಯಿಯ ಬೆಲೆಗಿಂತ ಸ್ವಲ್ಪ ಹೆಚ್ಚು.

ಇತ್ತೀಚಿನ ವೈದ್ಯವಿಜ್ಞಾನ ಸಂಶೋಧನೆಯ ಪ್ರಯೋಜನ ಪಡೆದುಕೊಳ್ಳುವ ದಂಪತಿಗಳೂ ಇದ್ದಾರೆ. ಗಟ್ಟಿಮುಟ್ಟಾದ ಹೆಂಗಸಿನ ಗರ್ಭವನ್ನು ಒಂದು ವರ್ಷಕ್ಕೆ ಬಾಡಿಗೆಗೆ ಪಡೆದು ಕೃತಕ ಗರ್ಭದಾನದ ಮೂಲಕ ಮಗು ಪಡೆಯುವವರೂ ಇದ್ದಾರೆ. ಸಾಧಾರಣ ಹತ್ತು ಸಾವಿರ ಡಾಲರಿಗೆ ಬಾಡಿಗೆಗೆ ಗರ್ಭ ದೊರಕುವುದಂತೆ. ದೇಹ ಸಂಪರ್ಕವಿಲ್ಲದ ಕೃತಕ ಗರ್ಭಾಧಾನವಾದ್ದರಿಂದ ಆ ಹೆಂಗಸಿನ ಪಾತಿವ್ರತ್ಯಕ್ಕೆ ಭಂಗವಿಲ್ಲದ ಕಾರಣ, ಗಂಡಂದಿರ ಆಕ್ಷೇಪವೂ ಬರುವುದಿಲ್ಲವಂತೆ. 'Womb rent Service' 'ಬಾಡಿಗೆಗೆ ಗರ್ಭ ಒದಗಿಸುವ ಸೇವೆ' ಗೈಯ್ಯುವ ಕೆಲವು ಸಂಸ್ಥೆಗಳೂ ತಲೆಎತ್ತಿವೆಯಂತೆ. ಇದರಿಂದ ಸಮರ್ಥ ಹೆಂಗಸರಿಗೆ ಹಣ ಸಂಪಾದಿಸುವ ಹೊಸ ಮಾರ್ಗ ದೊರೆಕಿದಂತೆಯೂ ಆಗಿದೆಯಂತೆ. ಬಿಡುವಿಲ್ಲದ ಉದ್ಯೋಗಾಸಕ್ತ ಗಂಡಹೆಂಡರಿಗೆ, ರಜೆ ಪಡೆಯದೆ ಮಗು ಪಡೆಯುವ ಸದವಕಾಶ (?) ಈ ಮೂಲಕ ದೊರಕುವುದಂತೆ.

ಏನಿದ್ದರೂ ಏರುತ್ತಿರುವ ಜನಸಂಖ್ಯೆಯ ಸಮಸ್ಯೆ ಅಮೆರಿಕಾದಲ್ಲಿಲ್ಲ. ಜನಸಂಖ್ಯೆ–ಅದರಲ್ಲೂ ಯುವಕರ, ಮಕ್ಕಳ ಸಂಖ್ಯೆ ಕುಂದುತ್ತಿರುವುದೇ ಅವರ ತಲೆನೋವಿಗೆ ಕಾರಣವಾಗಿದೆ. ಈಗ ಅಲ್ಲಿಯ ಜನಸಂಖ್ಯೆಯ ಅರ್ಧಾಂಶ ೫೦ ವರ್ಷಕ್ಕೂ ಮೀರಿದವರಂತೆ. ಅಲ್ಲಿ ಉದ್ಯೋಗದಿಂದ ಜನರು ನಿವೃತ್ತರಾಗುವುದು ೬೫ನೆಯ ವಯಸ್ಸಿನಲ್ಲಿ. ಸಾಧ್ಯವಿದ್ದರೆ ಮತ್ತು ಮುಂದುವರಿಯಬಹುದು. ಈ

ಶತಮಾನ ಉರುಳುವ ವೇಳೆ ಶೇಕಡಾ ೬೦ ಜನಸಂಖ್ಯೆ ೬೦ ವರ್ಷಕ್ಕೂ ಮೀರಿದವರಾಗಬಹುದಂತೆ. ಅಂದರೆ ಜನಸಂಖ್ಯೆಯ ಅರ್ಧಕ್ಕೂ ಮೀರಿದ ಜನ ಮುದುಕರೆಂದಾಗಬಹುದಂತೆ. ಆದರೆ, ಅಲ್ಲಿಯ ಮುದುಕರೂ ಹೆಚ್ಚಾಗಿ ಗಟ್ಟಿ ಮುಟ್ಟಾಗಿರುತ್ತಾರೆ. ವೃದ್ಧರಿಗಾಗಿ ಸರ್ಕಾರದಿಂದ ನಡೆಸಲ್ಪಡುವ 'ನರ್ಸಿಂಗ್ ಹೋಂ' ಎಂದು ಕರೆಯಲ್ಪಡುವ ವೃದ್ಧಾಶ್ರಮಗಳು ಅಲ್ಲಲ್ಲಿವೆ. ಮಕ್ಕಳ ಮೇಲೆ ಹೊರೆಯಾಗಿರುವ ವೃದ್ಧರು ಕಡಿಮೆ.

ಎಚ್ಚೆತ್ತ ಪ್ರಜೆ: ಜನಸಾಮಾನ್ಯರು ಮತ್ತು ಉದ್ಯೋಗಸ್ಥರು, ತಮ್ಮ ಆರೋಗ್ಯಪಾಲನೆಗಾಗಿ ವಿಮೆ (Health Insurence) ಮಾಡಿಸಿಕೊಂಡಿರುತ್ತಾರೆ. ಕಾಯಿಲೆ ಬಿದ್ದರೆ ತಮಗೆ ಒಪ್ಪಿಗೆಯಾಗುವ ವೈದ್ಯರ ಮೂಲಕ ಚಿಕಿತ್ಸೆ ಮಾಡಿಸಿಕೊಳ್ಳುತ್ತಾರೆ. ಅದರ ವೆಚ್ಚದ ಬಿಲ್ಲನ್ನು ವೈದ್ಯರು ವಿಮಾ ಕಂಪೆನಿಗೆ ಕಳಿಸಿಕೊಡುತ್ತಾರೆ. ಅವರು ಆ ಬಿಲ್ ಮೊತ್ತವನ್ನು ಪಾವತಿ ಮಾಡುತ್ತಾರೆ. ಹಾಗಾಗಿ ನಮ್ಮಲ್ಲಿರುವಂತೆ–ಕಾಯಿಲೆಯ ನೋವು ಮತ್ತು ಹಣ ವೆಚ್ಚವಾಗುವ ನೋವು—ಈ ಎರಡರಿಂದಲೂ ಜನ ನರಳಬೇಕಾಗಿಲ್ಲ.

ವೈದ್ಯನು ನಡೆಸುವ ಚಿಕಿತ್ಸೆ ಸರಿಯಾದ ರೀತಿಯಲ್ಲಿ ನಡೆಯದೆ ರೋಗಿಗೆ ತೊಂದರೆಯಾದರೆ ಡಾಕ್ಟರರ ಮೇಲೆ ರೋಗಿ ದಾವಾಹಾಕಲೂ ಬಹುದು. ಆಗ ಡಾಕ್ಟರ್ ರೋಗಿಗೆ ದಂಡ ತೆರಬೇಕಾಗುವ ಸಂದರ್ಭವೂ ಇದೆ. ಅದಕ್ಕಾಗಿಯೇ ಅಲ್ಲಿಯ ಡಾಕ್ಟರುಗಳು ಸಹ, ತಮ್ಮ ಸಂರಕ್ಷಣೆಗಾಗಿ (Mal-Practice Insurence) ದಂಡತೆರಬೇಕಾದಾಗ ಒದಗುವ ವಿಮೆಯನ್ನು ಮಾಡಿಸಿಕೊಳ್ಳುತ್ತಾರೆ. ವಿಮಾ ಕಂಪೆನಿಯವರು ಕೋರ್ಟಿನಲ್ಲಿ ಸಾಧಿಸಿದ ನಂತರ ದಂಡತೆರುತ್ತಾರೆ.

ಭಾರತದಲ್ಲೂ ಇಂತಹ ವ್ಯವಸ್ಥೆ ಅಗತ್ಯವೆಂದು ಕೆಲವೇಳೆ ತೋರುತ್ತದೆ. ಅಜೀರ್ಣದಿಂದ ಹೊಟ್ಟೆನೋವಾದರೂ 'ಅಪೆಂಡಿಸೈಟೀಸ್' ಎಂಬ ದೊಡ್ಡ ಹೆಸರುಹಾಕಿ ಶಸ್ತ್ರಚಿಕಿತ್ಸೆ ನಡೆಸಿ, ಸಾವಿರಾರು ರೂಪಾಯಿ ಕೀಳುವ 'ಕೆಲ ನರ್ಸಿಂಗ್‌ಹೋಂ'ಗಳೂ ನಮ್ಮಲ್ಲಿವೆ. ಕೊನೆಗೆ ರೋಗಿ ಸತ್ತುಹೋದರೆ ಹಣ ಕೊಡದೆ ಹೆಣ ಕೊಡದ ಡಾಕ್ಟರುಗಳೂ ಇದ್ದಾರೆ. ಅಂತಹ ಡಾಕ್ಟರುಗಳ ಮೇಲೆ ಒಂದು ತರದ ತಡೆಹಿಡಿತವಿರುವುದು ಅಗತ್ಯವಲ್ಲವೇ ?

ನಗರದ ನೀರು ಸರಬರಾಯಿಯಲ್ಲಿ ದೋಷವಿದ್ದರೆ ಪುರಸಭಾಧಿಕಾರಿಗಳ ಮೇಲೆ ಕೇಸ್ ಹಾಕಬಹುದು. ರಸ್ತೆಯಲ್ಲಿ ಹೊಂಡಬಿದ್ದು ಕಾರಿಗೆ ಜಖಂ ಆದರೆ, ಆ ನಷ್ಟಕ್ಕೆ ನಗರ ಸಭೆಯ ಮೇಲೆ ದಾವಾ ಹಾಕಬಹುದು. ಒಬ್ಬರ

ನಾಯಿ ಇನ್ನೊಬ್ಬನಿಗೆ ಕಚ್ಚಿದರೆ ಅದರ ಯಜಮಾನನ ಮೇಲೆ ದಾವಾ ಹಾಕಬಹುದು.

ಅಲ್ಲಿಯ ಒಬ್ಬ ಜೈಲ್ ಅಧಿಕಾರಿಯು, ಇದಿರು ನಿಂತು ಅಡ್ಡಮಾತಾಡಿದ ಅಪರಾಧಿಯ ಕೆನ್ನೆಗೆ ಕಾರಾಗೃಹದೊಳಗೆ ಬಲವಾಗಿ ಬಾರಿಸಿದನಂತೆ. ಮರುದಿನ ಊದಿದ ಕೆನ್ನೆಯ ಅಪರಾಧಿ, ಜೈಲರನ ಮೇಲೆ ತನ್ನ ಲಾಯರ ಮೂಲಕ ದಾವೆ ಹಾಕಿಸಿದನಂತೆ. ಆ ಹೊಡೆತದಿಂದಾಗಿ ತನ್ನ ಮುಖ ಸೌಂದರ್ಯಕ್ಕೆ ಭಂಗ ಬಂದಿದೆ; ಪರಿಹಾರ ಧನವಾಗಿ ಅರ್ಧಮಿಲಿಯ ಡಾಲರ್ ಕೊಡಬೇಕೆಂದು ಸಾಧಿಸಿದನಂತೆ. ಅಷ್ಟೇ ಅಲ್ಲದೆ, ಅಂತಹ ಶೀಘ್ರ ಕೋಪಿ ಜೈಲರನನ್ನು ಕೆಲಸದಲ್ಲಿಟ್ಟುಕೊಂಡ ಸರ್ಕಾರದ ಮೇಲೂ ದಾವೆ ಚಲಾಯಿಸಿದನಂತೆ. ಇದು ಇತ್ತೀಚೆಗೆ ಅಲ್ಲಿಯ ಪತ್ರಿಕೆಗಳಲ್ಲಿ ದೊಡ್ಡ ಅಕ್ಷರಗಳಲ್ಲಿ ಪ್ರಕಟಗೊಂಡ ಸುದ್ದಿ.

ಈ ರೀತಿ ತಮ್ಮತಮ್ಮ ಹಕ್ಕನ್ನು ಬಿಟ್ಟುಕೊಡುವವರು, ಅಲ್ಲಿ ಅಪರೂಪ. ಲಾಯರುಗಳಿಗಂತು ಸಮೃದ್ಧಿಯ ದೇಶ. ಅಂತು ಪ್ರಜಾಪ್ರಭುತ್ವದ ನಿಜರೂಪ ಕಾಣಬೇಕಾದರೆ ಅಮೆರಿಕದ ಆಡಳಿತ ನೋಡಿ ಬರಬೇಕು.

ಯಾವಾಗಲೂ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಎಚ್ಚೆತ್ತ ವಿವೇಕ ಶೀಲ ಪ್ರಜೆ ಇರಬೇಕು. ಭ್ರಷ್ಟಾಚಾರ, ವಂಚನೆಗಳನ್ನು ಬಯಲಿಗೆಳೆದು, ಅಧಿಕಾರಸ್ಥರನ್ನು ಸರಿದಾರಿಯಲ್ಲಿ ನಡೆಯುವಂತೆ ಮಾಡುವ ಚೈತನ್ಯವಿರಬೇಕು. ಭ್ರಷ್ಟಾಚಾರ ನಡೆಸಿದರೆ, ರಾಷ್ಟ್ರಾಧ್ಯಕ್ಷರನ್ನು ಸಹ ಪದಚ್ಯುತಗೊಳಿಸುವ ಅಧಿಕಾರವನ್ನು ಆ ಜನ ಇಟ್ಟುಕೊಂಡಿದ್ದಾರೆ.

ನಮ್ಮದು ಪ್ರಪಂಚದಲ್ಲೇ ದೊಡ್ಡ ಪ್ರಜಾಪ್ರಭುತ್ವ–ಎಂದು ಮೊದಲಾಗಿ ಹೇಳುತ್ತಿದ್ದೇವೆ. ಆದರೆ ನಮ್ಮ ಪ್ರಜೆಗಳ, ಪ್ರಜಾಪ್ರತಿನಿಧಿಗಳ ಯೋಗ್ಯತೆ; ಅರ್ಹತೆ, ಉತ್ತಮಗೊಳ್ಳದಿದ್ದರೆ ನಮ್ಮ ದೇಶ ಪ್ರಬುದ್ಧ ರಾಷ್ಟ್ರಗಳಲ್ಲೊಂದಾಗಲು ಎಂದಿಗೂ ಸಾಧ್ಯವಿಲ್ಲ. ಈ ವಿಚಾರದಲ್ಲಿ ನಾವು ಅಮೆರಿಕಾದ ಪ್ರಜೆಗಳಿಂದ ಕಲಿಯಬೇಕಾದ್ದು ತುಂಬ ಇದೆ.

ಅಮೆರಿಕಾದ ಜನಸಾಮಾನ್ಯರಲ್ಲಿ ದೈವಭಕ್ತಿ, ಗುರುಹಿರಿಯರ ಮೇಲಿನ ಗೌರವ—ಇವೆಲ್ಲ ಕಡಿಮೆಯಾದದ್ದರಿಂದ, ಮಾನಸಿಕ ಅಶಾಂತಿ, ಅತೃಪ್ತಿ, ಬೇಸರ—ಇವೆಲ್ಲ ತುಂಬಿ ಬಂದಂತೆ ತೋರುತ್ತದೆ. ಎಲ್ಲ ಆಸ್ಪತ್ರೆಗಳಂತೆ ಹುಚ್ಚರ ಆಸ್ಪತ್ರೆಗಳ ಸಂಖ್ಯೆಯೂ ಹೆಚ್ಚುತ್ತಿದೆ. ಮಾನಸಿಕ ರೋಗ ತಜ್ಞರ (Psychiatrists) ಸಂಖ್ಯೆಯೂ ಏರುತ್ತಿದೆ.

ಇತ್ತೀಚೆಗೆ ಪ್ರಾಪಂಚಿಕ ಸುಖಗಳನ್ನೆಷ್ಟು ಅನುಭವಿಸಿದರೂ ಆಂತರಿಕ ಸುಖ

ದೊರಕಬೇಕಾದರೆ, ಆಧ್ಯಾತ್ಮಿಕ ಶಕ್ತಿ ಬೆಳೆಯಬೇಕು—ಎಂಬ ಪ್ರಜ್ಞೆ ಅಲ್ಲಿ ಮೂಡಿಬರುತ್ತಲೂ ಇದೆ. ನಮ್ಮ ದೇಶದಿಂದ ಹಲವಾರು ಮಹರ್ಷಿಗಳು ಅಲ್ಲಿ ಹೋಗಿ ಆಧ್ಯಾತ್ಮಿಕ ತತ್ವಗಳ ಪ್ರಚಾರ ಗೈಯ್ಯುತ್ತಲೂ ಇದ್ದಾರೆ. ಅವು ಜನಪ್ರಿಯವಾಗುತ್ತಲೂ ಇವೆ. ಅದರೊಂದಿಗೆ, ಇಲ್ಲಿಂದ ಕಾವಿ ಧರಿಸಿಕೊಂಡು ಹೋದ ಮಹಾ ಸಂನ್ಯಾಸಿಗಳು—ಮಹಾ ಸಂಸಾರಿಗಳೂ ಆಗಿದ್ದಾರೆ.

ಅಂತು ಈ ದಿಸೆಯಲ್ಲಿ ಅಲ್ಲಿಯ ಜನರ ಅಭಿರುಚಿ, ಆಸಕ್ತಿಗಳು ಬೆಳೆದು ಪ್ರಸಾರಗೊಂಡರೆ ಜನರ ಸುಖದ ಮಟ್ಟ ಇನ್ನಷ್ಟು ಹೆಚ್ಚುವುದರಲ್ಲಿ ಸಂದೇಹ ವಿಲ್ಲ.

ಅಲ್ಲಿರುವ ನಮ್ಮವರು : ನಮ್ಮ ಭಾರತೀಯ ಕುಟುಂಬದವರು ಸಾವಿರಾರು ಮಂದಿ ಅಲ್ಲಿದ್ದಾರೆ. ಹೆಚ್ಚಿನವರು ಸುಖಸಂಪತ್ತುಗಳಿಂದ ಮೆರೆಯು ತ್ತಿದ್ದಾರೆ. ಉಚ್ಚಮಟ್ಟದ ಉದ್ಯೋಗಸ್ಥ ವಿಜ್ಞಾನಿಗಳು, ತಂತ್ರಜ್ಞಾನಿಗಳು, ತಜ್ಞವೈದ್ಯರು—ಎಲ್ಲ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಜಯಶೀಲರಾಗಿದ್ದಾರೆ. ಸ್ಥಾನಮಾನಗಳನ್ನು ಗಳಿಸುತ್ತಿದ್ದಾರೆ. ಭಾರತದ ರಾಜಕೀಯ, ಸಾಮಾಜಿಕ ವಿಚಾರಗಳಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದಾರೆ.

ಅಂಥವರನ್ನು ಕಂಡು ಮಾತಾಡಿದಾಗ ಹೆಚ್ಚಿನವರು ಹೇಳುವುದು— ನಾವೇನೋ ಸುಖವಾಗಿದ್ದೇವೆ. ಆದರೆ ನಮ್ಮ ಮಕ್ಕಳು ಬೆಳೆದು ಬಂದಾಗ ಅವರಿಗೆ ನಮ್ಮ ಭಾರತೀಯ ಸಂಸ್ಕೃತಿ, ಸಂಪ್ರದಾಯಗಳೆಲ್ಲ ಸಂಪರ್ಕವಿಲ್ಲದೆ ಮರೆತುಹೋಗುತ್ತವೆ; ನಾವು ಭಾರತೀಯರಾದರೂ ಕ್ರಮೇಣ ನಮ್ಮ ಮಕ್ಕಳು ಅಮೆರಿಕನ್ನರಾಗುತ್ತಾರೆ—ಇದೇ ನಮ್ಮ ಕೊರಗು ; ಎನ್ನುತ್ತಾರೆ.

ಅಲ್ಲಿಯ ಬಾಲಕ ಬಾಲಕಿಯರು, ಹೈಸ್ಕೂಲು ಮಟ್ಟದಲ್ಲಿಯೇ ನಿಶ್ಚಿತ ದಿನ ಒಟ್ಟಾಗಿ ವಿಹಾರ ಹೋಗುವ ಕ್ರಮವನ್ನು ಅನುಸರಿಸುತ್ತಾರೆ. ಅದಕ್ಕವರು ಡೇಟಿಂಗ್ (Dating) ಎನ್ನುತ್ತಾರೆ. ಅವೆಲ್ಲ ಅಲ್ಲಿನವರಿಗೆ ಸಾಮಾನ್ಯ ಅಥವಾ ಆವಶ್ಯಕ. ಆದರೆ ನಮ್ಮ ದೃಷ್ಟಿಯಲ್ಲಿ ಪ್ರಾಯಬಂದ ಅಥವಾ ಬಾರದ ಹುಡುಗ ಹುಡುಗಿ ವಿಹಾರ ಹೋಗುವುದು ಸರಿಯಲ್ಲ. ಅಂತಹ ಸಂದರ್ಭದಲ್ಲಿ ತಾಯಿ ತಂದೆಯರು ಗದರಿಸಿ ತಮ್ಮ ಮಕ್ಕಳನ್ನು ಹತೋಟಿಯಲ್ಲಿಟ್ಟುಕೊಂಡರೆ ಅದು ಅಪರಾಧ. ಸುದ್ದಿ ತಿಳಿದರೆ ಸಮಾಜ ಸೇವಾಖಾತೆಯವರು ಬಂದು ಅಂತಹ ಮಾತಾಪಿತರಿಗೆ ಎಚ್ಚರಿಕೆ ಕೊಡುತ್ತಾರೆ. ಅಗತ್ಯಬಿದ್ದರೆ ಮಕ್ಕಳನ್ನು ಕರೆದೊಯ್ದು ಸಮಾಜ ಸೇವಾ ಖಾತೆಯ ಹಾಸ್ಟೆಲಿನಲ್ಲಿ ಸೇರಿಸಿಬಿಡುತ್ತಾರೆ. ವಿವಾಹ ಪೂರ್ವ ಪ್ರೇಮವೆಂಬುದು ಅಲ್ಲಿಯ ರೂಢಿ. ಇಲ್ಲಿಯ ವಿವಾಹಾ

ನಂತರದ ಪ್ರೇಮವನ್ನು ಅವರು ಪರಿಹಾಸಗೈಯ್ಯುತ್ತಾರೆ. ಅದು ಹೇಗೆ ಸಾಧ್ಯ?–ಎಂದು ಭಾರತೀಯ ಎಳೆ ಮಕ್ಕಳೂ ಗೇಲಿಮಾಡುತ್ತಾರೆ.

ಏನೇ ಆಗಲಿ. ಈ ವಿಚಾರಗಳೆಲ್ಲ ಹಿರಿಯ ಭಾರತೀಯರಿಗೆ, ಅದರಲ್ಲೂ ಮಹಿಳೆಯರಿಗೆ ಸರಿಹೋಗುವುದಿಲ್ಲ. ಆದರೆ, ಕೆಲವೆಲ್ಲ ಉದಾರ ಮನೋಭಾವದವರು–ನಮ್ಮ ಮಕ್ಕಳು ಅಮೆರಿಕನ್ನರಾದರೇನಂತೆ?–ಎಂದು ಹಾರಿಸಿ ನುಡಿಯುವವರೂ ಇದ್ದಾರೆ.

ವಿಚಾರಮಾಡಿ ನೋಡಿದರೆ ಅಮೆರಿಕನ್ನರು ಎಲ್ಲ ವಿಚಾರದಲ್ಲೂ ಸಾಮಾನ್ಯ, ಒಂದು ಶತಮಾನ ಮುಂದಿದ್ದಾರೆ. ನಮ್ಮ ಪರಿಸ್ಥಿತಿಯೂ ಸಾಮಾಜಿಕ ವಿಚಾರಗಳಲ್ಲಿ, ಮುಂದಿನ ಶತಮಾನದ ವೇಳೆಗೆ ಆ ಮಟ್ಟಕ್ಕೇ ಬರುವ ಲಕ್ಷಣಗಳಿವೆ.

ಒಂದು ಕಾಲದಲ್ಲಿ ನಾವು ಸಹ, ಅವಿಭಕ್ತ ಕುಟುಂಬದಲ್ಲಿ ಅಣ್ಣ-ತಮ್ಮ, ತಂದೆ-ಮಕ್ಕಳು–ಎಲ್ಲ ಒಟ್ಟಾಗಿ ದೊಡ್ಡ ಮನೆಯಲ್ಲಿ ಬಾಳುತ್ತಿದ್ದೆವು. ಈಗಲೂ ಕೆಲಹಳ್ಳಿಗಳಲ್ಲಿ ಆ ಕ್ರಮ ಇದೆ. ಆದರೆ ಇತ್ತೀಚೆಗೆ, ಹೆಚ್ಚಿನೆಡೆ ಮದುವೆಯಾದೊಡನೆ ಅಣ್ಣ ತಮ್ಮ ಬೇರೆಯಾಗುತ್ತಾರೆ. ತಂದೆ-ಮಗ ಒಂದೇ ಊರಲ್ಲಿದ್ದರೂ ಮಗ ಬೇರೆ ಮನೆ ನೋಡಿ ಮದುವೆಯಾಗುತ್ತಾನೆ. ನಂತರ ಮಡದಿಯನ್ನು ಕರೆತರುತ್ತಾನೆ. ಇದೀಗ ಸರ್ವೇಸಾಮಾನ್ಯ ವಿಚಾರವಾಗುತ್ತಿರುವುದರಿಂದ ಅದನ್ನು ಅವಹೇಳನ ಗೈವವರಿಲ್ಲ. ಹಿಂದಿನವರ ದೃಷ್ಟಿಯಿಂದ ತಂದೆ-ಮಗ, ಅಣ್ಣ-ತಮ್ಮ–ಬೇರೆ ಬೇರೆಯಾಗುವುದೆಂದರೆ ಅವಮಾನಾಸ್ಪದ ವಿಚಾರ. ಇದಕ್ಕೇ ವಯೋಮಾನದ ಅಂತರ (Generation Gap) ಎನ್ನುತ್ತಾರೆ.

ಹಾಗೆಯೇ, ಇತ್ತೀಚೆಗೆ ಗಂಡ–ಹೆಂಡತಿಯರೊಳಗೆ ಸಂಬಂಧ ಸರಿಹೋಗದಿದ್ದರೆ, ವಿವಾಹ ವಿಚ್ಛೇದನ ನಡೆಯುವುದು ಭಾರತದಲ್ಲೂ ಆರಂಭವಾಗಿದೆ. ವಿಚ್ಛೇದನದ ನಂತರ ಬೇರೆ ಮದುವೆಯನ್ನು ಮಾಡಿಕೊಳ್ಳುತ್ತಾರೆ. ಮುಸಲ್ಮಾನರಲ್ಲಿ ಮತ್ತು ಅತ್ಯಂತ ಹಿಂದುಳಿದವರಲ್ಲಿ ಈ ವಿವಾಹವಿಚ್ಛೇದನ ಸುಲಭವಾಗಿ, ಹಿಂದಿನಿಂದಲೂ ನಡೆದುಬರುತ್ತಿದೆ. ಕ್ರಮೇಣ, ವಿದ್ಯಾವಂತರಾದ ಮುಂದುವರಿದವರಲ್ಲೂ ಇಂದಿನ ಅಮೆರಿಕಾದಂತೆ, ನಮ್ಮಲ್ಲೂ ವಿವಾಹವಿಚ್ಛೇದನ ಮುಂದಿನ ಶತಮಾನದ ವೇಳೆಗೆ ಮಾಮೂಲಿ ವಿಚಾರವೆಂದಾಗಬಹುದು.

ಹಾಗಾಗಿ ನಮ್ಮಲ್ಲಿಯ ಈಗಿನ ಪರಿಸ್ಥಿತಿಯನ್ನು ನೋಡಿಕೊಂಡು, ಅಮೆರಿಕನ್ನರ ವಿವಾಹವಿಚ್ಛೇದನ ಕ್ರಮವನ್ನು ತೆಗಳುವುದು ಸರಿಯಲ್ಲ. ಜೀವಮಾನವಿಡೀ ಜಗಳವಾಡುತ್ತ ಗಂಡ ಹೆಂಡಿರ ಕೂಡುಬಾಳ್ವೆಗಿಂತ, ಬೇರೆಯಾಗುವುದು ತಪ್ಪೆಂದು, ಒಂದು ದೃಷ್ಟಿಯಿಂದ ಹೇಳಲೂ ಬರುವಂತಿಲ್ಲ.

ಇಂತಹ ವಿಚಾರ ಸರಣಿಯನ್ನು ಅಮೆರಿಕಾದಲ್ಲಿರುವ ಭಾರತೀಯರು ಹಲವರು ಮುಂದೊಡ್ಡುತ್ತಾರೆ.

ಏನೇ ಇರಲಿ. ನಾವು ಅಮೆರಿಕಾದವರಿಂದ ಕಲಿಯಬೇಕಾದ ವಿಚಾರಗಳು ತುಂಬ ಇವೆ. ನಾವು ಒಳ್ಳೆಯದನ್ನೆಲ್ಲ ಗ್ರಹಿಸಿಕೊಂಡು ಅನುಸರಿಸಲು ಪ್ರಯತ್ನಿಸಬೇಕು. ಸರಿದೋರದ್ದನ್ನು ಬಿಟ್ಟುಬಿಡಬೇಕು. ಹೀಗೆ ಹಿಂದುಳಿದ ನಾವು ಮುಂದು ಬರಲು ಅವಶ್ಯ ಪ್ರಯತ್ನಿಸಬೇಕು.

ಕೆ. ಆರ್. ಉಡುಪ

(ಮುಗಿದುದು)



ಅನೇಕ ವೇಳೆ ಕೋಪವನ್ನೇ ಉತ್ಸಾಹವೆಂದು ಭ್ರಮಿಸುತ್ತೇವೆ.

—ಥಾಮಸ್ ಕೆಂಪಿಸ್

ಕೆಲಸಕ್ಕಾಗಿ ಮೀಸಲಿಟ್ಟ ಕಾಲ ಎಂದೂ ಕಳೆದು ಹೋದ ಕಾಲವಲ್ಲ ಎಂಬುದು ವಿವೇಕದ ಲಕ್ಷಣ.

—ಎಮೆರ್‌ಸನ್

ಕೆಟ್ಟವನ ಕೈಲಿ ಯಾವ ಆಯುಧವಿದ್ದರೂ ಕೆಟ್ಟದ್ದೇ. ಆಯುಧ ಉತ್ತಮವಾದಷ್ಟೂ ಅಪಾಯ ಹೆಚ್ಚು.

—ಎಡಿರೀಚಿ

ಲೋಕಾಚಾರಕ್ಕೆ ತಪ್ಪಿ ನಡೆಯುವವನು ಬದುಕಿದ್ದರೂ ಸತ್ತಂತೆಯೇ.

—ತಿರುಕ್ಕುರಳ್

ವಯಸ್ಕರ ಶಿಕ್ಷಣದ ಮಹತ್ವ

ಶಾಲಾ ಬೋಧನೆಯಿಂದ ಶಿಕ್ಷಣವು ಕೊನೆಗಾಣುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಾಗುತ್ತಿರುವ ಪರಿವರ್ತನೆಯ ಪರಂಪರೆ ವರ್ಧಿಸುತ್ತಿರುವ ಸಂಕೀರ್ಣ ಪ್ರಪಂಚಕ್ಕೆ ಹೊಂದಿಕೊಳ್ಳಲು, ಅತ್ಯಾಧುನಿಕ ರೀತಿಯಲ್ಲಿ ಶಿಕ್ಷಣ ಪಡೆದವರೂ, ತಮ್ಮ ಶಿಕ್ಷಣವನ್ನು ಮುಂದುವರಿಸಬೇಕಾಗುತ್ತದೆ.

ನಾಡಿನ ಆರ್ಥಿಕ ಪ್ರಗತಿ, ಸಾಮಾಜಿಕ ಪರಿವರ್ತನೆ, ರಾಷ್ಟ್ರದ ಭದ್ರತೆ ಹಾಗೂ ಭಾವೈಕ್ಯತೆಯನ್ನು ಸಾಧಿಸಬೇಕಾಗಿದೆ. ಅಷ್ಟೇ ಅಲ್ಲದೆ ಜೀವನದ ಮೌಲ್ಯವನ್ನು ಅರಿಯಲು ಹಾಗೂ ವೈಯಕ್ತಿಕ ಪ್ರಗತಿಯನ್ನು ಸಾಧಿಸಲು ವಯಸ್ಕರ ಶಿಕ್ಷಣ ಅತ್ಯಾವಶ್ಯಕ.

ಹೊಲದಲ್ಲಿ ಕೆಲಸ ಮಾಡುವ ರೈತ ಮಣ್ಣಿನ ಸತ್ವವನ್ನು ಅರಿಯದೆ ಉತ್ಪನ್ನವನ್ನು ಹೆಚ್ಚಿಸಲು ಸಾಧ್ಯವಿಲ್ಲ. ಹಾಗೆಯೆ ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡುವುದನ್ನರಿಯದೆ, ರಾಷ್ಟ್ರದ ಪ್ರಗತಿಯನ್ನು ಆರ್ಥಿಕವಾಗಿ ಸಾಧಿಸಲಾಗುವುದಿಲ್ಲ. ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕ ಯಂತ್ರದ ಗುಣವನ್ನರಿಯದೆ ಕಾರ್ಖಾನೆಯ ಉತ್ಪನ್ನವನ್ನು ಹೆಚ್ಚಿಸಲು ಸಾಧ್ಯವಿಲ್ಲ. ಇದರಿಂದ ದೇಶದ ಪ್ರಗತಿ ಕುಂಠಿತವಾಗುತ್ತದೆ.

ಇಷ್ಟೇ ಅಲ್ಲದೆ ಅನಕ್ಷರಸ್ಥರಿಗೆ ದೇಶದ ಬೃಹತ್ ಸಮಸ್ಯೆಗಳು ಅರ್ಥವಾಗುವುದಿಲ್ಲ. ಉದಾಹರಣೆಗೆ ಜನ ಸಂಖ್ಯೆಯ ಬೆಳವಣಿಗೆ ರಾಷ್ಟ್ರದ ಜ್ವಲಂತ ಸಮಸ್ಯೆಯಾಗಿದೆ. ಪ್ರತಿ ವರ್ಷವೂ ಆಸ್ಟ್ರೇಲಿಯದಷ್ಟು ಜನ ಸಂಖ್ಯೆಯನ್ನು ನಮ್ಮ ರಾಷ್ಟ್ರದಲ್ಲಿ ಸೃಷ್ಟಿಸುತ್ತಿದ್ದೇವೆ. ರಾಷ್ಟ್ರದ ಈಗಿನ ಜನ ಸಂಖ್ಯೆ ೬೮ ಕೋಟಿ. ದೇಶದ ಹೊಣೆಗಾರಿಕೆಯನ್ನು ಹೊತ್ತ ಜನತೆ ನಿಜವಾಗಿಯೂ ಇದನ್ನು ಅರ್ಥ ಮಾಡಿಕೊಂಡು ದೇಶದ ಸಮಸ್ಯೆಯನ್ನು ಪರಿಹರಿಸುವಲ್ಲಿ ನೆರವಾಗಬೇಕು.

ವ್ಯವಹಾರಜ್ಞಾನ, ಶಿಸ್ತಿನ ಪ್ರಜ್ಞೆ, ಕರ್ತವ್ಯದಲ್ಲಿ ನಿಷ್ಠೆ, ವ್ಯಕ್ತಿಯ, ಸಮಾಜದ ಹಾಗೂ ರಾಷ್ಟ್ರದ ಸಮಸ್ಯೆಗಳ ಅರಿವು ಮತ್ತು ಅವುಗಳನ್ನು ಪರಿಹರಿಸುವಲ್ಲಿ ತನ್ನ ಹೊಣೆ ಮೊದಲಾದವುಗಳು ಪ್ರಜಾಪ್ರಭುತ್ವದಲ್ಲಿ, ಪ್ರತಿಒಬ್ಬ ವ್ಯಕ್ತಿಯಲ್ಲಿಯೂ ಮೂಡುವಂತೆ ಮಾಡುವುದೇ ವಯಸ್ಕರ ಶಿಕ್ಷಣದ ಉದ್ದೇಶ.

ವಯಸ್ಕರ ಶಿಕ್ಷಣ ವ್ಯಾಪಕವಾದದ್ದು, ಜೀವನದಷ್ಟೇ ವಿಶಾಲವಾದದ್ದು. ದೌರ್ಭಾಗ್ಯವಶಾತ್ ಭಾರತದಲ್ಲಿ ಶೇಕಡ 64ರಷ್ಟು ಜನರು ಅನಕ್ಷರಸ್ಥರಾಗೇ ಉಳಿದಿದ್ದಾರೆ. ೧೯೫೧ರಲ್ಲಿದ್ದ ಅನಕ್ಷರಸ್ಥರ ಶ್ರೇಣಿಗೆ, ೧೯೬೧ರಲ್ಲಿ ೩೬ ದಶಲಕ್ಷ

ಅನಕ್ಷರಸ್ಥರು ಸೇರಿಕೊಂಡರು. ೧೯೬೬ರ ವೇಳೆಗೆ ಮತ್ತೆ ೨೦ ದಶಲಕ್ಷ ಅನಕ್ಷರಸ್ಥರು ಹೊಸದಾಗಿ ದಾಖಲಾದರು. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿದಾಗ್ಯೂ ಅನಕ್ಷರಸ್ಥರ ಸಂಖ್ಯೆ ಹೀಗೆ ಏರುತ್ತಿರುವುದು ಶೋಚನೀಯ ಸಂಗತಿ.

ಬಹುಸಂಖ್ಯಾತ ಅನಕ್ಷರಸ್ಥರು ರಾಷ್ಟ್ರದ ಉತ್ಪಾದನಾ ಶಕ್ತಿಯನ್ನು ನಿಯೋಜಿಸುವವರಾದ್ದರಿಂದ, ರಾಷ್ಟ್ರದ ಔದ್ಯೋಗಿಕರಣದ ಗತಿ, ವ್ಯವಸಾಯದ ಆಧುನೀಕರಣ ಹಾಗೂ ರಾಷ್ಟ್ರದ ಸಾಮಾನ್ಯ ಪ್ರಗತಿ ಸ್ಥಗಿತಗೊಳ್ಳುತ್ತದೆ. ನಮ್ಮ ದೃಢ ವಿಶ್ವಾಸ ಹಾಗೂ ಉನ್ನತ ನಿರೀಕ್ಷೆಗಳಿಗೆ ಭಾರಿ ಹೊಡೆತ ಬೀಳುತ್ತದೆ. ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಗತಿಯ ಯುಗಧರ್ಮಕ್ಕೂ ಹಾಗೂ ನಿರಕ್ಷರತೆಯಿಂದ ಕೂಡಿದ ಅನಕ್ಷರಸ್ಥರ ಅಂಧ ವಿಶ್ವಾಸ ಹಾಗೂ ಅನಾಗರೀಕತೆ ಜೀವನಕ್ಕೂ ಸಾಮರಸ್ಯವಿಲ್ಲದಂತಾಗಿದೆ. ವೈಜ್ಞಾನಿಕ ಬದಲಾವಣೆಯನ್ನು ಸ್ವೀಕರಿಸಲು ಸಿದ್ಧವಿಲ್ಲದ ಅವರ ಅಂತಃಕರಣಕ್ಕೆ, ನವೀನತೆಯನ್ನು ನಿವೇದಿಸಿಕೊಳ್ಳುವುದು ಕಠಿಣವಾಗುತ್ತದೆ. ಅದು ಆರ್ಥಿಕ ಬದಲಾವಣೆಯಾಗಲೀ, ರಾಷ್ಟ್ರೀಯ ಭಾವೈಕ್ಯವಾಗಲೀ, ಕುಟುಂಬ ಕಲ್ಯಾಣ ಯೋಜನೆಯಾಗಲೀ, ವಿದೇಶಾಂಗ ನೀತಿಯಾಗಲಿ ಅಥವಾ ಆಂತರಿಕ ಯಾವ ಜ್ವಲಂತ ಸಮಸ್ಯೆಯೇ ಆಗಲಿ, ಜನತೆ ಸತ್ವಪೂರ್ವಕವಾಗಿ ಅರ್ಥ ಮಾಡಿಕೊಂಡಾಗ, ಯಶಸ್ವಿಯಾಗಿ ಅವುಗಳ ಹೊಣೆಯನ್ನು ಹೊರುತ್ತಾರೆ.

ಪ್ರಾಚೀನ ನಾಗರೀಕತೆ ಮತ್ತು ಸಂಸ್ಕೃತಿಗಳಿಂದ ಹೆಮ್ಮೆಪಡುತ್ತಿರುವ ಭಾರತಕ್ಕೆ, ಬಹುಸಂಖ್ಯಾತರ ನಿರಕ್ಷರತೆ ತೇಜೋವಧೆಯಾಗಿದೆ. ನಾವು ಹಿರಿದಾದ ಕಾಣಿಕೆ ತೆತ್ತು ಪಡೆದಿರುವ ಸ್ವಾತಂತ್ರ್ಯತೆ, ಸಮಗ್ರತೆ, ಸಾರ್ವಭೌಮತ್ವಗಳೆಂಬ ಅಪೂರ್ವ ರತ್ನಗಳಿಗೆ ನಿರಕ್ಷರತೆಯೆಂಬ ಬರಸಿಡಿಲು ಬಡಿದಂತಾಗಿದೆ.

ಶಾಶ್ವತವಾದ ಈ ಅನಕ್ಷರತೆಯ ಉಪದ್ರವಕ್ಕೆ ನಾವು ಹೊಂದಿಕೊಂಡಿದ್ದರೂ, ಅದರಿಂದಾಗುವ ತೊಂದರೆಗಳನ್ನು ನಾವು ಲೆಕ್ಕಿಸದೆ ಹೋದಾಗ್ಯೂ, ವ್ಯಕ್ತಿ ಹಾಗೂ ರಾಷ್ಟ್ರ, ಅನಕ್ಷರತೆಗೆ ಹಿರಿದಾದ ತೆರಿಗೆ ತೆರಬೇಕಾಗಿದೆ.

ವಿದ್ಯಾವಂತ ಅವಿದ್ಯಾವಂತನನ್ನು ಯಾವ ಕಡೆಗೆ ಬೇಕಾದರೂ ಕರೆದೊಯ್ಯಬಹುದು. ಅನಕ್ಷರಸ್ಥ ಕಣ್ಣಿದ್ದೂ ಕುರುಡನಾಗಿ, ಕಿವಿ ಇದ್ದೂ ಕಿವುಡನಾಗಿ, ನಾಲಿಗೆಯಿದ್ದೂ ಮೂಕನಾಗಿ, ಹೃದಯವಿದ್ದೂ ಭಾವಶೂನ್ಯತೆಯಿಂದ ಬರಡಾದ ಜೀವನವನ್ನು ನಡೆಸುತ್ತಾನೆ. ಆಧುನಿಕ ಸಾಮಾಜಿಕ ಸುಧಾರಣೆಗಳಿಂದ ಆವನು ವಂಚಿತನಾಗಿದ್ದಾನೆ.

ಅನಕ್ಷರತೆ ಬಹಳ ವರ್ಷಗಳವರೆವಿಗೆ ಮುಂದುವರೆಸಿಕೊಂಡು ಹೋಗುವಂತಹ ವೈಭವದ ವಸ್ತುವೇನಲ್ಲ. ಅದೊಂದು ದೊಡ್ಡ ಪಿಡುಗು. ಅನಕ್ಷರತೆ ಇರುವ ಕಡೆ ದಟ್ಟದಾರಿದ್ರ್ಯ ತಾಂಡವವಾಡುತ್ತದೆ. ರೋಗರುಜಿನಗಳು ನರ್ತನಗೈಯುತ್ತವೆ. ಅದು ಬಡಬಾಗ್ನಿಯಂತೆ ವೈಚಾರಿಕ ಭಾವನಾಪ್ರವಾಹವನ್ನು ಬತ್ತಿಸುತ್ತದೆ. ಅಂಧ ವಿಶ್ವಾಸಗಳು ವಿಕಟಾಟ್ಟಹಾಸದಿಂದ ಮೆರೆಯುತ್ತವೆ. ಅನಕ್ಷರತೆ, ಜಾತೀಯತೆ ಎಂಬ ವಿಷಬೀಜಕ್ಕೆ ನೀರೆರೆದು ಬೆಳೆಸುತ್ತದೆ. ರಾಷ್ಟ್ರೀಯ ಭಾವೈಕ್ಯ, ಸಾಮಾಜಿಕ ಸುಧಾರಣೆ, ಆರ್ಥಿಕ ಪ್ರಗತಿ, ಅನಕ್ಷರತೆಯ ಹುಚ್ಚು ಹೊಳೆಯಲ್ಲಿ ಸತ್ತ ತುಂಡಿನಂತೆ ಕೊಚ್ಚಿಹೋಗುತ್ತದೆ.

ಜ್ಞಾನ ಪ್ರಸಾರದ ಅಥವಾ ದೀನದಲಿತರ ಉದ್ಧಾರಕ್ಕೆ ಹೆದ್ದಾರಿಯಂತಿರುವ ಯಾವುದಾದರೂ ಕಾರ್ಯಕ್ರಮವನ್ನು ಕೈಗೊಂಡರೆ, ಅತ್ಯಂತ ನಿಸ್ವಾರ್ಥತೆ ಯಿಂದ, ಅಮಿತ ಉತ್ಸಾಹದಿಂದ ಕೆಲಸ ಮಾಡುವ ಜನತೆ ಭಾರತದಲ್ಲಿದೆ. ನಮ್ಮಲ್ಲಿರುವ ಸತ್ವಪೂರಿತ ಜನಸಂಪತ್ತು, ಯಾವ ರಾಷ್ಟ್ರದ ಜನಸತ್ವಕ್ಕಿಂತ ಕಡಮೆ ಇಲ್ಲ. ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ದೃಶ್ಯ ಭಿನ್ನವಾಗಿದ್ದರೂ, ಉಲ್ಲಾಸ ಕರವಾದ ಪ್ರಯತ್ನವಿದೆ. ಸಮರಸವಾದ ಸಹವಾಸವಿದೆ. ವಯಸ್ಕರ ಶಿಕ್ಷಣದ ಮಹತ್ವವನ್ನು ನಾವು ಗ್ರಹಿಸಿ, ಈ ಕಾರ್ಯಕ್ರಮದ ಯಶಸ್ಸಿಗೆ ನಮ್ಮನ್ನು ನಾವೇ ಸಮರ್ಪಿಸಿಕೊಳ್ಳಬೇಕು. ಇಡೀ ಪೃಥ್ವಿಯಲ್ಲಿರುವ ಅನಕ್ಷರಸ್ಥರಲ್ಲಿ ಸುಮಾರು ೧:೩ ಭಾಗ ಭಾರತದಲ್ಲಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಮಹತ್ವದಲ್ಲಿ ಅಸಮಾನ್ಯವಾದ ಜಟಿಲತೆಯಲ್ಲಿ ಸಾಟಿಯಿಲ್ಲದ ಈ ಪಿಡುಗನ್ನು ಇಡೀ ರಾಷ್ಟ್ರ ದಿಟ್ಟತನದಿಂದ ಹೋರಾಡಿ ಹೊಡೆದೋಡಿಸಬೇಕಾಗಿದೆ. ಭಾರತದ ಸಮಸ್ಯೆ ವಿಶಿಷ್ಟವಾದದ್ದಾಗಿದೆಯಾದ್ದರಿಂದ ತನ್ನದೇ ಆದ ರೀತಿಯಲ್ಲಿ ಇದನ್ನು ಪರಿಹರಿಸಬೇಕಾಗಿದೆ.

ಚೀನ, ರಷ್ಯಾ, ಮೆಕ್ಸಿಕೊ, ಟರ್ಕಿ ರಾಷ್ಟ್ರಗಳು ಈ ಸಮಸ್ಯೆಗಳನ್ನು ತಮ್ಮದೇ ಆದ ರೀತಿಯಲ್ಲಿ ಪರಿಹರಿಸಿಕೊಂಡಿವೆ. ಈ ರಾಷ್ಟ್ರಗಳಲ್ಲಿ ನಡೆದ ರಾಷ್ಟ್ರೀಯ ಆಂದೋಲನ ಭಾರತವನ್ನು ಶೀತಲವನ್ನಾಗಿ ಮಾಡಿದರೂ, ನಿರುತ್ಸಾಹಿಗಳಾಗ ಬಾರದು.

ವಯಸ್ಕರ ಶಿಕ್ಷಣದ ಸಾಕ್ಷರತಾ ಚಳುವಳಿ, ಅನ್ಯ ರಾಷ್ಟ್ರಗಳಲ್ಲಿ ತೀವ್ರ ಗೊಂಡು ಯಶಸ್ವಿಯಾಗಿದೆ. ರಷ್ಯಾದಲ್ಲಿ ಸೈರಲಿಕ್ ವರ್ಣಮಾಲೆಯನ್ನು ಗಣನೀಯ ಪ್ರಮಾಣದಲ್ಲಿ ಸರಳಗೊಳಿಸಲಾಯಿತು. ಚೀನದಲ್ಲಿ ಭಾವಲಿಪಿಗಳ ಸಂಖ್ಯೆಯನ್ನು ಸುಮಾರು ೧ ಸಾವಿರದವರೆವಿಗೂ ಕಡಮೆ ಮಾಡಲಾಯಿತು.

ತುರ್ಕಿಯಲ್ಲಿ ಅಕ್ಷರಗಳನ್ನು ಸಮಗ್ರವಾಗಿ ರೋಮನ್ ಮಾದರಿ ಮಾಡಲಾಯಿತು. ಭಾರತದಲ್ಲೂ ಅಕ್ಷರಗಳ ಪರಿಷ್ಕರಣ ಅತ್ಯಾವಶ್ಯಕ. ಉದಾಹರಣೆಗೆ ಕವರ್ಗ, ಚವರ್ಗ, ಟವರ್ಗ, ತವರ್ಗ, ಪವರ್ಗಗಳಲ್ಲಿರುವ ಅನೇಕ ಅಲ್ಪಪ್ರಾಣಾಕ್ಷರಗಳಿಗೂ, ಮಹಾಪ್ರಾಣಾಕ್ಷರಗಳಿಗೂ ಬಹಳ ವ್ಯತ್ಯಾಸಗಳಿವೆ. "ಕ" ಅಕ್ಷರವನ್ನು ಒಂದು ತರಹೆ ಬರೆದರೆ, "ಖ" ಅಕ್ಷರವನ್ನು ಮತ್ತೊಂದು ತರಹೆ ಬರೆಯುತ್ತೇವೆ. ಇದಕ್ಕೆ ಬದಲಾಗಿ ಅಲ್ಪಪ್ರಾಣಾಕ್ಷರವಾದ "ಕ"ಗೆ ಒಂದು ಸಂಕೇತ ಕೊಡುವುದರಿಂದ ಅದನ್ನು ಮಹಾಪ್ರಾಣಾಕ್ಷರವನ್ನಾಗಿ ಉಚ್ಚರಿಸುವಂತಾಗಬೇಕು. ಪ್ರತಿವರ್ಗದ ಅಲ್ಪಪ್ರಾಣಾಕ್ಷರಗಳಿಗೆ ಅದೇ ಸಂಕೇತವನ್ನು ಕೊಡುವುದರಿಂದ ಮಹಾಪ್ರಾಣಾಕ್ಷರವನ್ನಾಗಿ ಉಚ್ಚರಿಸುವಂತಾದರೆ, ವಯಸ್ಕರು ಅನೇಕ ಮಹಾಪ್ರಾಣಾಕ್ಷರಗಳನ್ನು ಕಲಿಯುವುದು ತಪ್ಪುತ್ತದೆ. ಹಾಗೆ ಪ್ರತಿಯೊಂದು ಅಕ್ಷರದ ಒತ್ತುಗಳೂ ಒಂದೊಂದು ತರಹೆ ಇವೆ. "ವು" ಅಕ್ಷರ ಒಂದು ತರಹೆ ಇದ್ದರೆ, "ಮ" ಅಕ್ಷರದ ಒತ್ತು ಮತ್ತೊಂದು ತರಹೆ ಇದೆ. ಆದ್ದರಿಂದ "ಮ" ಅಕ್ಷರವನ್ನೇ ಸಣ್ಣದಾಗಿ ಬರೆದರೆ "ಮ" ಅಕ್ಷರದ ಒತ್ತು ಆಗುವಂತಿರಬೇಕು. ಆಗ ಅನಕ್ಷರಸ್ಥರು ಸುಲಭವಾಗಿ ಅಕ್ಷರಗಳನ್ನು ಕಲಿಯಬಲ್ಲರು. ಭಾಷಾತಜ್ಞರು ಈ ವಿಷಯದಲ್ಲಿ ಆಸಕ್ತಿವಹಿಸಿದರೆ, ಸ್ವಲ್ಪಮಟ್ಟಿಗೆ ಅನಕ್ಷರತೆಯನ್ನು ಬಡಿದೋಡಿಸಬಹುದು.

ಈ ಅಕ್ಷರ ಪರಿಷ್ಕರಣದ ಜೊತೆಗೆ ಕೆಳಗೆ ನಮೂದಿಸಿರುವ ಕಾರ್ಯಕ್ರಮಗಳನ್ನು ಕೈಗೊಂಡರೆ, ಬೆಳೆಯುತ್ತಿರುವ ನಿರಕ್ಷರತೆಯನ್ನು ತಡೆಗಟ್ಟಬಹುದು.

೬ರಿಂದ ೧೦ ವರ್ಷದ ಮಕ್ಕಳು ಮನೆಯಲ್ಲಿ ತಂದೆ ತಾಯಿಗಳಿಗೆ, ಕೆಲಸ ಮಾಡಲು ಅಡ್ಡಿ ಬರುವುದರಿಂದ, ಅಂತಹವರನ್ನು ಶಾಲೆಗೆ ಕಳುಹಿಸುತ್ತಾರೆ. ಬಹುತೇಕ ಮಕ್ಕಳು ಮನೆಯಲ್ಲೂ ಇಲ್ಲದೆ, ಶಾಲೆಯಲ್ಲೂ ಇಲ್ಲದೆ ಬೀದಿಯಲ್ಲಿ ಬೆಳೆದು ಬರುತ್ತಿವೆ. ಇಂತಹ ಮಕ್ಕಳನ್ನು ಶಾಲೆಗೆ ನಿರ್ಬಂದ ಮಾಡಿಯಾದರೂ ಕಳುಹಿಸುವ ವ್ಯವಸ್ಥೆಯಾಗಬೇಕು. ಇಲ್ಲದೆಹೋದಲ್ಲಿ ಈ ಮಕ್ಕಳುಗಳೆಲ್ಲಾ ಕೆಲವು ಕಾಲಾನಂತರ ಅನಕ್ಷರಸ್ಥರ ಗುಂಪಿಗೆ ಸೇರಿಕೊಳ್ಳುತ್ತಾರೆ. ಕೆಲವು ಕಡೆ ೬ರಿಂದ ೧೦ನೇ ವಯಸ್ಸಿನ ಮಕ್ಕಳನ್ನೂ ಮನೆಗೆಲಸಕ್ಕೆ ಹಾಗೂ ಹೊಲದ ಕೆಲಸಕ್ಕೆ ಕರೆದುಕೊಳ್ಳುತ್ತಾರೆ. ಅಂತಹ ಸಂದರ್ಭಗಳಲ್ಲಿ ಆ ಸ್ಥಳಗಳಲ್ಲಿ ಪ್ರಾಯೋಗಿಕವಾಗಿ ಪ್ರಾಥಮಿಕ ಶಾಲೆಗಳ ವೇಳಾಪಟ್ಟಿಯನ್ನು ಬದಲಾಯಿಸಿ ಬೆಳಿಗ್ಗೆ ೮ ಘಂಟೆಯಿಂದ ೧೦ ಘಂಟೆಯವರೆವಿಗೂ, ರಾತ್ರಿ ೭ ಘಂಟೆಯಿಂದ ೯ ಘಂಟೆಯವರೆವಿಗೂ ಬದಲಾವಣೆ ಮಾಡಿಕೊಂಡು ಕನಿಷ್ಠ ಒಂದೊಂದು

ತರಗತಿಯನ್ನಾದರೂ ರಾತ್ರಿಕಾಲ ನಡೆಸಬೇಕು. ಇದರಿಂದ ಹಗಲು ಶಾಲೆಯಲ್ಲಿ ಕಲಿಯಲು ಅವಕಾಶವಿಲ್ಲದ ಮಕ್ಕಳು ರಾತ್ರಿ ವೇಳೆಯಲ್ಲಾದರೂ ಕಲಿಯಲು ಅವಕಾಶ ದೊರೆತಂತಾಗುತ್ತದೆ.

೧೧ ವರ್ಷದಿಂದ ೧೪ ವರ್ಷದವರೆವಿಗೆ ಇರುವ ಮಕ್ಕಳು ತಂದೆ ತಾಯಿಗಳಿಗೆ ದುಡಿಮೆಯಲ್ಲಿ ಸಹಾಯ ಮಾಡುವುದರಿಂದ, ಅವರನ್ನು ಶಾಲೆ ಬಿಡಿಸಿ ಮನೆ ಕೆಲಸ ಅಥವಾ ಹೊಲದ ಕೆಲಸದಲ್ಲಿ ತೊಡಗಿಸುತ್ತಾರೆ. ಇಂತಹ ಹತಭಾಗ್ಯ ಮಕ್ಕಳಿಗೆ ಪೂರ್ಣವಾಗಿ ರಾತ್ರಿ ಶಾಲೆಗಳನ್ನು ತೆರೆದು ಅಸಂಪ್ರದಾಯ ಶಿಕ್ಷಣ ವನ್ನು ಕೊಡಬೇಕು. ಸಾಂಪ್ರದಾಯಕ ಶಿಕ್ಷಣದ ಪಠ್ಯಪುಸ್ತಕಗಳು ವಯಸ್ಕರಿಗೆ ಅಷ್ಟು ಉಪಯುಕ್ತವಾಗುವುದಿಲ್ಲ. ಅವರ ವೃತ್ತಿಶಿಕ್ಷಣಕ್ಕನುಗುಣವಾದ ಪಠ್ಯ ಪುಸ್ತಕಗಳನ್ನು ಈ ರಾತ್ರಿ ಶಾಲೆಗಳಿಗೆ ನಿಗದಿಮಾಡಬೇಕು.

ನಂತರ ೧೫ ವರ್ಷದಿಂದ ೩೫ ವರ್ಷದ ತರುಣ ಜನಾಂಗಕ್ಕೆ ರಾತ್ರಿ ಶಿಕ್ಷಣ ಅತ್ಯಾವಶ್ಯಕ. ಈ ಶಿಕ್ಷಣದಲ್ಲಿ ಸಾಕ್ಷರತೆ, ಜಾಗೃತಿ ಹಾಗೂ ಕ್ರಿಯಾಶೀಲತೆ ಇವು ಇರಬೇಕಾದ ಅತಿ ಮುಖ್ಯ ಅಂಗಗಳು. ವಯಸ್ಕರ ಸಾಕ್ಷರತೆ ಹಾಗೂ ವಯಸ್ಕರ ಶಿಕ್ಷಣಗಳಲ್ಲಿ ಭೂಮ್ಯಾಕಾಶಗಳ ಅಂತರವಿದೆ. ಸಾಕ್ಷರತೆ ವಯಸ್ಕರ ಶಿಕ್ಷಣದ ಮೊದಲನೆಯ ಮೆಟ್ಟಿಲೂ ಸಾಕ್ಷರತೆ, ವಯಸ್ಕರ ಶಿಕ್ಷಣವನ್ನು ಬರೆಯಲು ಇರುವ ಒಂದು ಸ್ವಚ್ಛ ಸ್ಲೇಟಿನಂತೆ.

ಸಾಕ್ಷರತಾ ಕಾರ್ಯಕ್ರಮ ಸಾಧ್ಯವಾದಷ್ಟೂ ಕ್ರಿಯಾತ್ಮಕವಾಗಿರಬೇಕು. ತಾನು ನಿರತವಾಗಿರುವ ವೃತ್ತಿಯನ್ನು ಅತಿಯಶಸ್ವಿಯಾಗಿ ನಿರ್ವಹಿಸಲು ಸಹಾಯಕವಾಗಿರುವ ಭಾವ, ಆಸಕ್ತಿ, ಜಾಣ್ಮೆಗಳನ್ನು ವಯಸ್ಕರಿಗೆ ಮುಟ್ಟಿಸು ವಂತಿರಬೇಕು.

ಸಜೀವ ರಾಷ್ಟ್ರೀಯ ಸಮಸ್ಯೆಗಳಲ್ಲಿ ಕುತೂಹಲ ಕೆರಳಿಸಲು ಹಾಗೂ ರಾಷ್ಟ್ರದ ಸಾಮಾಜಿಕ ಮತ್ತು ರಾಷ್ಟ್ರೀಯ ಜೀವನದಲ್ಲಿ ಸತ್ಪೂರ್ವಕವಾಗಿ ಭಾಗ ವಹಿಸಲು ಸಾಕ್ಷರತಾ ಕಾರ್ಯಕ್ರಮ ಅನಕ್ಷರಸ್ಥನಿಗೆ ನೆರವು ನೀಡಬೇಕು.

ತನ್ನ ಇಚ್ಛೆಯ ಮೇರೆಗೆ ಅಥವಾ ಇತರ ಅಸಂಪ್ರದಾಯಕ ವಿದ್ಯೆಯ ಮೂಲಕ ತನ್ನ ವಿದ್ಯೆಯನ್ನು ಮುಂದುವರಿಸುವಂತಹ ಕೌಶಲವು ಓದುವುದು, ಬರೆಯುವುದು ಹಾಗೂ ಲೆಕ್ಕ ಮಾಡುವುದು ಅನಕ್ಷರಸ್ಥನಿಗೆ ಮುಟ್ಟಬೇಕು.

ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಮೂರು ಹಂತಗಳಿವೆ. (೧) ಓದುವುದು, ಬರೆಯುವುದು, ಲೆಕ್ಕ ಮಾಡುವುದು ಮತ್ತು ಅವನ ಉದ್ಯೋಗಕ್ಕೆ ಸಂಬಂಧ ಪಟ್ಟ ಕೌಶಲ ಪಡೆಯುವುದು ಮೊದಲನೆಯ ಹಂತ. (೨) ಪ್ರಾರಂಭವ ಹಂತ

ದಲ್ಲಿ ಪಡೆದ ಕೌಶಲವನ್ನು ಇನ್ನೂ ವ್ಯಾಪಕ ಮಾಡಿಕೊಂಡು, ತನ್ನ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು ಎರಡನೆಯ ಹಂತ. (೩) ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ನೆರವು ನೀಡುವುದು ವಯಸ್ಕರ ಶಿಕ್ಷಣ ಕಾರ್ಯಕ್ರಮದ ಮೂರನೆಯ ಹಂತ.

ಈಗಾಗಲೆ ರಾಷ್ಟ್ರಾದ್ಯಂತ ನಿರಕ್ಷರತೆಯನ್ನು ತೊಡೆದುಹಾಕಲು ಚಳುವಳಿ ಯನ್ನು ಪ್ರಾರಂಭಿಸಲಾಗಿದೆ. ಸಾಮಾಜಿಕ ಹಾಗೂ ರಾಜಕೀಯ ನಾಯಕತ್ವ ದಿಂದ ಹುರುಪುಗೊಂಡ ಚಳುವಳಿ ಚೇತನದಾಯಕವಾಗಬೇಕು. ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಿ ಇಲಾಖೆಗಳು, ಖಾಸಗೀ ಸಂಸ್ಥೆಗಳು, ಕಾರ್ಖಾನೆಗಳು, ವಿದ್ಯಾ ಸಂಸ್ಥೆಗಳು ಹಾಗೂ ನಾಡಿನ ವಿದ್ಯಾವಂತ ಜನತೆ ಈ ಯೋಜನೆಯಿಂದ ಸ್ಫೂರ್ತಿಗೊಂಡು ಸಂಘಟಿತವಾಗಬೇಕು. ಈ ಯೋಜನೆಯ ಯಶಸ್ವಿಗೆ, ಜನತೆಯ ಸಮರ್ಪಣೆಯ ಅಂತಃಕರಣ, ರಚನಾತ್ಮಕ ಸಂಘಟನೆ ಹಾಗೂ ಕಾರ್ಯಕರ್ತರ ಅಂತಃಕರಣದ ಶುದ್ಧೀಕರಣ ಅತ್ಯಾವಶ್ಯಕ. ರಷ್ಯಾದಲ್ಲಿ ಇದನ್ನು ರಾಷ್ಟ್ರೀಯ ಆಂದೋಳನದ ರೂಪದಲ್ಲಿ ಯಶಸ್ವಿಗೊಳಿಸಿದ್ದರಿಂದ ಆ ಜನತೆ ವಿದ್ಯಾವಂತರಾದುದು ಮಾತ್ರವಲ್ಲದೇ ಆ ಸಾಧನೆಯ ರಾಷ್ಟ್ರೀಯ ಪ್ರಜ್ಞೆ ಯನ್ನು ಪಡೆದು ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯಲ್ಲಿ ಪಾಲ್ಗೊಂಡರು. ಆದರೆ ಪರಿಸ್ಥಿತಿ ಭಾರತದಲ್ಲಿ ಭಿನ್ನವಾಗಿರುವುದರಿಂದ, ಅದರ ಪ್ರಯತ್ನಕ್ಕೆ ಸಾಟಿಯಾದ ಪ್ರಬಲ ಪ್ರಯತ್ನ ರಾಷ್ಟ್ರದ ಮಟ್ಟದಲ್ಲಿ ಪ್ರಾರಂಭ ವಾಗಿರುವುದರಿಂದ ಈ ಕಾರ್ಯಕ್ರಮವನ್ನು ಇನ್ನೂ ತೀವ್ರಗೊಳಿಸಿ ನಿರಕ್ಷರತೆ ಯನ್ನು ನಮ್ಮ ನಾಡಿನಿಂದ ಮೂಲೋತ್ಪಾಟನೆ ಮಾಡಬಹುದು.

ಟಿ. ಹನುಮೇಗೌಡ

ವ್ಯಕ್ತಿಯಾಗಲಿ, ದೇಶವಾಗಲಿ ಬಯಸಿದ್ದೆಲ್ಲ ಅವರ ಜೀವಮಾನದಲ್ಲಿಯೇ ಕೈಗೂಡುವುದು ಬಹಳ ಅಪರೂಪ.

—ನೆಹರೂ

ಎಷ್ಟಿದೆಯೋ ಅಷ್ಟರಲ್ಲಿ ತೃಪ್ತಿ ಪಡಬೇಕು. ಆದರೆ ನಾವು ಹೇಗಿದ್ದೇವೋ ಹಾಗಿರುವುದರಲ್ಲಿಯೇ ತೃಪ್ತಿ ಪಡಬಾರದು.

—ಮೆರೆಂಟಿಷ್

ಮೂರ್ಖನ ಸ್ವರ್ಗ

ಒಂದಾನೊಂದು ಕಾಲದಲ್ಲಿ ಯಾವುದೋ ಒಂದು ಊರಿನಲ್ಲಿ ಕಾದಿಷ್ ಎಂಬ ಐಶ್ವರ್ಯವಂತನಿದ್ದ. ಅವನಿಗೆ ಅತ್ಸೆಲ್ ಎಂಬ ಒಬ್ಬನೇ ಮಗ. ಕಾದಿಷನ ಮನೆಯಲ್ಲಿ ಅಕ್ಸಾ ಎಂಬ ಒಬ್ಬ ತಬ್ಬಲಿ ಹುಡುಗಿ, ಕಾದಿಷನ ದೂರದ ನೆಂಟರ ಮಗಳು ಇದ್ದಳು. ಅತ್ಸೆಲ್ ಕಪ್ಪು ಕೂದಲು ಕಣ್ಣುಗಳನ್ನುಳ್ಳ ಎತ್ತರ ನಿಲುವಿನ ಹುಡುಗ. ಅಕ್ಸಾಳಿಗೆ ನೀಲಿ ಕಣ್ಣುಗಳು ಬಂಗಾರದ ಬಣ್ಣದ ಕೂದಲು ಇದ್ದುವು. ಇಬ್ಬರದೂ ಹೆಚ್ಚು ಕಡಿಮೆ ಒಂದೇ ವಯಸ್ಸು. ಎಳೆ ವಯಸ್ಸಿನಲ್ಲಿ ಅವರ ಆಟ ಪಾಠ ಊಟಗಳೆಲ್ಲ ಒಟ್ಟಿಗೆ ನಡೆಯುತ್ತಿದ್ದುವು. ಪ್ರಾಯಕ್ಕೆ ಬಂದ ಮೇಲೆ ಇವರಿಬ್ಬರೂ ಮದುವೆಯಾಗುತ್ತಾರೆಂದು ಎಲ್ಲರೂ ಎಂದುಕೊಂಡಿದ್ದರು.

ಆದರೆ ಅವರು ಬೆಳೆದು ವಯಸ್ಸಿಗೆ ಬಂದಾಗ ಅತ್ಸೆಲ್ ಇದ್ದಕ್ಕಿದ್ದಂತೆ ಕಾಯಿಲೆ ಬಿದ್ದನು. ಅದೋ ಯಾರೂ ಎಂದುಕೇಳಿ ಅರಿಯದಂಥ ವಿಚಿತ್ರ ಕಾಯಿಲೆ. ತಾನು ಸತ್ತುಹೋಗಿದ್ದೇನೆಂದು ಅತ್ಸೆಲ್ ಭಾವಿಸಿದ್ದ.

ಇವನಿಗೆ ಇಂಥ ಭಾವನೆ ಹೇಗೆ ಬಂತು ? ಅವನ ಎಳೆ ವಯಸ್ಸಿನಲ್ಲಿ ಅವನನ್ನು ನೋಡಿಕೊಳ್ಳುತ್ತಿದ್ದ ಮುದಿ ದಾದಿಯೊಬ್ಬಳು ದಿನ ನಿತ್ಯ ಅವನಿಗೆ ಸ್ವರ್ಗದ ಕತೆಗಳನ್ನು ಹೇಳುತ್ತಿದ್ದಳಂತೆ. ಸ್ವರ್ಗದಲ್ಲಿ ಓದಿ ಬರೆದು ಮಾಡಬೇಕಾಗಿಲ್ಲ. ಕೆಲಸವನ್ನೂ ಮಾಡಬೇಕಾಗಿಲ್ಲ. ಅಲ್ಲಿ ಕಾಡೆತ್ತಿನ ಹಾಗೂ ತಿಮಿಂಗಿಲಗಳ ಮಾಂಸವೇ ಆಹಾರ. ಪುಣ್ಯವಂತರಿಗೋಸ್ಕರ ದೇವರು ಮೀಸಲಾಗಿಟ್ಟಿರುವ ದ್ರಾಕ್ಷಾರಸವನ್ನೇ ಎಲ್ಲರೂ ಕುಡಿಯುವುದು. ಅಲ್ಲಿ ಬೆಳಗ್ಗೆ ಬೇಗ ಏಳಬೇಕಾಗಿಲ್ಲ. ಯಾರಿಗೂ ಅಂಥ ಕೆಲಸ ಮಾಡಬೇಕು, ಇಂಥ ಕೆಲಸ ಮಾಡಬೇಕು ಎಂಬ ನಿರ್ಬಂಧವೇನಿಲ್ಲ ಹೀಗೆಲ್ಲ ಅವಳು ಹೇಳುತ್ತಿದ್ದಳು.

ಅತ್ಸೆಲ್ ಸ್ವಭಾವತಃ ಸೋಮಾರಿ. ಬೆಳಗ್ಗೆ ಬೇಗ ಏಳುವುದು, ಪಾಠ ಓದುವುದು ಇವೆಲ್ಲ ಅವನಿಗೆ ತುಂಬ ಬೇಸರ ತರುತ್ತಿತ್ತು. ಒಂದಲ್ಲ ಒಂದು ದಿನ ತಾನು ತನ್ನ ತಂದೆಯ ವ್ಯವಹಾರವನ್ನೆಲ್ಲ ನೋಡಿಕೊಳ್ಳಬೇಕಾಗುತ್ತದೆ ಅಂತ ಅವನಿಗೆ ತಿಳಿದಿತ್ತು. ಇದು ಅವನಿಗೆ ಇಷ್ಟವಿರಲಿಲ್ಲ.

ಸ್ವರ್ಗಕ್ಕೆ ಹೋಗಲು ಇದ್ದದ್ದು ಒಂದೇ ದಾರಿ, ಸಾಯುವುದು. ಆದಷ್ಟು ಬೇಗ ತಾನು ಈ ಕೆಲಸ ಸಾಧಿಸಬೇಕು ಎಂದು ಅತ್ಸೆಲ್ ಮನಸ್ಸು ಮಾಡಿದ್ದ.

೧೯೮೩ ಅಕ್ಟೋಬರ್ ರೀಡರ್ಸ್ ಡೈಜೆಸ್ಟ್ ಸಂಚಿಕೆಯಲ್ಲಿ ಪ್ರಕಟವಾದ ಕತೆ. ಕತೆಗಾರ ಐಸಾಕ್ ಬಾಷೆವಿಸ್‌ಸಿಂಗರ್.

ಇದೇ ವಿಷಯ ಅವನು ಹಗಲು ಮೂರು ಹೊತ್ತೂ ಚಿಂತಿಸುತ್ತಿದ್ದುದರಿಂದ ತಾನು ಸತ್ತೇಹೋಗಿದ್ದೇನೆ ಎಂದು ಅವನು ಊಹಿಸಿಕೊಂಡುಬಿಟ್ಟ.

ಅವನ ತಂದೆ ತಾಯಿಗಳಿಗೆ ವಿಪರೀತ ಗಾಬರಿಯಾಯಿತು. ಅಕ್ಕಾ ಯಾರಿಗೂ ಕಾಣದಂತೆ ಅಳುತ್ತಿದ್ದಳು. ಕುಟುಂಬದವರೆಲ್ಲ ನೀನು ಸತ್ತಿಲ್ಲ ಎಂದು ಅತ್ಸೆಲ ನಿಗೆ ಮನದಟ್ಟು ಮಾಡಿಕೊಡಲು ಪ್ರಯತ್ನಿಸಿದರು. ಆದರೆ ಅವನು ಅವರ ಮಾತು ನಂಬಲು ಸಿದ್ಧನಿರಲಿಲ್ಲ. "ನನ್ನನ್ನು ನೀವೇಕೆ ಸಮಾಧಿ ಮಾಡು ವುದಿಲ್ಲ? ನಾನು ಸತ್ತುಹೋಗಿದ್ದೇನೆ ಎಂದು ನಿಮಗೆ ತಿಳಿಯುವುದಿಲ್ಲವೆ? ನಿಮ್ಮಿಂದಾಗಿನಾನು ಸ್ವರ್ಗಕ್ಕೆ ಹೋಗಲೂ ಆಗುತ್ತಿಲ್ಲ" ಎಂದು ಅವನು ಹೇಳುತ್ತಿದ್ದ.

ಅತ್ಸೆಲನನ್ನು ಪರೀಕ್ಷಿಸಲು ಎಷ್ಟೋ ಜನ ವೈದ್ಯರನ್ನು ಕರೆಸಿದರು. ಎಲ್ಲರೂ ನೀನು ಬದುಕಿದ್ದೀಯೆ ಎಂದು ಆ ಹುಡುಗನಿಗೆ ತಿಳಿಸಲು ಯತ್ನಿಸಿದರು. ನೀನು ಊಟ ಮಾಡುತ್ತಿಲ್ಲವೇ, ಮಾತನಾಡುತ್ತಿಲ್ಲವೇ ? ಎಂದು ಅವನನ್ನು ಕೇಳಿದರು. ಇದರಿಂದ ಆದದ್ದಿಷ್ಟೇ. ಕೆಲವೇ ದಿನಗಳಲ್ಲಿ ಅತ್ಸೆಲ್ ಊಟವನ್ನೇ ಕಡಿಮೆ ಮಾಡಿದ. ಅಪರೂಪಕ್ಕೆ ಯಾವಾಗಲಾದರೊಮ್ಮೆ ಮಾತಾಡಲಾರಂಭಿಸಿದ. ಅವನು ಸತ್ತೇ ಹೋಗುತ್ತಾನೆ ಎಂದು ಮನೆಯವರಿಗೆಲ್ಲ ಭಯವಾಯಿತು.

ವಿಪರೀತ ಕಳವಳಗೊಂಡ ಕಾಡಿಷ್ ಡಾಕ್ಟರ್ ಯೋಮೆತ್ಸ್ ಎಂಬ ಭಾರೀ ವೈದ್ಯರ ಹತ್ತಿರ ಹೋದ. ಈ ವೈದ್ಯರಿಗೆ ತುಂಬ ತಿಳಿವಳಿಕಸ್ಥ, ಬುದ್ಧಿವಂತನೆಂಬ ಹೆಸರಿತ್ತು. ಕಾದಿಷ್ ಅತ್ಸೆಲನ ಕಾಯಿಲೆಯ ವಿಷಯ ಪೂರ್ತಿ ತಿಳಿಸಿದ ನಂತರ ಈ ವೈದ್ಯ ಕಾಡಿಷನಿಗೆ ಹೇಳಿದರು. "ಎಂಟೇ ದಿನಗಳಲ್ಲಿ ನಿನ್ನ ಮಗನ ಕಾಯಿಲೆ ವಾಸಿ ಮಾಡುತ್ತೇನೆ. ಆದರೆ ಒಂದು ಷರತ್ತು. ನಾನು ಹೇಳಿದ್ದನ್ನೆಲ್ಲ ಅದೆಷ್ಟು ವಿಚಿತ್ರವೆನಿಸಿದರೂ ನೀನು ನಡಸಲೇಬೇಕು."

ಹಾಗೇ ಆಗಲೆಂದು ಕಾದಿಷ್ ಒಪ್ಪಿಕೊಂಡ. ಅದೇ ದಿನ ಡಾಕ್ಟರ್ ಯೊಯೆತ್ಸ್ ಅತ್ಸೆಲನನ್ನು ನೋಡಲು ಬರುವುದಾಗಿ ಹೇಳಿದ. ಕಾದಿಷ್ ಮನೆಗೆ ಹೋಗಿ ತನ್ನ ಹೆಂಡತಿ, ಅಕ್ಕಾ ಮತ್ತು ಸೇವಕರುಗಳಿಗೆಲ್ಲ ಡಾಕ್ಟರು ಹೇಳಿದ್ದನೆಲ್ಲ ಮರು ಸವಾಲೇ ಇಲ್ಲದೇ ನಡೆಸಬೇಕೆಂದು ತಿಳಿಸಿದ.

ಡಾಕ್ಟರು ಬರುತ್ತಲೂ ಅತ್ಸೆಲನ ಕೋಣೆಗೆ ಅವರನ್ನು ಕರೆದೊಯ್ದರು. ಉಪವಾಸದಿಂದ ಬಳಲಿ ಕೃಶನಾಗಿ ಬಿಳಿಚಿಕೊಂಡಿದ್ದ ಅತ್ಸೆಲ್ ಹಾಸಿಗೆ ಮೇಲೆ ಮಲಗಿದ್ದ.

ಅತ್ಸೆಲನನ್ನು ಕಾಣುತ್ತಲೂ ಡಾಕ್ಟರು ಕೂಗಿಕೊಂಡರು. "ಈ ಹೆಣವನ್ನು

ಮನೆಯಲ್ಲಿಟ್ಟುಕೊಂಡು ಏನು ಮಾಡುತ್ತಿದ್ದೀರಿ? ಶವಸಂಸ್ಕಾರ ಏಕೆ ಮಾಡುವುದಿಲ್ಲ?"

ಅತ್ಸೆಲನ ತಂದೆ ತಾಯಿಗಳಿಗೆ ಈ ಮಾತು ಕೇಳಿ ಬಹಳ ಗಾಬರಿಯಾಯಿತು. ಆದರೆ ಅತ್ಸೆಲನ ಮುಖದಲ್ಲಿ ಮುಗುಳ್ನಗು ಮಿನುಗಿತು. ನೋಡಿದಿರಾ, ನಾನು ಹೇಳುತ್ತಿದ್ದುದು ನಿಜವಲ್ಲವೇ ಎಂದು ಅವನೆಂದ.

ಡಾಕ್ಟರ ಮಾತಿನಿಂದ ಅವನ ತಂದೆ ತಾಯಿಗಳು ದಿಗ್ಭ್ರಮೆಗೊಂಡಿದ್ದರೂ ಕಾದಿಷ್ ತಾನು ಕೊಟ್ಟಿದ್ದ ವಚನವನ್ನು ಜ್ಞಾಪಿಸಿಕೊಂಡು ತಕ್ಷಣ ಶವ ಸಂಸ್ಕಾರಕ್ಕೆ ಏರ್ಪಾಡು ಮಾಡಲು ಹೋದರು.

ಅವರ ಮನೆಯಲ್ಲಿ ಒಂದು ಕೋಣೆಯನ್ನು ಸ್ವರ್ಗದಂತೆ ಕಾಣುವಂತೆ ಸಿಂಗರಿಸಬೇಕೆಂದು ಡಾಕ್ಟರು ಹೇಳಿದರು. ಕೋಣೆ ಗೋಡೆಗಳನ್ನೆಲ್ಲ ಬಿಳಿ ಸ್ಯಾಟಿನ್ ಬಟ್ಟೆಗಳಿಂದ ಮುಚ್ಚಲಾಯಿತು. ಕಿಟಕಿಗಳನ್ನೆಲ್ಲ ಮುಚ್ಚಿ ಅಲ್ಲಿಯೂ ಪರದೆಗಳನ್ನು ಹಾಕಿದರು. ಹಗಲು ರಾತ್ರಿಯೆನ್ನದೆ ಮೇಣದ ಬತ್ತಿಗಳನ್ನು ಹಚ್ಚಿ ಉರಿಸುತ್ತಿದ್ದರು ಸೇವಕರೆಲ್ಲ ಬಿಳಿ ಉಡುಪು ತೊಟ್ಟಿದ್ದರು. ಅವರ ಬೆನ್ನುಗಳಿಗೆ ರೆಕ್ಕೆಗಳನ್ನು ಕಟ್ಟಿ ಅವರೆಲ್ಲ ದೇವದೂತರಂತೆ ಕಾಣುವಂತೆ ಮಾಡಿದ್ದರು.

ತೆರೆದಿಟ್ಟ ಶವ ಪೆಟ್ಟಿಗೆಯಲ್ಲಿ ಅತ್ಸೆಲನನ್ನು ಮಲಗಿಸಿದರು. ಶವಸಂಸ್ಕಾರದ ಆಚರಣೆಗಳು ನಡೆದುವು. ಅತ್ಸೆಲನಿಗೆ ಅದೆಷ್ಟು ಸಂತೋಷವಾಯಿತೆಂದರೆ ಅದರಿಂದಲೇ ಅವನಿಗೆ ಒಂದು ರೀತಿ ಸುಸ್ತಾಗಿ ಈ ಆಚರಣೆಗಳು ನಡೆಯುತ್ತಿದ್ದಾಗ ನಿದ್ದೆ ಮಾಡಿಬಿಟ್ಟ. ಅವನಿಗೆ ಎಚ್ಚರವಾದಾಗ ಗುರ್ತೇ ಹತ್ತದಂತಿದ್ದ ಒಂದು ಕೋಣೆಯಲ್ಲಿದ್ದ.

"ನಾನೆಲ್ಲಿದ್ದೇನೆ" ಅವನು ಕೇಳಿದ.

"ಸ್ವರ್ಗದಲ್ಲಿ ಸ್ವಾಮಿ" ರೆಕ್ಕೆ ಕಟ್ಟಿಕೊಂಡಿದ್ದ ಸೇವಕ ಹೇಳಿದ.

'ನನಗೆ ತುಂಬ ಹಸಿವು. ಸ್ವಲ್ಪ ತಿಮಿಂಗಿಲದ ಮಾಂಸ ಮತ್ತು ಪವಿತ್ರ ದ್ರಾಕ್ಷಾರಸ ಬೇಕು."

ಸೇವಕರ ಮುಖ್ಯಸ್ಥ ಕೈ ಚಪ್ಪಾಳೆ ಹೊಡೆದ. ತಕ್ಷಣ ರೆಕ್ಕೆ ಕಟ್ಟಿಕೊಂಡಿದ್ದ ಅನೇಕ ಸೇವಕ ಸೇವಕಿಯರು ಮಾಂಸ, ಮೀನು, ದಾಳಿಂಬೆ, ಅನಾನಸು ಇತ್ಯಾದಿ ಹಣ್ಣುಗಳಿದ್ದ ಚಿನ್ನದ ತಟ್ಟೆಗಳನ್ನು ತಂದರು. ಉದ್ದವಾದ ಬಿಳಿಗಡ್ಡವಿದ್ದ ಎತ್ತರ ನಿಲುವಿನ ಒಬ್ಬ ಸೇವಕ ಬಂಗಾರದ ಬಟ್ಟಲಲ್ಲಿ ದ್ರಾಕ್ಷಾರಸ ತಂದ.

ಅತ್ಸೆಲ್ ಆಸೆಯಿಂದ ಗಬಗಬನೆ ಊಟಮಾಡಿದ. ಊಟವಾಗುತ್ತಲೂ ತಾನು ವಿಶ್ರಮಿಸಲು ಇಚ್ಛಿಸುತ್ತೇನೆ ಎಂದ. ಇಬ್ಬರು "ದೇವದೂತರು" ಅವನ

ಬಟ್ಟೆಗಳನ್ನು ಬಿಚ್ಚಿ ಸ್ನಾನ ಮಾಡಿಸಿ ರೇಷ್ಮೆ ಬಟ್ಟೆ ಹಾಸಿದ ಮೇಲೆ ಊದಾ ಬಣ್ಣದ ಮಖಮಲ್ಲಿನ ಮೇಲ್ಛಪ್ಪರವಿದ್ದ ಹಾಸಿಗೆಗೆ ಕೊಂಡೊಯ್ದು ಮಲಗಿಸಿದರು. ತಕ್ಷಣ ಅವನಿಗೆ ಗಾಢವಾದ ಸುಖನಿದ್ರೆ ಬಂತು.

ಅವನಿಗೆ ಎಚ್ಚರವಾದಾಗ ಬೆಳಗಾಗಿತ್ತು. ಆದರೇನು, ಅಲ್ಲಿ ರಾತ್ರಿಯಾದರೂ ಅಷ್ಟೆ ಬೆಳಗಾದರೂ ಅಷ್ಟೆ. ಕಿಟಕಿಗಳೆಲ್ಲ ಮುಚ್ಚಿದ್ದುವು. ಮೇಣಬತ್ತಿಗಳು ಉರಿಯುತ್ತಿದ್ದುವು. ಅತ್ಸೆಲ್‌ಗೆ ಎಚ್ಚರವಾದದ್ದು ಕಾಣುತ್ತಲೂ ಸೇವಕರು ಹಿಂದಿನ ದಿನದಂಥದ್ದೇ ಊಟ ತಂದರು.

ಅತ್ಸೆಲ್ ಕೇಳಿದ "ಇಲ್ಲಿ ಹಾಲು, ಕಾಫಿ, ಬ್ರೆಡ್ಡು, ಬೆಣ್ಣೆ ಸಿಗುವುದಿಲ್ಲವೇ ?"

"ಇಲ್ಲ ಸ್ವಾಮಿ ಸ್ವರ್ಗದಲ್ಲಿ ಎಲ್ಲರೂ ಯಾವಾಗಲೂ ಒಂದೇ ರೀತಿ ಆಹಾರ ತಿನ್ನುವುದು." ಎಂದ ಸೇವಕ.

"ಈಗೇನು ಬೆಳಗೋ ಇಲ್ಲ ಇನ್ನೂ ರಾತ್ರಿಯೋ ?" ಅತ್ಸೆಲ್ ಪ್ರಶ್ನಿಸಿದ.

"ಸ್ವರ್ಗದಲ್ಲಿ ಹಗಲು ರಾತ್ರಿಗಳೆಂಬುವುದಿಲ್ಲ"

ಪುನಃ ಅತ್ಸೆಲ್ ಮಾಂಸ, ಮೀನು ಹಣ್ಣು ತಿಂದು ದ್ರಾಕ್ಷಾರಸ ಕುಡಿದ. ಆದರೆ ಇವು ಯಾವುವೂ ಅವನಿಗೆ ಮೊದಲಿನಷ್ಟು ರುಚಿ ಹತ್ತಲಿಲ್ಲ. ತಿಂದಾದ ಮೇಲೆ ಅತ್ಸೆಲ್ ಸಮಯ ಎಷ್ಟು ಎಂದು ಕೇಳಿದ.

"ಸ್ವರ್ಗದಲ್ಲಿ ಸಮಯ ಎಂಬುವುದಿಲ್ಲ" ಸೇವಕ ಹೇಳಿದ.

"ನಾನೀಗ ಹಾಗಾದರೆ ಏನು ಮಾಡಲಿ ? ಅತ್ಸೆಲ್ ಕೇಳಿದ.

'ಸ್ವಾಮಿ, ಸ್ವರ್ಗದಲ್ಲಿ ಯಾರೂ ಏನೂ ಮಾಡುವುದಿಲ್ಲ"

"ಉಳಿದ ಸಂತರೆಲ್ಲ ಎಲ್ಲಿದ್ದಾರೆ ?" ಅತ್ಸೆಲ್ ವಿಚಾರಿಸಿದ.

"ಸ್ವರ್ಗದಲ್ಲಿ ಪ್ರತಿ ಸಂಸಾರಕ್ಕೂ ತನ್ನದೇ ಒಂದು ಮನೆ ಇರುತ್ತದೆ"

"ಅವರನ್ನು ಭೇಟಿಯಾಗಲು ಹೋಗಬಹುದೇ ?"

"ಸ್ವರ್ಗದಲ್ಲಿ ಹಾಗೆಲ್ಲ ಒಬ್ಬರ ಮನೆಗೆ ಒಬ್ಬರು ಹೋಗಲು ಆಗುವುದಿಲ್ಲ. ಮನೆಯಿಂದ ಮನೆಗೆ ವಿಪರೀತ ದೂರವಿರುತ್ತದೆ. ಹಾಗೆ ಹೋಗಲು ಸಾವಿರ ವರ್ಷಗಳೇ ಹಿಡಿಯುತ್ತವೆ".

"ಹಾಗಿದ್ದಲ್ಲಿ ನನ್ನ ಮನೆಯವರು ಇಲ್ಲಿಗೆ ಯಾವಾಗ ಬರುತ್ತಾರೆ ?"

"ನಿನ್ನ ತಂದೆಗೆ ಇನ್ನೂ ೨೦ ವರ್ಷ ಆಯುಸ್ಸಿದೆ. ತಾಯಿಗೆ ೩೦ ವರ್ಷ. ಜೀವಂತವಾಗಿರುವವರು ಇಲ್ಲಿಗೆ ಬರಲಾರರು"

"ಅಕ್ಕ ?"

"ಅವಳಿಗಿನ್ನೂ ಐವತ್ತು ವರ್ಷ ಆಯುಸ್ಸು"

"ಅಂದರೆ ಅಷ್ಟು ದಿನ ನಾನಿಲ್ಲಿ ಒಂಟಿಯಾಗಿ ಇರಬೇಕಾ?"

"ಹೌದು ಸ್ವಾಮಿ".

ಸ್ವಲ್ಪ ಹೊತ್ತು ಅತ್ಸೆಲ್ ಯೋಚಿಸುತ್ತಾ ಕುಳಿತ. ಬಳಿಕ ಕೇಳಿದ.

"ಅಕ್ಸಾ ಮುಂದೇನು ಮಾಡುತ್ತಾಳೆ?"

"ಈಗ ಅವಳು ನಿನ್ನನ್ನು ನೆನೆಸಿಕೊಂಡು ದುಃಖಿಸುತ್ತಿದ್ದಾಳೆ. ಆದರೆ ಒಂದಲ್ಲ ಒಂದು ದಿನ ಅವಳು ನಿನ್ನನ್ನು ಮರೆತು ಬೇರೆ ಒಬ್ಬ ತರುಣನನ್ನು ಮದುವೆಯಾಗುತ್ತಾಳೆ. ಬದುಕಿ ಉಳಿದವರೆಲ್ಲ ಹಾಗೇ ಮಾಡುವುದು.

ಅತ್ಸೆಲ್ ಶತಪಥ ತಿರುಗಲಾರಂಭಿಸಿದ. ಮೊದಲ ಬಾರಿಗೆ ಅವನಿಗೆ ಕೆಲಸ ಮಾಡಬೇಕೆಂಬ ಮನಸ್ಸು ಬಂದಿತ್ತು. ಆದರೆ ಸ್ವರ್ಗದಲ್ಲಿ ಮಾಡಲು ಏನೂ ಇರಲಿಲ್ಲ. ಅವನಿಗೆ ತಂದೆಯು ನೆನಪಾಗುತಿತ್ತು; ತಾಯಿಯನ್ನು ಕಾಣಬೇಕೆಂಬ ಹಂಬಲ ಬಂದಿತ್ತು. ಅಕ್ಸಾಗಾಗಿ ಅವನು ಹಾತೊರೆಯತೊಡಗಿದ. ಪಾಠ ಪ್ರವಚನ ಏನಾದರೂಇದ್ದಿದ್ದರೆ ಎನ್ನಿಸಿತು. ಪ್ರಯಾಣ ಮಾಡುವುದು ಎಷ್ಟು ಚೆನ್ನ ಎನಿಸಿತು. ಕುದುರೆ ಸವಾರಿ, ಗೆಳೆಯರೊಡನೆ ಮಾತುಕತೆ ಎಲ್ಲ ಬೇಕೆನ್ನಿಸಿತು.

ಕಡೆಗೆ ಅವನು ತನ್ನ ದುಃಖ ತೋರಿಸಿಕೊಳ್ಳುವ ಕ್ಷಣ ಬಂದಿತು. ಒಬ್ಬ ಸೇವಕನೆದುರಿಗೆ ಹೀಗೆಂದ "ಭೂಮಿಯಲ್ಲಿ ಬದುಕುವುದು ಕಷ್ಟವೆಂದಿದ್ದೆ. ಆದು ನಿಜವಲ್ಲ".

"ಸ್ವಾಮಿ, ಜೀವದಿಂದಿರುವುದು ಕಷ್ಟ. ಪಾಠ ಓದಬೇಕು, ಕೆಲಸ ಮಾಡಬೇಕು. ವ್ಯಾಪಾರದ ವಹಿವಾಟು ನೋಡಿಕೊಳ್ಳಬೇಕು. ಇಲ್ಲಿ ಏನೂ ಕಷ್ಟವಿಲ್ಲ. ಎಲ್ಲ ಸುಲಭ".

"ಅಬ್ಬ ಇಲ್ಲಿ ಹೀಗೆ ಕುಳಿತಿರುವುದಕ್ಕಿಂತ ಕಟ್ಟಿಗೆ ಕಡಿಯುವುದಾದರೂ ವಾಸಿ, ಕಲ್ಲು ಮಣ್ಣನ್ನಾದರೂ ಹೊರಬಹುದು. ಇರಲಿ, ಎಷ್ಟು ದಿನ ನಾನು ಹೀಗೆ ಇರಬೇಕು?"

"ಎಂದೆಂದಿಗೂ"

"ಎಂದೆಂದಿಗೂ ಇಲ್ಲಿಯೇ ಹೀಗೇ ಇರಬೇಕೆ?" ಅತ್ಸೆಲ್ ತಲೆಕೂದಲು ಕಿತ್ತುಕೊಳ್ಳತೊಡಗಿದ. "ನಾನು ಪ್ರಾಣ ಕಳೆದುಕೊಳ್ಳುತ್ತೇನೆ ಅಷ್ಟೆ".

"ಸತ್ತು ಹೋಗಿರುವವರು ಪ್ರಾಣ ಕಳೆದುಕೊಳ್ಳುವುದು ಹೇಗೆ ಸ್ವಾಮಿ?

ಹೀಗೆ ಎಂಟು ದಿನ ಕಳೆಯುವ ಹೊತ್ತಿಗೆ ಅತ್ಸೆಲ್‌ಗೆ ಸಾಕು ಸಾಕಾಗಿ ಹೋಗಿತ್ತು. ಮೊದಲೇ ವ್ಯವಸ್ಥೆ ಮಾಡಿಕೊಂಡಿದ್ದಂತೆ ಆ ದಿನ ಸೇವಕನೊಬ್ಬ

ಅತ್ಸಿಲನಿಗೆ ತಿಳಿಸಿದ "ಸ್ವಾಮಿ, ಏನೋ ತಪ್ಪಾಗಿಹೋಗಿದೆ. ನೀವು ಸತ್ತಿಲ್ಲ. ಭೂಮಿಗೆ ವಾಪಸ್ಸು ಹೋಗಬಹುದು".

"ನಾನು ಸತ್ತಿಲ್ಲವೇ ?"

"ಇಲ್ಲ, ನಿಮಗೆ ಜೀವ ಇದೆ. ನಾನು ನಿಮ್ಮನ್ನು ಭೂಮಿಗೆ ಕರೆದುಕೊಂಡು ಹೋಗುತ್ತೇನೆ".

ಅತ್ಸಿಲನ ಸಂತೋಷ ಹೇಳತೀರದು. ಸೇವಕ ಅವನ ಕಣ್ಣು ಕಟ್ಟಿ ಅವರ ಮನೆಯಲ್ಲೆಲ್ಲ ಹಿಂದೆ ಮುಂದೆ ಸುತ್ತಾಡಿಸಿ ಕಡೆಗೆ ಅವನ ಮನೆಯವರು ಕುಳಿತಿದ್ದ ಕೋಣೆಗೆ ತಂದು ಕಣ್ಣು ಬಿಚ್ಚಿದ.

ಅದು ಒಳ್ಳೆ ಸೊಗಸಾದ ದಿನ. ಸೂರ್ಯ ಪ್ರಕಾಶಿಸುತ್ತಿದ್ದ. ತೆರೆದಿಟ್ಟ ಕಿಟಕಿಗಳಿಂದ ಒಳಗೆ ಬೆಳಕು ಬೀಳುತ್ತಿತ್ತು. ಹೊರಗೆ ತೋಟದಲ್ಲಿ ಹಕ್ಕಿಗಳು ಹಾಡುತ್ತಿದ್ದವು. ದುಂಬಿಗಳು ಗುಯ್‌ಗುಡುತ್ತಿದ್ದುವು. ಆನಂದದಿಂದ ಅತ್ಸಿಲ್ ತನ್ನ ಅಪ್ಪ, ಅಮ್ಮ ಮತ್ತು ಅಕ್ಸಾರನ್ನು ತಬ್ಬಿ ಮುದ್ದಿಸಿದ.

ಅಕ್ಸಾಳನ್ನು ಅವನು ಕೇಳಿದ "ನಿನಗೆ ನನ್ನ ಮೇಲೆ ಇನ್ನೂ ಪ್ರೀತಿ ಇದೆಯೇ ?"

"ಇದೆ ಅತ್ಸಿಲ್, ನಿನ್ನನ್ನು ನಾನು ಹೇಗೆ ಮರೆಯಲಿ ?"

"ಹಾಗಿದ್ದರೆ ನಾವು ಮದುವೆಯಾಗೋಣ"

ಕೆಲವೇ ದಿನಗಳಲ್ಲಿ ಅವರ ಮದುವೆಯಾಯಿತು. ಡಾ|| ಯೋಯೆತ್ಸ್‌ರೇ ಮುಖ್ಯ ಅತಿಥಿ. ಸಂಗೀತಗಾರ ವಾದ್ಯ ನುಡಿಸುತ್ತಿದ್ದರು. ಅನೇಕ ಅತಿಥಿಗಳು ಮದುವೆಗೆ ಎಷ್ಟೋ ದೂರದ ಊರುಗಳಿಂದ ಬಂದರು. ಬೆಲೆ ಬಾಳುವ ಉಡುಗೊರೆಗಳನ್ನು ತಂದರು. ಏಳು ದಿನ, ಏಳು ರಾತ್ರಿ ಸಂಭ್ರಮದಲ್ಲಿ ಮದುವೆ ನಡೆಯಿತು.

ಅತ್ಸಿಲ್ ಅಕ್ಸಾ ತುಂಬಾ ಸುಖವಾಗಿದ್ದರು. ಮುಪ್ಪಾಗುವವರೆಗೆ ಬಾಳಿದರು. ಅತ್ಸಿಲ್ ಸೋಮಾರಿತನ ಬಿಟ್ಟು ಆ ಪ್ರದೇಶದಲ್ಲೇ ಅತ್ಯಂತ ಬುದ್ಧಿವಂತ ಶ್ರದ್ಧಾವಂತ ವರ್ತಕನೆನಿಸಿದ.

ಮದುವೆಯಾಗುವವರೆಗೆ ಅತ್ಸಿಲನಿಗೆ ಡಾ|| ಯೋಯೆತ್ಸ್ ತನ್ನನ್ನು ಹೇಗೆ ಗುಣಪಡಿಸಿದರು. ತಾನು ಇದ್ದುದು ನಕಲಿ ಸ್ವರ್ಗದಲ್ಲಿ ಎಂದು ಯಾರೂ ಹೇಳಲಿಲ್ಲ. ಅಕ್ಸಾ ಮತ್ತು ಅತ್ಸಿಲ್ ಈ ಚಿಕಿತ್ಸೆಯ ಕತೆಯನ್ನು ತಮ್ಮ ಮಕ್ಕಳು ಮೊಮ್ಮಕ್ಕಳುಗಳಿಗೆಲ್ಲ ಹೇಳುತ್ತಿದ್ದರು. ಪ್ರತಿಸಲ ಕತೆ ಮುಗಿಸುವಾಗಲೂ ಅವರು ಹೀಗೆನ್ನುತ್ತಿದ್ದರು "ಆದರೆ ಸ್ವರ್ಗ ಎಂದರೆ ಹೇಗಿರುತ್ತದೆಯೋ ಯಾರು ತಾನೇ ಹೇಳಬಲ್ಲರು ?"

ಯಮುನಾಬಾಯಿ ಆರ್. ರಾವ್

ಜಂತುಕೃತ ವಿಷಾಘಾತ ಪ್ರಸಂಗಗಳಲ್ಲಿ ಪ್ರಥಮ ಚಿಕಿತ್ಸೆ - ಸರ್ಪವಿಷ

ಮನುಷ್ಯರು ಪ್ರಾಣಿಗಳ ವಿಷದಿಂದ ತೀವ್ರವಾಗಿ ಬಾಧಿತರಾಗುವ ಪ್ರಸಂಗಗಳಲ್ಲಿ ಹಾವು ಕಡಿತ ಪ್ರಮುಖ. ಸಾಧಾರಣವಾಗಿ ಇದು ನಗರಗಳಿಗಿಂತ ಹಳ್ಳಿಗಾಡುಗಳಲ್ಲಿ ಕಾಣಬರುವುದು ಹೆಚ್ಚು. ಜನಭರಿತ ಸ್ಥಳಗಳಲ್ಲಿ ಹಾವುಗಳು ಸೇರಿಕೊಳ್ಳುವುದು ಅಪರೂಪ. ಗದ್ದೆ ಹೊಲ ತೋಟಗಳಲ್ಲಿ, ಗೋಮಾಳಗಳಲ್ಲಿ ಮತ್ತು ರೈಲು ಮಾರ್ಗದಗುಂಟ ಹಾವುಗಳು ಕಾಣಸಿಗುತ್ತವೆ. ಮಿಕ್ಕೆಲ್ಲ ಸರೀಸೃಪಗಳಂತೆಯೇ (Reptiles) ಹಾವುಗಳು. ಇಂಥ ಸ್ಥಳಗಳಲ್ಲಿ ಪೊಟರೆ ಬಿಲಗಳಲ್ಲಿ, ಸೋಗುಸೌದೆ ರಾಶಿಗಳ ನಡುವೆ, ಒಟ್ಟೆ ಸಂದಿಯಲ್ಲಿ ಹಗಲು ಸುಡು ಬಿಸಿಲಿನ ವೇಳೆ ಹುದುಕಿಕೊಂಡು ನಿಷ್ಪ್ರಪಂಚಸ್ಥಿತಿಯಲ್ಲಿದ್ದು ತಂಪು ಕಾಲದಲ್ಲಿ ಮತ್ತು ರಾತ್ರಿ ಆಹಾರಕ್ಕಾಗಿ ಸಂಚಾರ ಹೊರಡುತ್ತವೆ. ಹಾವುಗಳು ಹುತ್ತಗಳಲ್ಲಿ ವಾಸಿಸುತ್ತವೆ ಎಂಬುದು ಜನಸಾಮಾನ್ಯ ನಂಬಿಕೆ. ಮೂಲತಃ ಹುತ್ತ ಕಟ್ಟಿ ಅದರೊಳಗೆ ವಾಸಿಸುವುವು ಗೆದ್ದಲುಹುಳುಗಳು. ಅವನ್ನು ತಿನ್ನಲು ಬಹುಶಃ ಹಾವುಗಳು ಹುತ್ತದೊಳಹೋಗುತ್ತವೆ. ಸ್ಥಳ ಅನುಕೂಲವಾಗುವುದರಿಂದ ಅವು ಅಲ್ಲೇ ಬೀಡುಬಿಡುವುದು ಆಶ್ಚರ್ಯವಿಲ್ಲ. ಆದರೆ ಬೆಳೆಯುತ್ತಿರುವ ಹುತ್ತ ಗೆದ್ದಲಿನ ಚಟುವಟಿಕೆಯಿಂದಲೇ ಬೆಳೆಯುತ್ತಿರುವುದರಿಂದ ಅಂಥ ಹುತ್ತದಲ್ಲಿ ಹಾವು ಇರುವ ಸಂಭವ ಕಡಿಮೆ. ಅಂತೂ ಹುತ್ತ ಇದೆ ಎಂದರೆ ಅದರೊಳಗೆ ಹಾವು ಇರುತ್ತವೆ ಎಂಬ ಮಾತಿನಲ್ಲಿ ನಿಜಾಂಶ ಇಲ್ಲದೇ ಇಲ್ಲ. ಹಾವುಗಳು ಇರಬಹುದಾದ ಇಂಥ ಕಡೆಗಳಲ್ಲಿ ಜನ ಓಡಾಡುತ್ತ ಹಾವನ್ನು ತಾಕಿಯೋ ತುಳಿದೋ ಅದನ್ನು ರೇಗಿಸಿ ಹಾವು ಕಡಿತಕ್ಕೆ ಈಡಾಗುವುದು ಸಾಮಾನ್ಯ. ಬೆಳಗ್ಗೆ ಎಳೆ ಬಿಸಿಲಿನಲ್ಲಿ ಮೈಕಾಯಿಸಿಕೊಳ್ಳುತ್ತ ಹಾವುಗಳು ಮೊದ್ದಾಗಿ ಬಿದ್ದುಕೊಂಡಿರುವುದು ಉಂಟು. ಜನರ ಆಕಸ್ಮಿಕ ತುಳಿತಕ್ಕೆ ಸಿಕ್ಕಿ ಇವು ಕಡಿಯಬಹುದು. ಆದರೆ ಸಾಮಾನ್ಯವಾಗಿ ಹಾವುಗಳು ತಾವಾಗಿಯೇ ವಿನಾಕಾರಣ ಜನರನ್ನು ಕಡಿಯುವುದು ಅಪರೂಪ.

ಹಾವು ಕಡಿದ ಸಂದರ್ಭಗಳಲ್ಲಿ ವ್ಯಕ್ತಿಗಳು ಸಾಯದೆ ಬದುಕಿಉಳಿಯುವ ಸಂಭವ ಉಂಟೆಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದೆ. ಆದರೂ ಹಾವು ಕಡಿತ ಎಂದರೆ ಅದು ಮಾರಕ ಪ್ರಸಂಗ ಎಂಬ ಹೆದರಿಕೆ ಸರ್ವಸಾಮಾನ್ಯ. ಅನೇಕ ವೇಳೆ ಈ ಹೆದರಿಕೆಯಿಂದಲೇ ವ್ಯಕ್ತಿಗೆ ಮರಣ ಉಂಟಾಗಿರುವುದಿದೆ.

ಕಡ್ಡಿಮುಳ್ಳುಗಳು ಚುಚ್ಚಿದಾಗ ಕಾಕತಾಳೀಯವಾಗಿ ಆ ನೆರೆಯಲ್ಲಿ ಹಾವು ಹರಿದುಹೋಗುತ್ತಿದ್ದರೆ ಆ ಹಾವೇ ಕಚ್ಚಿತೇನೋ ಎನ್ನುವ ಭೀತಿ ಹುಟ್ಟುವುದು ಸಹಜ. ಕಡಿದೇ ಇದ್ದರೂ ಅದು ವಿಷದ ಹಾವೇ ಅಲ್ಲವೇ ಎಂದು ನಿರ್ಧರಿಸಿಕೊಳ್ಳುವ ಚಿತ್ತಸ್ಥೈರ್ಯ ಇಲ್ಲದೇ ಇರುವುದು ಸಹಜ. ಹಾವು ಕಡಿದಿರುವುದೇ ನಿಜ; ಅದು ವಿಷದ ಹಾವೇ ಸರಿ; ಇನ್ನು ಸಾವು ತಪ್ಪದು—ಎಂದೇ ವ್ಯಕ್ತಿ ನಂಬಿ ವಿಷದ ಹಾವು ಕಡಿದು ವಿಷವೇರಿ ಸಂಭವಿಸುವ ಮರಣಕ್ಕಿಂತಲೂ ಶೀಘ್ರವಾಗಿಯೇ ಮರಣ ಹೊಂದುವುದು ಇದೆ. ಹಾವು ವಿಷದಿಂದ ಕಾಣಬರುವ ಮುಖ್ಯ ಬಾಧೆಗಳೆಲ್ಲವೂ ಇಂಥ ನಕಲಿ ಸಂದರ್ಭಗಳಲ್ಲಿಯೂ ಕಾಣಬರಬಹುದಾದ್ದರಿಂದ ಪ್ರಥಮಚಿಕಿತ್ಸಕನಿಗೂ ಅದು ನಿಜವಾದ ಹಾವು ಕಡಿತ ಪ್ರಸಂಗವೇ ಇರಬಹುದು ಎನ್ನುವ ಅನುಮಾನ ಬರುತ್ತದೆ. ಆದ್ದರಿಂದ ಪ್ರಸ್ತುತ ಪ್ರಸಂಗ ಹಾವು ಕಡಿತದಿಂದ ಬಂದು ಒದಗಿರುವುದೇ, ಅಲ್ಲವೇ ಎಂದು ಮೊದಲು ನಿರ್ಧರಿಸಿಕೊಳ್ಳಬೇಕಾದುದು ಅಗತ್ಯ. ಅದಕ್ಕಿಂತ ಹೆಚ್ಚಾಗಿ ಪ್ರಸಂಗಕ್ಕೆ ತುತ್ತಾಗಿರುವ ವ್ಯಕ್ತಿಗೆ ಧೈರ್ಯ ಹೇಳುವುದು ಮುಖ್ಯ. ಚುಚ್ಚಿದಂತಾದುದು ಮುಳ್ಳಿನಿಂದ ಆಗಿರಬಹುದು; ಏನೋ ಕಡಿದೇ ಇದ್ದರೆ, ಅದು ಹಾವು ಆಗಿಲ್ಲದಿರಬಹುದು; ಹಾವೇಕಡಿದಿದ್ದರೂ ಅದು ವಿಷದಹಾವೇ ಆಗಿದ್ದರೂ ಅದು ಅಲ್ಪಪ್ರಮಾಣದ ವಿಷವನ್ನೋ ತೀವ್ರವಲ್ಲದ ವಿಷವನ್ನೋ ಉಗುಳಿರಬಹುದು; ಹೇಗೇ ಆಗಿದ್ದರೂ ಪ್ರಥಮ ಚಿಕಿತ್ಸೆ ಇದೆ; ತಜ್ಞ ಚಿಕಿತ್ಸೆ ಇದೆ; ಯಾವುದೇ ಹಾವಿನ ವಿಷಕ್ಕೂ ಪ್ರತಿವಿಷ ಇದೆ; ವೃಥಾ ಹೆದರಿಕೆ ಬೇಡ ಎಂದೆಲ್ಲ ವ್ಯಕ್ತಿಗೆ ಪದೇ ಪದೇ ಹೇಳುತ್ತ ಧೈರ್ಯ ಕೊಡಬೇಕು. ತಾನು ಮಾತ್ರ ಯುಕ್ತಕಾರ್ಯಗಳಲ್ಲಿ ಕಿಂಚಿತ್ತೂ ತಡಮಾಡದೆ ಉದ್ಯುಕ್ತನಾಗಿರಬೇಕು.

ಹಾವು ಕಡಿಯಿತೇನೋ ಎನ್ನಿಸಿದಾಗ, ಯಾವುದಾದರೂ ಹಾವು ಕಂಡರೆ, ಅಥವಾ ಹುಡುಕಿದಾಗ ಯಾವುದಾದರೂ ಹಾವು ಸಿಕ್ಕಿದರೆ ಅದನ್ನು ಕೊಂದು ಹಾಕುವುದು ರೂಢಿ. ಹಾವು ತಪ್ಪಿಸಿಕೊಂಡರೂ ಅದನ್ನು ಕಣ್ಣಾರೆ ನೋಡಿ ಅದು ಎಂಥ ಹಾವೆಂದು ತಿಳಿದುಕೊಳ್ಳುವುದು ಸಾಧ್ಯ. ವಿಷಭರಿತ ಹಾವೇ ಅಲ್ಲವೇ ಎಂದು ಪತ್ತೆಹಚ್ಚುವುದು ಮುಖ್ಯ. ಹಾವು ಕಣ್ಣಿಗೆ ಬೀಳದೆ ಇದ್ದ ಸಂದರ್ಭಗಳಲ್ಲೂ, ಗಾಯ ಹಾವುಕಡಿತದಿಂದ ಆದದ್ದೆ, ಹಾಗಿದ್ದರೆ ಅದು ವಿಷ ಹಾವಿನ ಕಡಿತದಿಂದ ಆದುದೇ ಎಂದು ನಿರ್ಧರಿಸಬಹುದು. ಪ್ರಥಮಚಿಕಿತ್ಸಕನಿಗೆ ಹೀಗೆ ನಿರ್ಧರಿಸಬಹುದಾದ ವಿಧಾನಗಳು ತಿಳಿದಿರಬೇಕಾದುದು ಅಗತ್ಯ.

ಮುಳ್ಳೋಕಡ್ಡಿಯೋ ಚುಚ್ಚಿದ್ದರೆ ಸಾಧಾರಣವಾಗಿ ಒಂದೇ ಚುಚ್ಚುಗಾಯ

ವಿರುತ್ತದೆ. ಅದರಿಂದ ೧-೨ ಮಿನಿಟುಗಳು ರಕ್ತಸುರಿದು ರಕ್ತ ಹೆಪ್ಪುಗಟ್ಟಿ ಗಾಯ ಮುಚ್ಚಿಕೊಳ್ಳುತ್ತದೆ. ಹಾವು ಕಡಿದಿದ್ದರೆ ಸಾಮಾನ್ಯವಾಗಿ ಎರಡೋ ಇಲ್ಲವೇ ಸಾಲಾಗಿ ಅನೇಕವೋ ರಂಧ್ರಗಳಿರುತ್ತವೆ. ಇವುಗಳಿಂದ ಹೆಚ್ಚು ಕಾಲ ರಕ್ತ ಒಸರುತ್ತ ಇರುತ್ತದೆ. ಗೀರುಗಾಯ ಸಾಮಾನ್ಯವಾಗಿ ಹಾವು ಕಚ್ಚುವುದರಿಂದ ಸಂಭವಿಸುವುದಿಲ್ಲ. ಸಾಲು ರಂಧ್ರಗಳಿದ್ದರೆ ಅದು ವಿಷರಹಿತ ಹಾವು ಕಚ್ಚಿರುವುದರಿಂದ ಆದದ್ದು ಎಂದು ತಿಳಿಯಬೇಕು. ಹತ್ತಿರ ಹತ್ತಿರವಾಗಿರುವ ಮತ್ತು ನಿರಂತರವಾಗಿ ರಕ್ತ ಒಸರುತ್ತಲೇ ಇರುವ ಎರಡು ರಂಧ್ರಗಳಿದ್ದರೆ ಅದು ವಿಷಭರಿತ ಹಾವಿನ ಕಡಿತದಿಂದಲೇ ಆಗಿರಬೇಕು ಎಂದು ನಿರ್ಧರಿಸಬಹುದು.

ಹಾವನ್ನು ನೋಡಬಹುದಾಗಿರುವ ಸಂದರ್ಭಗಳಲ್ಲಿ ಅದು ವಿಷದಹಾವೇ ಅಲ್ಲವೇ ಎಂದು ನಿರ್ಧರಿಸುವುದು ಸುಲಭ. ಭಾರತದಲ್ಲಿ ಸುಮಾರು ೩೦೦ ಬಗೆ ಹಾವುಗಳು ಇವೆ ಎಂದೂ ಇವುಗಳಲ್ಲಿ ಸುಮಾರು ೩೦ ಬಗೆ ಮಾತ್ರ ಮಾರಕ ವಿಷಧರಗಳೆಂದೂ ತಿಳಿದಿದೆ. ಕಡಲಿನಲ್ಲಿ ವಾಸಿಸುವ ಹಾವುಗಳೆಲ್ಲವೂ ತೀವ್ರವಿಷಧರಗಳೆನ್ನಲಾಗಿದೆ. ವಾಸ್ತವವಾಗಿ ಎಲ್ಲಾ ಹಾವುಗಳೂ ವಿಷಧರಗಳೇ; ಈ ವಿಷ ಆಹಾರ ಜಂತುಗಳನ್ನು ನಿಶ್ಚೇತನಗೊಳಿಸಿ ಕಬಳಿಸುವುದಕ್ಕೆ ಉಪಯುಕ್ತವಾಗಿದೆ. ಭಾರತದ ಸುಮಾರು ೨೭೦ ಜಾತಿ ಹಾವುಗಳಲ್ಲಿ ಈ ವಿಷ ಮನುಷ್ಯರಿಗೂ ದೊಡ್ಡ ಪ್ರಾಣಿಗಳಿಗೂ ಕೇಡನ್ನು ಉಂಟುಮಾಡುವಂಥದ್ದಲ್ಲ. ಹಾವಿನ ಅಡಿಮೈ ಮೇಲೆ ಅಗಲವಾದ ಹಲ್ಲೆಗಳಂತಿರುವ ಗುರುತುಗಳಿದ್ದರೆ ಅದು ಸಾಧಾರಣವಾಗಿ ವಿಷದ ಹಾವೆಂದು ನಂಬಬಹುದು. ಇಂಥ ಹಾವುಗಳಲ್ಲಿ ತಲೆಯಮೇಲೂ ಸಣ್ಣದೊಡ್ಡ ಹಲ್ಲೆ ಆಕಾರಗಳನ್ನು ಗುರುತಿಸಬಹುದು. ಹಾವನ್ನು ಸಾಯಿಸಿದ್ದಲ್ಲಿ ಅದರ ಬಾಯನ್ನು ಎಚ್ಚರಿಕೆಯಿಂದ ಬಿಡಿಸಿನೋಡಿದರೆ ವಿಷಭರಿತ ಹಾವುಗಳಲ್ಲಿ ಎರಡು ಕೋರೆಹಲ್ಲುಗಳು ಮಿಕ್ಕಹಲ್ಲುಗಳಿಗಿಂತ ಉದ್ದವಾಗಿಯೂ ಪ್ರಮುಖವಾಗಿಯೂ ಕಂಡುಬರುತ್ತವೆ ಇವೇ ವಿಷದ ಹಲ್ಲುಗಳು. ವಿಷರಹಿತ ಹಾವುಗಳಲ್ಲಿ ಎಲ್ಲ ಹಲ್ಲುಗಳೂ ಒಂದೇ ಸಮನಾಗಿರುತ್ತವೆ

ಸಾಧಾರಣವಾಗಿ ವಾಸಸ್ಥಳಗಳ ಹತ್ತಿರ ಇರುವ ವಿಷಧರ ಹಾವುಗಳೆಂದರೆ ನಾಗರಹಾವು ಮತ್ತು ಕಟ್ಟುಹಾವು. ಇವು ಇಲಿ, ಕೋಳಿಮರಿ ಕೋಳಿಮೊಟ್ಟೆಗಳನ್ನು ಕಬಳಿಸಲು ಮನೆ ಸೆರೆಯಲ್ಲಿ ಸಂಜೆ ಹಾಗೂ ರಾತ್ರಿವೇಳೆ ಓಡಾಡುತ್ತಿರುತ್ತವೆ. ನಾಗರಹಾವು ಮನೆಯೊಳಗೆ ಪ್ರವೇಶಿಸುವುದು ಅಪರೂಪ. ಇದು ಕಚ್ಚುವಾಗ ಹೆಡೆಎತ್ತಿ ಹೊಡೆಯುತ್ತದೆ. ಕಟ್ಟುಹಾವು ಮನೆಯ ಒಳಹೊಕ್ಕು ಸೂರಿನ ಸಂದಿ, ಪೆಟ್ಟಿಗೆ, ಹಾಸಿಗೆಗಳ ಸಂದಿ ಅವಿತಿರುವುದು ಸಾಮಾನ್ಯ.

ಮೂರನೆಯ ಬಗೆ ವಿಷಸರ್ಪ ಮಂಡಲದಹಾವು. ಇದು ಸಾಮಾನ್ಯವಾಗಿ ಒಣ್ಣೆ ಸಂದಿ ಸೋಗಿನ ಸಂದಿಗಳಲ್ಲಿ ಇರುತ್ತದೆ. ಇದರಲ್ಲಿ ಒಂದು ವಿಶಿಷ್ಟ ಬಗೆ ಕೊಳಕುಮಂಡಲ ಎನ್ನುವುದು. ಐದನೆಯ ಬಗೆ ವಿಷದಹಾವು ಕಾಳಿಂಗಸರ್ಪ ಅಥವಾ ಕರಿನಾಗರಹಾವು. ಇದು ಸಾಮಾನ್ಯವಾಗಿ ದಟ್ಟಕಾಡಿನಲ್ಲಿ ಮಾತ್ರ ಇರುವುದಲ್ಲದೆ ಮನುಷ್ಯರನ್ನೂ ಪ್ರಾಣಿಗಳನ್ನೂ ಕಂಡಲ್ಲಿ ಅಟ್ಟಿಸಿಕೊಂಡು ಬರುವುದೆಂದು ಹೇಳುತ್ತಾರೆ. ಸುಮಾರು ನಾಲ್ಕು ಮೀಟರುಗಳಿಗಿಂತಲೂ ಉದ್ದವಾಗಿರಬಹುದಾದ ಈ ಹಾವು ಲೋಕದಲ್ಲೇ ಅತಿ ಉದ್ದವಾದ ವಿಷಧರ ಸರ್ಪ. ಇದರ ವಿಷ ಶೀಘ್ರ ಮಾರಕವೂ ಹೌದು, ಈ ಹಾವು ಕಡಿದ ಅರ್ಧಗಂಟೆ ಯೊಳಗೆ ಮರಣಸಂಭವಿಸುವುದೆಂದು ತಿಳಿದಿದೆ. ಹೆಸರೇ ಹೇಳುವಂತೆ ಇದು ಕಪ್ಪಗೆ ಮಿರಿಮಿರಿ ಮಿಂಚುವ ಹಾವು. ಬಣ್ಣ ಮಾಸಲು ಬೂದೂ ಆಗಿರಬಹುದು. ಇದೂ ನಾಗರಹಾವಿನಂತೆ ಹೆಡೆ ಎತ್ತಬಲ್ಲದು. ವಾಸ್ತವವಾಗಿ ನಾಗರಹಾವಿ ಗಿಂತಲೂ ಹೆಚ್ಚು ಎತ್ತರಕ್ಕೆ–ಸುಮಾರು ಒಂದೂವರೆ ಮೀಟರಿಗೂ ಮೀರಿ, ಹೆಡೆ ಎತ್ತಬಲ್ಲದು. ಹೆಡೆ ನಾಗರಹಾವಿನ ಹೆಡೆಯಷ್ಟು ಅಗಲವಾಗಿ ಇರುವುದಿಲ್ಲ. ನಾಗರಹಾವಿನ ಹೆಡೆಯ ಮೇಲಿರುವಂತೆ ಇದರ ಹೆಡೆಯಲ್ಲಿ ಕನ್ನಡಕದಂಥ ಗುರುತೂ ಇರುವುದಿಲ್ಲ, ಕಾಳಿಂಗಸರ್ಪ ಇತರ ಹಾವುಗಳನ್ನೇ ತಿಂದು ಜೀವಿಸುವ ಪ್ರಾಣಿ ಎಂದು ಪ್ರತೀತಿ. ನಿಜವೇ ಇರಬಹುದು ಪ್ರಾಣಿಸಂಗ್ರಾಲಯದಲ್ಲಂತು ಇವಕ್ಕೆ ಬೇರೆ ಹಾವುಗಳನ್ನು ಉಣಿಸಾಗಿ ಕೊಡುವುದೇ ರೂಢಿ. ಮಿಕ್ಕ ಹಾವು ಗಳು ತಾವಾಗಿಯೇ ಬಂದು ಕಚ್ಚುವುದಿಲ್ಲ. ತಿಳಿಯದೆ ಅಕಸ್ಮಾತ್ತಾಗಿ ತುಳಿದು ಅಥವಾ ಇರುಕಿಸಿದಾಗ ಹಿಂಸೆ ಮಾಡಿದಂತಾಗಿ ಅವು ಕಡಿಯುತವೆ. ಅಗಲೇ ಕಡಿಯುದಿದ್ದರೂ ನಾಗರಹಾವಂತೂ ಕ್ರೋಧವನ್ನಿಟ್ಟುಕೊಂಡು ಹಿಂಸಿಸಿದ ವ್ಯಕ್ತಿ ಯನ್ನು ಗುರುತಿಸಿ ಆಮೇಲೆ ಯಾವಾಗಲೋ (೧೨ ವರ್ಷದಷ್ಟು ದೀರ್ಘ ಅವಧಿ ಎಂದೂ ಹೇಳಲಾಗಿದೆ) ಕಡಿದು ಪ್ರತೀಕಾರ ಪಡೆಯುತ್ತದೆಂಬ ಜನಾಭಿ ಪ್ರಾಯ ಬಹುಶಃ ಸುಳ್ಳು. ಹಾವುಗಳು ಮೈಥುನ ಕ್ರಿಯೆಯಲ್ಲಿ ನಿರತವಾಗಿ ದಾಗ ನೋಡಿದರೆ ಬಂದು ಕಚ್ಚುತ್ತವೆಂಬುದೂ ಸರ್ಪದಂಪತಿಗಳಲ್ಲಿ ಯಾವು ದನ್ನೇ ಕೊಂದರೆ ಉಳಿದಿರುವುದು ಮತ್ಸರ ತೀರಿಸಿಕೊಳ್ಳಲು ಬಂದುಕಡಿಯು ತ್ತದೆಂಬುದೂ ಬಹುಶಃಸುಳ್ಳು.

ನಾಗರಹಾವು ಸುಮಾರು ಒಂದು–ಒಂದೂವರೆ ಮೀಟರ್‌ಗಳಷ್ಟು ಉದ್ದ, ಸುಮಾರು ೪ ಸೆಂ.ಮೀ ದಪ್ಪವಾಗಿರುತ್ತವೆಂಬುದೂ ಗೋಧಿಕಾಳಿನಂತ ಮೈ ಮೇಲೆಲ್ಲ ಗುರುತಿರಬಹುದೆಂಬುದೂ ವಿವಿಧ ವರ್ಣಗಳಲ್ಲಿ, ಸಾಧಾರಣವಾಗಿ

ಕಂದುಬಣ್ಣದಲ್ಲಿ ಇರಬಹುದೆಂಬುದೂ ಎಲ್ಲರಿಗೂ ಗೊತ್ತಿರುವ ವಿಷಯ. ರೂಢಿಯಾಗಿಬಿಟ್ಟಿರುವ, ಹಾಲಿಟ್ಟರೆ ತನ್ನಪಾಡಿಗೆ ತಾನು ಕುಡಿದು ಹೋಗುವ, ದೇವರಪ್ರಾಯವಾದ ಹಾವೆಂದಾಗಲಿ, ಮರಿನಾಗರಹಾವೆಂದಾಗಲಿ ಉದಾಸೀನದಿಂದ ಎಚ್ಚರಿಕೆ ವಹಿಸದೆ ಇರುವುದು ತಪ್ಪು. ಎಂಥ ನಾಗರಹಾವೇ ಆಗಲಿ, ಮರಿನಾಗರಹಾವೇ ಆಗಿರಲಿ ಅದು ಕಚ್ಚಿದರೆ ಮರಣವೇ ಸಂಭವಿಸಬಹುದು ಎನ್ನುವುದನ್ನು ಮರೆಯಬಾರದು. [illegible] ಅಡ್ಡಕಟ್ಟುಗಳಂತೆ ತಲೆಯಿಂದ ಬಾಲದವರೆಗೂ ಗುರುತುಗಳಿರುವುದು ಕಟ್ಟುಹಾವು. ಮನೆಯ ಹೊಳಬಿಕ್ಕ ಸಂದುಮಂದಿನಲ್ಲಿ ಅಡಗುವ ಅಭ್ಯಾಸವಿರುವ ಕಟ್ಟುಹಾವಿಗೆ ಕಡಂಬಳಿ ಎಂದೂ ಬೇರೆ ಕನ್ನಡ ಪ್ರದೇಶಗಳಲ್ಲಿ ಹೆಸರಿದೆ. ಇದು ಅರ್ಧ ಮುಕ್ಕಾಲು ಮೀಟರಿನಷ್ಟು ಉದ್ದ ಮತ್ತು ೨-೩ ಸೆಂ ಮೀ.ನಷ್ಟು ದಪ್ಪವಾಗಿರುವುದು. ಹಾವಿನ ವಿಷ ಮರಣಗಳಲ್ಲಿ ಕಟ್ಟುಹಾವು ಕಡಿತದಿಂದ ಆಗುವ ಮರಣಗಳೇ ಹೆಚ್ಚು. ಕಟ್ಟುಹಾವಿನ ವಿಷ ನಾಗರಹಾವಿನ ವಿಷಕ್ಕಿಂತಲೂ ತೀಕ್ಷ್ಣ ಎನ್ನಲಾಗಿದೆ. ಕಟ್ಟುಹಾವು ಕಡಿದಾಗ ಗಾಯದಿಂದ ರಕ್ತಸ್ರಾವ ಬಹಳ ಕಾಲದವರೆಗೂ ಆಗುತ್ತಲೇ ಇರುತ್ತದೆ.

ಮಂಡಲದ ಹಾವುಗಳು ಮನೆಗಳ ಸೆರೆಯಲ್ಲಿ ಇರುವುದು ಅಪರೂಪ. ಇವು ಸುಮಾರು ಮುಕ್ಕಾಲು-ಒಂದು ಮೀಟರ್‌ಗಳಷ್ಟು ಉದ್ದವಾಗಿಯೂ ೪-೫ ಸೆಂ ಮೀ. ದಪ್ಪವಾಗಿಯೂ ಇರುತ್ತವೆ. ಇವು ಬುಸುಗುಟ್ಟುವುದೂ ಜನರನ್ನು ಕಂಡಾಗ ಅವಿತುಕೊಳ್ಳಲು ಓಡುವಾಗ ಬಾವ. ರೀತಿ ಮೊಟೆಯುವುದು ಸಾಮಾನ್ಯ. ಇವುಗಳ ತಲೆಯ ಮೇಲೆ ಹಲ್ಲಿಗಳಂತೆ ಗುರುತು ಎತ್ತಿಕಾಣುವುದರಿಂದ ಇವಕ್ಕೆ ಮಂಡಲದ ಹಾವುಗಳೆಂದು ಹೆಸರು. ಉರಿಮಂಡಲ ಎನ್ನುವ ಜಾತಿ ಹಾವು ಕಚ್ಚಿದಾಗ ಕೂಡಲೇ ಮತ್ತು ಬಹುಕಾಲ ಅನಂತರ ಉರಿಯುವುದು ಪ್ರಧಾನಲಕ್ಷಣವಾಗಿರುವುದರಿಂದ ಇದಕ್ಕೆ ಉರಿಮಂಡಲ ಎಂದು ಹೆಸರು. ಕೊಳಕುಮಂಡಲ ಎನ್ನುವ ಜಾತಿ ಹಾವು ಕಡಿದಾಗ ಕಡಿದ ಸ್ಥಳ ಮತ್ತು ಆ ಸೆರೆ ಎಲ್ಲ ಕ್ರಮೇಣ ಕೊಳೆತಂತಾಗುವುದರಿಂದ, ಇದಕ್ಕೆ ಆ ಹೆಸರು. ಇದು ವಿಷವನ್ನು ದೂರಕ್ಕೆ ಗುರಿಇಟ್ಟಂತೆ ಸಾಮಾನ್ಯವಾಗಿ ಕಾಡುಪ್ರಾಣಿಯ ಕಣ್ಣಿನೊಳಕ್ಕೆ ನೇರವಾಗಿ ಪಿಚಕಾರಿಯಲ್ಲಿ ಹೊಡೆದಂತೆ ಉಗುಳಬಲ್ಲದು. ಇದರಿಂದ ಕಣ್ಣು ಕೂಡಲೆ ಕುರುಡಾಗುವುದಲ್ಲದೆ ವಿಷ ಶೀಘ್ರವಾಗಿ ದೇಹದ ಒಳಕ್ಕೆ ಹೋಗುತ್ತದೆ. ಮಂಡಲದ ಹಾವುಗಳ ವಿಷ ಶೀಘ್ರಮಾರಕವಲ್ಲ. ಔಷಧೋಪಚಾರಗಳಿಗೆ ಹೆಚ್ಚುಕಾಲ ಸಿಕ್ಕುವುದರಿಂದ ಇಂಥ ಹಾವುಗಳ

ಕಡಿದಾಗ ಬದುಕಿ ಉಳಿಯುವ ಸಂಭವ ಹೆಚ್ಚು.

ಹಸಿರು ಹಾವುಗಳು ಸಾಮಾನ್ಯವಾಗಿ ವಿಷಧರಗಳಲ್ಲ. ಒಳ್ಳೆಹಾವು (ಹೊಳ್ಳೆ), ಕೇರೆಹಾವು, ದಾಸರಹಾವು (ಹೆಬ್ಬಾವು) ಇವು ಇತರ ನಿರುಪದ್ರವ ಹಾವುಗಳು. ಅನೇಕ ಬಗೆಯ ನಿರುಪದ್ರವ ಹಾವುಗಳು ವಿಷಧರಸರ್ಪಗಳಂತೆಯೇ ವರ್ಣ ವಿನ್ಯಾಸ ಮೇಲ್ಮೈಲಕ್ಷಣಗಳನ್ನು ತೋರುತ್ತವೆ. ಆತ್ಮಸಂರಕ್ಷಣೆಗೋಸ್ಕರ ತಮ್ಮ ವೈರಿಗಳನ್ನು ಹೆದರಿಸಲು ಅವು ಇಂಥ ಲಕ್ಷಣಗಳನ್ನು ಹೊಂದಿರುತ್ತವೆ. ಆದರೆ ಅವಕ್ಕೆ ವಿಷದ ಹಲ್ಲುಗಳಿರುವುದಿಲ್ಲ. ಕೆಲವು ವಿಷಧರ ಸರ್ಪಗಳೂ ಮೇಲ್ನೋಟಕ್ಕೆ ವಿಷವಿರದ ಹಾವಿನಂತೆಯೇ ಕಾಣುವುದೂ ಇದೆ. ಆದ್ದರಿಂದ ಹಾವು ಇಂಥದ್ದೇ ಎಂದು ಆತುರದಿಂದ ನಿರ್ಧರಿಸಬಾರದು.

ವಿಷದ ಹಾವು ಕಡಿದಾಗ ಅದರ ದವಡೆ ಪ್ರಾಂತ್ಯಗಳಲ್ಲಿರುವ ವಿಷಗ್ರಂಥಿಗಳಿಂದ ಸುರಿದ ವಿಷ ವಿಷದ ಹಲ್ಲುಗಳ ಡೊಗರಿನ ಮೂಲಕ ಪ್ರವಹಿಸಿ ಕಡಿದ ಗಾಯದ ಒಳಹೋಗುತ್ತವೆ. ಎಷ್ಟು ವಿಷ ಒಳಹೋಗುತ್ತದೆ ಎಂಬುದು ಹಾವು ವ್ಯಕ್ತಿಯನ್ನು ಕಡಿಯುವುದಕ್ಕೆ ಮುಂಚೆ (ಕೆಲವು ಗಂಟೆಗಳು) ಇನ್ನೊಂದು ಸಲ ಇನ್ನೇನನ್ನಾದರೂ ಕಡಿದಿದೆಯೆ ಎಂಬುದನ್ನು ಆಧರಿಸಿದೆ. ಮೊದಲ ಕಡಿತದಲ್ಲಿ ಸಾಮಾನ್ಯವಾಗಿ ಮಾರಕ ಪ್ರಮಾಣದಲ್ಲೆ ವಿಷ ಇರುತ್ತದೆ. ಎರಡನೆ ಸಲ, ಮೂರನೆ ಸಲ ಪುನಃ ಶೀಘ್ರ ಕಾಲದಲ್ಲಿ ಕಡಿದರೆ ವಿಷಪ್ರಮಾಣ ತೀರ ಅಲ್ಪವಾಗಿದ್ದು ಪ್ರಾಣಾಪಾಯ ಉಂಟಾಗದೆ ಎಲ್ಲೋ ಅಷ್ಟಿಷ್ಟು ತೊಂದರೆ ಆಗುತ್ತದೆ, ಅಷ್ಟೆ. ನಾಗರಹಾವು, ಕಟ್ಟುಹಾವುಗಳು ಕಡಿದಾಗ ಕೂಡಲೆ ಇಲ್ಲವೆ ಗರಿಷ್ಠ ಎಂದರೆ ಅರ್ಧಗಂಟೆಯೊಳಗಾಗಿ ವಿಷವೇರಿದ ಲಕ್ಷಣಗಳು ಕಂಡುಬರುತ್ತವೆ. ಉರಿ, ನೋವು ಊತಗಳು ಸ್ಥಳೀಯವಾಗಿ ಮತ್ತು ಸುತ್ತಮುತ್ತ ಉಂಟಾಗುತ್ತವೆ. ಗಾಯದಿಂದ ಕಿಂಚಿತ್ತಾಗಿ ರಕ್ತಸ್ರಾವ ಆಗುತ್ತಲೇ ಇರುತ್ತದೆ. ಕ್ರಮೇಣ ಜೋಮು ಹಿಡಿದು ಗಾಯದ ನೆಲೆಯೆಲ್ಲ ನೀಲಿಗಟ್ಟುತ್ತದೆ. ಕುಳಿತುಕೊಳ್ಳಲೂ ಆಗದಷ್ಟು ದೇಹಾಯಾಸ, ಜೆನತುಗೊಳ್ಳುವಿಕೆ, ಕಟಬಾಯಲ್ಲಿ ಜೊಲ್ಲುಸುರಿತ, ಮಾತನಾಡಲೂ ನುಂಗಲೂ ತೊಂದರೆ, ಕಣ್ಣಿನ ಪಾಪೆಗಳು ಕಿರಿದಾಗುವಿಕೆ. ಅನಂತರ ವಾಕರಿಕೆವಾಂತಿಗಳು, ವಿವಿಧಾಂಗಗಳಿಂದ ರಕ್ತಸ್ರಾವ (ಕಟ್ಟುಹಾವಿನ ಕಡಿತದಲ್ಲಿ ಕೇವಲ ನಾಲ್ಕಾರು ಗಂಟೆಗಳಲ್ಲೆ), ಕ್ರಮೇಣ ಉಸಿರಾಟಕ್ಕೆ ತೊಂದರೆ. ಕೊನೆಗೆ ಮರಣ ಇವು ಹಾವು ವಿಷದಿಂದ ಆಗುವ ಪರಿಣಾಮಗಳು. ವಿಷ ರಕ್ತದೊಳಗೆ ನೇರವಾಗಿ ಸೇರಿದಾಗ ಆಗುವ ಪರಿಣಾಮಗಳು, ಇವು. ವಿಷವನ್ನೋ ವಿಷಧರವನ್ನೊ ಸೇವಿಸಿದರೆ ವಿಷ ಬಹುಶಃ ಜೀರ್ಣ

ವಾಗಿ ಹೋಗುವುದರಿಂದ ಸರ್ಪ ವಿಷಸೇವನೆ ಅಥವಾ ಸರ್ಪಸೇವನೆ ಸಾಮಾನ್ಯವಾಗಿ ತೊಂದರೆ ಮಾಡುವಂಥದ್ದಲ್ಲ. ಕಟ್ಟುಹಾವು ಕಡಿತ ಸುಮಾರು ೧೨ ಗಂಟೆಗಳಷ್ಟು ಬೇಗನೆ ಮರಣ ಉಂಟುಮಾಡಬಹುದು. ನಾಗರಹಾವಿನ ವಿಷ ೨೪-೩೬ ಗಂಟೆಗಳಷ್ಟು ತಡೆಯಬಹುದು. ಮಂಡಲದಹಾವು ಕಡಿತದಿಂದ ಸ್ಥಳೀಯ ರಕ್ತಸ್ರಾವ ಉರಿ, ಊತ ಇವು ವಿಪರೀತ ಹೆಚ್ಚಾಗಿರುತ್ತವೆ. ವ್ಯಕ್ತಿ ೨-೩ ದಿನಕ್ಕಿಂತಲೂ ಹೆಚ್ಚಾಗಿ ನರಳಿ ಸಾಯಬಹುದು. ಕೊಳಕುಮಂಡಲ ಕಡಿದ ಸಂದರ್ಭಗಳಲ್ಲಿ ವ್ಯಕ್ತಿ ಚೇತರಿಸಿಕೊಂಡರೆ ಅನಂತರವೂ ಅನೇಕ ದಿನ ಬಾಧೆ ಮುಂದುವರಿದು ಡಿವ ಭಾಗಗಳಲ್ಲಿ ಅಂಗಕ್ಷಯ,(ಗ್ಯಾಂಗ್ರೀನ್ gaungrene) ಉಂಟಾಗಿ ಅವು ಬಿದ್ದು ಹೋಗಬಹುದು.

ಯಾವುದೇ ವಿಷಧರಸರ್ಪ ಕಡಿದಿದೆ ಎಂಬುದು ಖಚಿತವಾದ ಮೇಲೆ ಆ ಕೂಡಲೆ ಕಡಿತದ ಮೇಲುಭಾಗದಲ್ಲಿ (ಅಂದರೆ ಅದಕ್ಕೂ ಹೃದಯಕ್ಕೂ ನಡುವೆ) ಹುರಿಮಾಡಿದ ಬಟ್ಟೆಯಿಂದ ಇಲ್ಲವೇ ಬಟ್ಟೆಯಿಂದ, ಸುತ್ತಿದ ಹಗ್ಗದಿಂದ ಗಟ್ಟಿಯಾಗಿ ಕಟ್ಟುಹಾಕಬೇಕು. ಕಟ್ಟಿನ ಬಿಗಿತವನ್ನು ಸಡಿಲಿಸಿ ಹೆಚ್ಚಿಸುವಂತೆ ಕಟ್ಟಿಗೆ ಒಂದು ಸಣ್ಣ ಕೋಲನ್ನು ಸಿಕ್ಕಿಸಿರಬೇಕು. ೧೦-೨೦ ಮಿನಿಟುಗಳಿಗೆ ಒಮ್ಮೊಮ್ಮೆ ಕಟ್ಟನ್ನು ಒಂದೆರಡು ಮಿನಿಟುಗಳು ಸಡಿಲಿಸಿ ಪುನಃ ಬಿಗಿಮಾಡುತ್ತಿರಬೇಕು. ವ್ಯಕ್ತಿಯನ್ನು ಮಲಗಿಸಿ ವಿಶ್ರಾಂತಿಕೊಟ್ಟು ಕಾಫಿ ಇಲ್ಲವೆ ಬ್ರಾಂದಿ ಮುಂತಾದ ಪಾನೀಯಗಳನ್ನು ಕೊಡುವುದೂ ಧೈರ್ಯಹೇಳುವುದೂ ಒಳ್ಳೆಯದು.


ಕುದಿಯುವ ನೀರಿನಲ್ಲಿ ೫ ಮಿನಿಟು ಇಟ್ಟು ನಿಷ್ಕ್ರಿಮಿಗೊಳಿಸಿದ ಹರಿತವಾದ ಬ್ಲೇಡು ಅಥವಾ ಚಾಕುವಿನಿಂದ ಕಡಿದ ಸ್ಥಳದಲ್ಲಿ ೨-೩ ಕಡೆ ಅಡ್ಡ ಮತ್ತು ಉದ್ದವಾಗಿ ಕೊಯ್ದು ಸ್ಥಳಿಯವಾಗಿ ಹಿಸುಕಿ ರಕ್ತವನ್ನು ಚೆನ್ನಾಗಿ ಹೊರಡಿಸಬೇಕು. ಗಾಯಕ್ಕೆ ಬಾಯಿ ಇಟ್ಟು ರಕ್ತವನ್ನು ಹೀರಿ ಉಗುಳುವುದು ಕ್ಷೇಮವಲ್ಲ. ಪ್ರಥಮ ಚಿಕಿತ್ಸಕನಿಗೆ ಬಾಯಲ್ಲಿ ಗಾಯವೋ ರಕ್ತ ಒಸರುವ ಹುಳುಕು ಹಲ್ಲೋ ಇದ್ದರೆ ಹೀಗೆ ಮಾಡಿದಾಗ ಅವನ ದೇಹದ ಒಳಕ್ಕೆ ಹಾವಿನ ವಿಷ ಸೇರುವ ಸಂಭವವಿದೆ. ರಕ್ತವನ್ನು ಚೆನ್ನಾಗಿ ಹೊರಡಿಸಿದನಂತರ ಬೆಚ್ಚಗಿರುವ ಕ್ರಿಮಿನಾಶಕ ದ್ರಾವಣದಿಂದ ಗಾಯವನ್ನು ಚನ್ನಾಗಿ ತೊಳೆಯಬೇಕು. ಯೋಗ್ಯ ಕ್ರಿಮಿನಾಶಕ ದೊರೆಯದೆ ಇದ್ದರೆ ಪೊಟಾಸಿಯಮ್ ಪರ್ಮಾಂಗನೇಟ್ ಪುಡಿಯನ್ನೋ ದ್ರಾವಣವನ್ನೋ ಅದೂ ಇಲ್ಲದಿದ್ದರೆ ಮದ್ಯಸಾರವನ್ನೋ (Alcohol) ಅದೂ ಸಿಕ್ಕದಿದ್ದರೆ ಟಿಂಕ್ಚರ್ ಅಯೋಡಿನ್ನನ್ನೋ ಧಾರಾಳವಾಗಿ ಬಳಸಿ ಗಾಯವನ್ನು ಶುದ್ಧಿಮಾಡಬೇಕು. ಅನಂತರ ಗಾಯ

ವನ್ನು ಒರೆಸಿ ಅದರ ಮೇಲೆ ಶುದ್ಧ ಹತ್ತಿಯನ್ನು ಇಟ್ಟು ಹಗುರವಾಗಿ ಕಟ್ಟಬೇಕು. ಸುತ್ತಲೂ ಮಂಜಿನ ಗೆಡ್ಡೆಯಿಂದಲೋ ತಣ್ಣೀರಿನಲ್ಲಿ ಅದ್ದಿದ ಬಟ್ಟೆಯಿಂದಲೋ ತಂಪುಕೊಡುತ್ತ ಉರಿ ಕಡಿಮೆ ಆಗುವಂತೆ ಮಾಡಬೇಕು. ಈಥೈಲ್ ಕ್ಲೋರೈಡ್ ಸಿಂಪರಣೆ ಸಲಕರಣೆ ಇದ್ದರೆ ಗಾಯದ ನೆರೆಪ್ರಾಂತ್ಯದಲ್ಲಿ ಸಿಂಪಡಿಸುತ್ತ ತಂಪುಮಾಡಬೇಕು.

ಆದಷ್ಟು ಶೀಘ್ರವಾಗಿ ಕಡಿದ ಹಾವು ಇಂಥದ್ದೆಂದು ಸೂಚಿಸಿ ಹತ್ತಿರದ ಆಸ್ಪತ್ರೆ ಅಥವಾ ವೈದ್ಯರಿಗೆ ಹೇಳಿಕಳುಹಿಸಿ ಅವರಿಂದ ವಿಷದ ವಿಶಿಷ್ಟ ಪ್ರತಿವಿಷದ (Specific antivenom) ಇಂಜೆಕ್ಷನ್ ಕೊಡಿಸಬೇಕು. ಇದು ಸಿಕ್ಕದಿದ್ದರೆ ಎಲ್ಲಾ ಹಾವು ವಿಷಗಳಿಗೂ ಸಮಾನವಾದ ಪ್ರತಿವಿಷವನ್ನು (Polyvalent antivenom) ಕೊಡಿಸಬೇಕು.

ವ್ಯಕ್ತಿ ಸುಸ್ತಧಕ್ಕೆಗೆ (Shock) ಗುರಿ ಆಗಬಹುದು. ಇದಕ್ಕೆ ಯುಕ್ತ ಗಮನವನ್ನು ಕೊಡಲು ಮರೆಯಬಾರದು. ಸರ್ಪವಿಷಾಘಾತದ ಮುಂದಿನ ಚಿಕಿತ್ಸೆಗಳು ತಜ್ಞವೈದ್ಯರಿಗೆ ಸೇರಿದ್ದು.

ಡಾ|| ಎಸ್. ರಾಮರಾವ್



ಜೀವನದಲ್ಲಿ ಅನುಭವದಿಂದ ಕಲಿತ ಶಿಕ್ಷಣವೇ ಅತ್ಯುತ್ತಮ ಶಿಕ್ಷಣ.

—ಫಿಲಿಪ್ ವೆಂಡಲ್

ಆನೆ ನೀರಾಟದಲಿ ಮೀನ ಕಂಡಂಜುವುದೆ ?

—ಸರ್ವಜ್ಞ

ವೇದಗಳಲ್ಲಿ ಗಣಿತ

ಯಥಾ ಶಿಖಾ ಮಯೂರಾಣಾಂ ನಾಗಾನಾಂ ಮಣಯೋ ಯಥಾ।
ತದ್ವದ್ವೇದಾಂಗಶಾಸ್ತ್ರಾಣಾಂ ಗಣಿತಂ ಮೂರ್ಧನಿ ಸ್ಥಿತಂ ॥

"ನವಿಲಿನ ಶಿರದಲ್ಲಿ ಶಿಖೆಯಿರುವಂತೆ, ಸರ್ಪಗಳ ಹೆಡೆಯಲ್ಲಿ ಮಣಿಗಳಿರುವಂತೆ, ಗಣಿತ ಶಾಸ್ತ್ರವು ವೇದಾಂಗ ಶಾಸ್ತ್ರಗಳ ಶಿರೋಮಣಿಯಾಗಿದೆ."— ಇದು ಬಹಳ ಪ್ರಾಚೀನವೂ ಆದ್ಯ ಖಗೋಲ ಗ್ರಂಥವೂ ಆಗಿರುವ 'ವೇದಾಂಗ ಜ್ಯೋತಿಷ' ದಲ್ಲಿ ಗಣಿತಶಾಸ್ತ್ರಕ್ಕೆ ಕೊಟ್ಟಿರುವ ಅತ್ಯುನ್ನತವಾದ ಸ್ಥಾನ.

ಸಾಮಾನ್ಯವಾಗಿ ಧರ್ಮ, ದರ್ಶನ, ಕಲೆ, ಸಂಗೀತ ಮತ್ತು ಸಾಹಿತ್ಯಗಳಿಗೆ ಹೆಸರಾಗಿರುವ ಪ್ರಾಚೀನ ಭಾರತೀಯ ಸಂಸ್ಕೃತಿಯಲ್ಲಿ ಗಣಿತ ಮತ್ತು ಖಗೋಲ ಗಳಂತಹ ಶಾಸ್ತ್ರಗಳಿಗೂ ಮಹತ್ವದ ಸ್ಥಾನವನ್ನು ಕೊಡಲಾಗಿದೆ. ಭಾರತೀಯ ಗಣಿತ ಮತ್ತು ಖಗೋಲಶಾಸ್ತ್ರದ ಮೂಲವನ್ನು ಪ್ರಪಂಚದಲ್ಲೇ ಅತ್ಯಂತ ಪ್ರಾಚೀನವೆಂದು ಪರಿಗಣಿಸಲ್ಪಟ್ಟಿರುವ ವೇದಗಳಲ್ಲಿ ನಾವು ಕಾಣುತ್ತೇವೆ.

ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪ ಎಂಬ ಆರು ವೇದಾಂಗಗಳ ಪೈಕಿ ವಿಶೇಷವಾಗಿ ಕಲ್ಪ–ವೇದಾಂಗದ ಶ್ರೌತ ವಿಭಾಗಕ್ಕೆ ಸೇರಿದ 'ಶುಲ್ವ' ಸೂತ್ರಗಳಲ್ಲಿ ಬಹಳ ಉತ್ಕೃಷ್ಟವಾದ ಗಣಿತದ ನಿಯಮಗಳನ್ನು ಕೊಡಲಾಗಿದೆ. ವಿದ್ವಾಂಸರಿಂದ ಹೆಸರಿಸಲಾದ ಸುಮಾರು ಒಂಭತ್ತು ಶುಲ್ವ ಸೂತ್ರ ಕೃತಿಗಳ ಪೈಕಿ ಬೌಧಾಯನ, ಆಪಸ್ತಂಬ ಮತ್ತು ಕಾತ್ಯಾಯನ ಶುಲ್ವ ಸೂತ್ರಗಳು ಗಣಿತಶಾಸ್ತ್ರದ ಬೆಳವಣಿಗೆಯ ದೃಷ್ಟಿಯಿಂದ ಬಹಳ ಮುಖ್ಯ ವಾದುವುಗಳು.

ವೇದಕಾಲೀನ ಜನರ ಪ್ರಮುಖವಾದ ಧಾರ್ಮಿಕ ಆಚರಣೆಯೆಂದರೆ ಯಜ್ಞ ಯಾಗಗಳು. ಈ ಯಜ್ಞಯಾಗಗಳ ಆಚರಣೆಗೋಸ್ಕರ 'ಯಜ್ಞವೇದಿಕೆ' ಅಥವಾ ಅಗ್ನಿಕುಂಡಗಳನ್ನು ನಿರ್ದಿಷ್ಟವಾದ ಆಕಾರ ಮತ್ತು ಗಾತ್ರಗಳನ್ನು ಹೊಂದಿರು ವಂತೆ ಇಟ್ಟಿಗೆಗಳಿಂದ ರಚಿಸಬೇಕಾಗಿತ್ತು. ಅಂತಹ ರಚನೆಗಳಲ್ಲಿ ಯಾವ ನ್ಯೂನತೆಯೂ ಬರದಂತೆ ನಿರ್ದಿಷ್ಟ ನಿಯಮಗಳನ್ನು ಪಾಲಿಸುವ ಸಂದರ್ಭದಲ್ಲಿ ರೇಖಾಗಣಿತ, ಅಂಕಗಣಿತ ಮತ್ತು ಬೀಜಗಣಿತಗಳ ಬೆಳವಣಿಗೆಯುಂಟಾಯಿತು.

'ಶುಲ್ವ' ಎಂಬ ಶಬ್ದವು 'ಶುಲ್ವ್' ಎಂಬ ಧಾತುವಿನಿಂದ ಬಂದಿದ್ದು. ಅದರ ಅರ್ಥ "ಅಳೆಯುವುದು" ಎಂದು. ಉದ್ದ ಅಗಲಗಳನ್ನು ಅಳೆಯಲು 'ರಜ್ಜು' ಎಂದರೆ ಹಗ್ಗವನ್ನು ಬಳಸುತ್ತಿದ್ದರಿಂದ ಶುಲ್ವ ಶಬ್ದಕ್ಕೆ ಹಗ್ಗ ಎಂಬ ಅರ್ಥವು

ಬಂದಿತು. ನಾವು ಇಂದು ರೇಖಾಗಣಿತವೆಂದು ಕರೆಯುವ ಶಾಸ್ತ್ರಕ್ಕೆ ವೇದಾಂ ಗಳ ಕಾಲದಲ್ಲಿ ಶುಲ್ವಶಾಸ್ತ್ರ ಅಥವಾ ರಜ್ಜುಶಾಸ್ತ್ರ ಎಂದು ಕರೆಯುತ್ತಿದ್ದರು ಕಾತ್ಯಾಯನ ಶುಲ್ವಸೂತ್ರವು "ರಜ್ಜುಸಮಾಸಂ ವಕ್ಷ್ಯಾಮಃ" ಎಂಬ ದಾಗಿಯೇ ಪ್ರಾರಂಭವಾಗುತ್ತದೆ. ಕಾತ್ಯಾಯನ ಶುಲ್ವಸೂತ್ರವು ಶುಕ್ಲ ಯಜುರ್ವೇದಕ್ಕೂ ಹಾಗೂ ಬೌಧಾಯನ ಮತ್ತು ಆಪಸ್ತಂಬ ಸೂತ್ರಗಳ ಕೃಷ್ಣ ಯಜುರ್ವೇದಕ್ಕೂ ಸೇರಿವೆ. ಈ ಶುಲ್ವ ಸೂತ್ರಗಳ ರಚನೆಯು ಸುಮಾರು ಕ್ರಿ. ಪೂ. ಎಂಟು ಮತ್ತು ಒಂಭತ್ತನೆಯ ಶತಮಾನಗಳಲ್ಲಾಗಿರಬಹುದು ಎಂದು ಅಂದಾಜು ಮಾಡಲಾಗಿದೆ.

ಋಗ್ವೇದ ಸಂಹಿತೆಯಲ್ಲಿ ನಿರೂಪಿತವಾದ ದಕ್ಷಿಣಾಗ್ನಿ, ಗಾರ್ಹಪತ್ಯ ಮತ್ತು ಆಹವನೀಯ ಎಂಬ ಮೂರು ವಿಧವಾದ ಅಗ್ನಿಗಳಿಗೆ ಸಂಬಂಧಪಟ್ಟ ಯಜ್ಞ ವೇದಿಕೆಗಳನ್ನು ರಚಿಸಲು ನಿಯಮಗಳನ್ನು ಶುಲ್ವಸೂತ್ರಗಳಲ್ಲಿ ವಿಶೇಷವಾ ಕೊಡಲಾಗಿದೆ. ಆದರೆ, ಈ ಗಣಿತನಿಯಮಗಳು ಶುಲ್ವಸೂತ್ರಗಳಿಗಿಂತ ಅನೇಕ ಶತಮಾನಗಳ ಹಿಂದೆಯೇ ಬೆಳವಣಿಗೆಯನ್ನು ಹೊಂದಿರುವುದು ಕಾಣಬರು ತ್ತದೆ. ಅಂತಹ ಪ್ರಾಚೀನ ಗಣಿತಜ್ಞರ ಕೊಡುಗೆಯನ್ನು ಗೌರವದಿಂದ ಸ್ಮರಿಸುತ್ತ "ಇತಿ ಅಭ್ಯುಪದಿಶಂತಿ", "ಇತಿ ವಿಜ್ಞಾಯತೇ", "ಇತಿ ಉಕ್ತಂ" ಎಂಬುದಾಗಿ ಶುಲ್ವಸೂತ್ರಗಳಲ್ಲಿ ಅನೇಕ ಕಡೆ ಉಲ್ಲೇಖವಾಗಿದೆ. ಕೆಲವು ವಾಕ್ಯಗಳಂತೂ ನೇರವಾಗಿ ತೈತ್ತರೀಯ ಸಂಹಿತೆ, ತೈತ್ತರೀಯ ಬ್ರಾಹ್ಮಣ ಹಾಗೂ ಅರಣ್ಯಕ ದಿಂದಲೂ ಉದ್ಧರಿಸಲಾಗಿದೆ. ಇಡೀ ಪ್ರಪಂಚವೇ ಭಾರತಕ್ಕೆ ಆಭಾರಿಯಾಗಿರ ಬೇಕಾದ ಅತ್ಯಮೂಲ್ಯವೂ ಮಹತ್ತರವೂ ಆದ ಕೊಡುಗೆಯೆಂದರೆ 'ಶೂನ್ಯ' ಮತ್ತು 'ದಶಮಾನ ಸಂಖ್ಯೆಗಳು'. ಬಹಳ ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ಎಣಿಕೆಗೂ ಹಾಗೂ ಲೆಕ್ಕಾಚಾರಗಳಿಗೂ ದಶಮಾನ ಪದ್ಧತಿಯೇ ಬಳಕೆಯಲ್ಲಿದೆ. ಬಹಳ ಪ್ರಾಚೀನವಾದ ಯಜುರ್ವೇದ ಸಂಹಿತೆಯಲ್ಲಿ ಏಕ, ದಶ, ಶತ, ಸಹಸ್ರ ಇತ್ಯಾದಿಯಾಗಿ ಒಂದರ ಹಿಂದೆ ಹನ್ನೆರಡು ಸೊನ್ನೆಗಳುಳ್ಳ ಸಂಖ್ಯೆ (ಅದಕ್ಕೆ ಪರಾರ್ಧ ಎಂದು ಹೆಸರು)–ಅಲ್ಲಿಯವರೆಗೆ ಹತ್ತರ ಘಾತಗಳ (powers of ten) ಪಟ್ಟಿಯನ್ನು ಕೊಡಲಾಗಿದೆ. ಇದೇ ಪಟ್ಟಿಯನ್ನು ತೈತ್ತರೀಯ ಸಂಹಿತೆಯಲ್ಲೂ ಕಾಣಬಹುದು. ಆಗಿನ ಕಾಲದ ಗ್ರೀಕರಿಗೆ ಗೊತ್ತಿದ್ದ ಅತಿ ಹೆಚ್ಚಿನ ಹತ್ತರ ಘಾತಾಂಶವೆಂದರೆ ಕೇವಲ ಹತ್ತು ಸಾವಿರ. ಅದನ್ನು ಅವರು 'ಮಿರಿಯಡ್' (myriad) ಎಂದು ಕರೆದರು.

ಸಂಯುಕ್ತ ಸಂಖ್ಯೆಗಳಾದ ೧೧, ೨೭ ಮುಂತಾದವನ್ನು ದಾಶಮಿಕ ಪದ್ಧತಿ

ಯನ್ನು ಅನುಸರಿಸಿ, ವೇದಸಾಹಿತ್ಯದಲ್ಲಿ ಸುಲಭವಾಗಿ 'ಏಕಾದಶ', 'ಸಪ್ತವಿಂಶತಿ' ಎಂಬುದಾಗಿ ಬಳಸಿದ್ದಾರೆ. ಹಾಗೆಯೇ, ಹತ್ತಿರದಲ್ಲಿರುವ ಹತ್ತರ ಘಾತಾಂಶ ದಿಂದ ಕಳೆಯುವ ವಿಧಾನವನ್ನು ಉಪಯೋಗಿಸಿ, ೧೯ಕ್ಕೆ 'ಏಕೋನ ವಿಂಶತಿ' ಎಂಬುದಾಗಿಯೂ ಆಪಸ್ತಂಬ ಸೂತ್ರದಲ್ಲಿ ೯೭೨ ಎಂಬ ಸಂಖ್ಯೆಗೆ 'ಅಷ್ಟಾವಿಂಶತ್ಯೂನಂ ಸಹಸ್ರಂ' (ಎಂದರೆ ಒಂದು ಸಾವಿರಕ್ಕೆ ೨೮ ಕಡಿಮೆ) ಎಂದೂ ಪ್ರಯೋಗಿಸಿದ್ದಾರೆ. ಇಂದು ಪ್ರಪಂಚದಾದ್ಯಂತ ಬಳಸಲಾಗುತ್ತಿರುವ ಗಣನೆಯ ಮಾನವಾದ ದಾಶಮಿಕ ಪದ್ಧತಿಯು ವೇದಕಾಲೀನ ಗಣಿತದ ಮಹತ್ತರವಾದ ಕೊಡುಗೆ.

ಸಂಖ್ಯೆಗಳನ್ನು ಬೆಸ ಸಂಖ್ಯೆ (Odd numbers) ಮತ್ತು ಸಮಸಂಖ್ಯೆ (Even numbers) ಎಂಬುದಾಗಿ ವಿಂಗಡಿಸಿದ್ದು ಮೊಟ್ಟಮೊದಲನೆಯದಾಗಿ ತೈತ್ತರೀಯ ಸಂಹಿತೆಯಲ್ಲಿ. ಅರ್ಧ, ಕಾಲು, ಎಂಟನೇ ಒಂದು ಮತ್ತು ಹದಿನಾರನೇ ಒಂದು ಈ ಭಿನ್ನರಾಶಿಗಳನ್ನು ಋಗ್ವೇದದಲ್ಲಿ ಉಲ್ಲೇಖಿಸಿ, ಅವು ಗಳಿಗೆ ಕ್ರಮವಾಗಿ ಅರ್ಧ, ಪಾದ, ಶಫ ಮತ್ತು ಕಲಾ ಎಂಬ ಹೆಸರುಗಳನ್ನೂ ಕೊಟ್ಟಿದ್ದಾರೆ. ಶುಲ್ವಸೂತ್ರಗಳಲ್ಲಿ ಭಿನ್ನರಾಶಿಗೆ 'ಭಾಗ' ಎಂದು ಕರೆದಿದ್ದಾರೆ. ಉದಾಹರಣೆಗೆ, ಐದನೇ ಒಂದು ಎಂಬುದಕ್ಕೆ 'ಪಂಚಮಭಾಗ' ಎಂದು ಉಲ್ಲೇಖಿಸಿದ್ದಾರೆ.

ಅತ್ಯಂತ ಪ್ರಾಚೀನ ಶುಲ್ವಸೂತ್ರಕೃತಿಯಾದ. ಬೌಧಾಯನ ಸೂತ್ರವು ಮೂರು ಅಧ್ಯಾಯಗಳನ್ನು, ಆಪಸ್ತಂಬಸೂತ್ರವು ಆರು ಅಧ್ಯಾಯಗಳನ್ನು ಹೊಂದಿದ್ದು, ಅವುಗಳಲ್ಲಿ ಮುಖ್ಯವಾಗಿ ಚರ್ಚಿಸಿರುವ ಗಣಿತ ವಿಷಯಗಳೆಂದರೆ

(೧) ಪೈಥಾಗರಸ್ಸನ ಪ್ರಮೇಯವೆಂದು ಪ್ರಖ್ಯಾತವಾಗಿರುವ ಜಾತ್ಯ ತ್ರಿಕೋಣಕ್ಕೆ (Right angled triangle) ಸಂಬಂಧಪಟ್ಟ ಪ್ರಮೇಯ ವನ್ನು ಪೈಥಾಗರಸ್ಸನಿಗಿಂತ ಅನೇಕ ಶತಮಾನಗಳ ಹಿಂದೆಯೇ ಶುಲ್ವ ಸೂತ್ರ ಗಳಲ್ಲಿ ಬಳಸಲಾಗಿದೆ.

(೨) ಅಭಾಜ್ಯಸಂಖ್ಯೆ (irrtational number) ಆಗಿರುವ ಎರಡರ ವರ್ಗಮೂಲಕ್ಕೆ ಬಹಳ ಸನ್ನಿಹಿತವಾದ ಭಾಜ್ಯಬೆಲೆ (rational value) ಯನ್ನು ಕೊಡಲಾಗಿದೆ.

(೩) ಆಯದ ಕರ್ಣವು ಆಯವನ್ನು ಎರಡು ಸಮಭಾಗಗಳನ್ನಾಗಿ ಮಾಡು ತ್ತದೆ (Diagonal of a rectangle bisects the rectangle).

(೪) ಆಯದ ಎರಡು ಕರ್ಣಗಳು ಒಂದನ್ನೊಂದು ಸಮನಾಗಿ ಭಾಗಿಸುತ್ತವೆ.

(Diagonals of a rectangle bisect each other).

(೫) ವಜ್ರಾಕೃತಿಯ ಕರ್ಣಗಳು ಒಂದನ್ನೊಂದು ಸಮಭಾಗ ಮಾಡುತ್ತ ಸಮಕೋನದಲ್ಲಿ ಸಂಧಿಸುತ್ತವೆ. [Diagonals of a rhombus bisect each other at right-angles].

೬) ತ್ರಿಕೋನದ ಕ್ಷೇತ್ರಫಲವನ್ನು ಕಂಡುಹಿಡಿಯುವ ಸೂತ್ರವನ್ನು ಕೊಟ್ಟಿದ್ದಾರೆ. ಹಾಗೆಯೇ, ಈ ಕೆಳಗಿನ ಕೆಲವು ಚಮತ್ಕಾರಿಕ ರಚನೆಗಳನ್ನು ಕೊಟ್ಟಿದ್ದಾರೆ:–

೧) ಎರಡು ಚಚ್ಚೌಕಗಳ ಕ್ಷೇತ್ರಫಲಗಳ ಮೊತ್ತವುಳ್ಳಂತೆ ಒಂದು ಚಚ್ಚೌಕವನ್ನು ರಚಿಸುವುದು ;

೨) ಎರಡು ಚಚ್ಚೌಕಗಳ ಕ್ಷೇತ್ರಫಲಗಳ ವ್ಯತ್ಯಾಸವುಳ್ಳಂತೆ ಒಂದು ಚಚ್ಚೌಕವನ್ನು ರಚಿಸುವುದು ; ಹಾಗೂ

೩ ಆಯವನ್ನು ಅಷ್ಟೇ ಕ್ಷೇತ್ರವುಳ್ಳ ಚಚ್ಚೌಕವನ್ನಾಗಿ ಪರಿವರ್ತಿಸುವುದು.

ಗಣಿತಶಾಸ್ತ್ರದಲ್ಲಿ ಬಹಳ ಶತಮಾನಗಳಿಂದ ಇತ್ತೀಚಿನ ತನಕ ಕೆಲವು ಬಿಡಿಸಲಾಗದ ಸಮಸ್ಯೆಗಳಿದ್ದವು. ಅವುಗಳ ಪೈಕಿ ಒಂದು ಬಹಳ ಮುಖ್ಯವಾದ ಸಮಸ್ಯೆಯೆಂದರೆ, ಒಂದು ವೃತ್ತದ ವಿಸ್ತಾರಕ್ಕೆ ಸಮನಾದ ವಿಸ್ತಾರವುಳ್ಳ ಚಚ್ಚೌಕವನ್ನು ರಚಿಸುವುದು (Squaring the circle). ಬಹಳ ಸೋಜಿಗದ ಸಂಗತಿಯೆಂದರೆ, ಗಣಿತಶಾಸ್ತ್ರದ ಚರಿತ್ರೆಯಲ್ಲಿ ಅತ್ಯಂತ ಪ್ರಸಿದ್ಧವಾದ ಈ ಸಮಸ್ಯೆ ಮೊಟ್ಟಮೊದಲು ಕಂಡುಬಂದಿರುವುದು ವೇದಗಳಲ್ಲಿಯೇ. ಬೌಧಾಯನ ಸೂತ್ರದಲ್ಲಿ ಇಂತಹ ರಚನೆಗೆ ಒಂದು ಸನ್ನಿಹಿತವಾದ ವ್ಯಾವಹಾರಿಕ ರಚನೆಯನ್ನು ಕೊಡಲಾಗಿದೆ. ಆ ರಚನೆಯ ಪ್ರಕಾರ, π ಎಂಬ ಸ್ಥಿರ ಸಂಖ್ಯೆಯ ಬೆಲೆ ೩.೦೮೮ ಎಂದಾಗುತ್ತದೆ. ಶುಲ್ವಸೂತ್ರಗಳ ರಚನೆಯಾದ ಎಷ್ಟೋ ಶತಮಾನಗಳ ಅನಂತರದ Bible ಪವಿತ್ರ ಗ್ರಂಥದ ಹಳೆಯ ಒಡಂಬಡಿಕೆ (Old Testament) ಯಲ್ಲಿ π ಸಂಖ್ಯೆಗೆ ೩ ಎಂಬ ಬೆಲೆಯನ್ನು ಉಪಯೋಗಿಸಿರುವುದನ್ನು ನೋಡಿದರೆ, ಶುಲ್ವ ಸೂತ್ರಕಾರರ ವಿಶೇಷವಾದ ಗಣಿತಪ್ರಜ್ಞೆಯನ್ನು ನಿಜಕ್ಕೂ ಮೆಚ್ಚಬೇಕಾದ್ದೆ.

ವೇದಸಮುಚ್ಚಯದಲ್ಲಿ ಬೀಜಗಣಿತಕ್ಕೆ ಸಂಬಂಧಪಟ್ಟಂತೆ ಕೆಲವು ಬಹಳ ಮುಖ್ಯವಾದ ಕೊಡುಗೆಯನ್ನು ನಾವು ಕಾಣಬಹುದು :-

೧) ಶುಲ್ವಸೂತ್ರಗಳಲ್ಲಿ $ax^2=c$, $ax^2+bx=c$ ಮಾದರಿಯ ವರ್ಗಸಮೀಕರಣಗಳನ್ನು ಬಿಡಿಸುವ ಸಮಸ್ಯೆಗಳನ್ನು ಕೊಡಲಾಗಿದೆ.

೨) ಬಹಳಷ್ಟು 'ಸಮಾಂತರ ಶ್ರೇಢಿಗಳೂ' (Airthmetic Progressions) ಮತ್ತು 'ಗುಣೋತ್ತರ' ಶ್ರೇಢಿಗಳೂ (Geometric Progressions) ತೈತ್ತರೀಯ ಸಂಹಿತೆ ವಾಜಸನೇಯ ಸಂಹಿತೆ, ಶತಪಥ ಬ್ರಾಹ್ಮಣ, ಬೌಧಾಯನ ಶುಲ್ಬಸೂತ್ರ ಹಾಗೂ ಅನಂತರ ರಚಿತವಾದ ಪಿಂಗಳನ ಛಂದಸ್ಸೂತ್ರಗಳಲ್ಲಿಯೂ ಉಲ್ಲೇಖಗೊಂಡಿವೆ.

೩ ಬೌಧಾಯನ ಮತ್ತು ಆಪಸ್ತಂಬ ಸೂತ್ರಗಳಲ್ಲಿ $x+y=$೨೧ ಮತ್ತು

$$\frac{x}{p^2}+\frac{y}{q^2}=$$ ೧ ಎಂಬ ಮಾದರಿಯ ಕೆಲವು ಒಂದನೇ ಪ್ರಮಾಣದ ಅನಿರ್ದಿಷ್ಟ ಸಮೀಕರಣಗಳನ್ನು (First degree indeterminate equations) ಬಿಡಿಸಲಾಗಿದೆ. ಅಂತಹ ಸಮೀಕರಣಗಳಿಗೆ 'ಕುಟ್ಟಕ' ಎಂದು ಹೆಸರು.

೪) ಪ್ರಾಚೀನ ಭಾರತೀಯ ಗಣಿತದ ಒಂದು ವೈಶಿಷ್ಟ್ಯವೆಂದರೆ, ಬೀಜಗಣಿತದ ಸಮಸ್ಯೆಗಳನ್ನು ಬಿಡಿಸಲು ರೇಖಾಗಣಿತದ ವಿಧಾನವನ್ನು ಉಪಯೋಗಿಸಿರುವುದು. ಬೇರೆ ಬೇರೆ ಮಾದರಿಯ ಸಮೀಕರಣಗಳನ್ನು ಬಿಡಿಸಲು ಶುಲ್ಬ ಸೂತ್ರಗಳಲ್ಲಿ ಅಂತಹ ರೇಖಾಗಣಿತದ ವಿಧಾನಗಳನ್ನು ಬಹಳ ಸ್ವಾರಸ್ಯಕರವಾಗಿ ಪ್ರಯೋಗಿಸಲಾಗಿದೆ.

೫ ಪಿಂಗಳನ ಛಂದಸ್ಸೂತ್ರದಲ್ಲಿ 'ದ್ವಿಪದ ಪ್ರಮೇಯ'ಕ್ಕೆ (Binomial Theorem) ಸಂಬಂಧಪಟ್ಟಂತೆ ಕೆಲವು ಅಂಶಗಳ ಬೆಳವಣಿಗೆಯನ್ನು ಕಾಣಬಹುದು. ಉದಾಹರಣೆಗೆ, $(a+b)^3$, $(a+b)^4$ ಮಾದರಿಯ ಸೂತ್ರಗಳನ್ನು ಕೊಡಲಾಗಿದೆ.

ಇತ್ತೀಚೆಗೆ. ಅಥರ್ವವೇದದ ಪರಿಶಿಷ್ಟದಿಂದ ಆಯ್ದವೆಂದು ಹೇಳಲಾದ ಹದಿನಾರು ಗಣಿತ ಸೂತ್ರಗಳನ್ನು ಪ್ರಕಟಿಸಿ, ಅವುಗಳ ಸಹಾಯದಿಂದ ಗಣಿತದ ಕೆಲವು ಪರಿಕರ್ಮಗಳನ್ನು ಚಮತ್ಕಾರದಿಂದ ಬಹಳ ಸುಲಭವಾಗಿ ಮಾಡಬಹುದು ಎಂದು ವಾದಿಸಲಾಗಿದೆ. ನಿಜಾಂಶವೆಂದರೆ, ಈ ಸೂತ್ರಗಳ ವಿಧಾನಗಳು ಜಗತ್ಪ್ರಸಿದ್ಧವೂ ಜನಪ್ರಿಯವೂ ಆಗಿರುವ 'ಟ್ರ್ಯಾಕ್ಟೆನ್‌ಬರ್ಗ್' ವಿಧಾನಗಳಿಗಿಂತಲೂ ಬಹಳ ಕೆಳಮಟ್ಟದ್ದಾಗಿದೆ ಅಷ್ಟಕ್ಕೂ ಈ ಸೂತ್ರಗಳು ಅಥರ್ವವೇದಕ್ಕೆ ಸೇರಿವೆ ಎಂಬುದು ಪೂರ್ಣವಾಗಿ ನಿರಾಧಾರವಾದ ಹೇಳಿಕೆ.

ಹಾಗೆಯೇ, ಕೆಲವು ಅಂಧಾಭಿಮಾನೀ ಸಂಪ್ರದಾಯವಾದಿಗಳು ಸೌರವ್ಯೂಹಕ್ಕೆ ಸೇರಿದ Uranus, Neptune ಮತ್ತು Pluto ಗ್ರಹಗಳನ್ನು

ವೇದಗಳ ಋಷಿಗಳು ಉಲ್ಲೇಖಿಸಿದ್ದಾರೆಂತಲೂ ಮತ್ತು ಆ ಗ್ರಹಗಳಿಗೆ ಇಂದ್ರ (ಅಥವಾ ಪ್ರಜಾಪತಿ), ವರುಣ ಮತ್ತು ಯಮ (ಅಥವಾ ರುದ್ರ) ಎಂದು ಹೆಸರಿಸಿದ್ದಾರೆಂತಲೂ ವಾದಿಸಿದ್ದಾರೆ.ಆದರೆ, ಸತ್ಯಾಂಶವೆಂದರೆ ಸೂರ್ಯ ಚಂದ್ರರನ್ನು ಬಿಟ್ಟು ಸೌರವ್ಯೂಹದ ಗ್ರಹಗಳ ಬಗ್ಗೆ ವೇದಗಳಲ್ಲಾಗಲೀ ಅಥವಾ 'ವೇದಾಂಗ ಜ್ಯೋತಿಷ'ದಲ್ಲಾಗಲೀ ಯಾವ ಉಲ್ಲೇಖವೂ ಇಲ್ಲ!

ನಮ್ಮ ದೇಶವಲ್ಲಿ ಖಗೋಲಶಾಸ್ತ್ರ ಮತ್ತು ಅದಕ್ಕೆ ಆವಶ್ಯಕವಾದ ಗಣಿತ ಶಾಸ್ತ್ರವು ಮುಖ್ಯವಾಗಿ ಬೆಳೆಯಲಾರಂಭಿಸುದುದು ಧರ್ಮಾಚರಣೆಗೆ ಬೇಕಾದ ಪ್ರಸಸ್ತ ಕಾಲದ ನಿರ್ಣಯಕ್ಕೋಸ್ಕರ.ಅಂತೆಯೇ ಯಜ್ಞಯಾಗಾದಿಗಳಿಗೋಸ್ಕರ ಬೇರೆ ಬೇರೆ ಆಕಾರದ ಮತ್ತು ಗಾತ್ರದ ವೇದಿಕೆಗಳನ್ನು ರಚಿಸಲು ರೇಖಾಗಣಿತವನ್ನು ಬೆಳೆಸಲಾಯಿತು. ಗಣಿತದ ಇಂತಹ ಕೇವಲ ಸಹಾಯಕ ಪಾತ್ರದ ದುಷ್ಪರಿಣಾಮವೇನೆಂದರೆ, ಮುಂದೆ ನಮ್ಮ ದೇಶವಲ್ಲಿ ಗಣಿತವು ಸ್ವತಂತ್ರವಾಗಿ ಒಂದು ತರ್ಕಬದ್ಧ ಶಾಸ್ತ್ರವಾಗಿ ಬೆಳೆಯಲು ಬಹಳ ಕಷ್ಟವಾಯಿತು. ಇನ್ನೊಂದು ಮಹತ್ತರವಾದ ದುಷ್ಪರಿಣಾಮವೆಂದರೆ, ಗ್ರೀಕರ ಮಹತ್ವಪೂರ್ಣ ಸಾಧನೆಯಾಗಿದ್ದ ತರ್ಕಬದ್ಧ ರೇಖಾಗಣಿತವನ್ನು ಕಡೆಗಾಣಿಸಿ, ಪರದೇಶದಿಂದ ಬಂದ ಅವೈಚಾರಿಕವೂ ಹುಸಿ-ವಿಜ್ಞಾನವೂ (Pseudo Science) ಆಗಿರುವ 'ಫಲಿತಜ್ಯೋತಿಷ' (Astrology) ಯನ್ನು ನಮ್ಮ ಪ್ರಾಚೀನ ಭಾರತೀಯರು ಬಹಳ ಆದರದಿಂದ ಸ್ವಾಗತಿಸಿದರು!

ಹೀಗಿದ್ದಾಗ್ಯೂ ವೇದಕಾಲೀನ ಗಣಿತಜ್ಞರು ಪ್ರಪಂಚದಲ್ಲೇ ಮೊಟ್ಟ ಮೊದಲಿಗೆ ಗಣಿತಶಾಸ್ತ್ರದ ಬೀಜವನ್ನು ಬಿತ್ತಿ, ಆ ಶಾಸ್ತ್ರದ ಉತ್ಕೃಷ್ಟವಾದ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿದ್ದಾರೆ.

"ಇದಂ ನಮ ಋಷಿಭ್ಯಃ ಪೂರ್ವಜೇಭ್ಯಃ ಪೂರ್ವೇಭ್ಯಃ ಪಥಿಕೃದ್ಭ್ಯಃ"

ಎಂಬ ಋಗ್ವೇದದ ಮಂತ್ರದೊಂದಿಗೆ ಜ್ಞಾನದ ಬೆಳವಣಿಗೆಗೆ ದಾರಿ ಹಾಕಿಕೊಟ್ಟಿರುವ ಪ್ರಾಚೀನರಾದ ಮಹಾಜ್ಞಾನಿಗಳಿಗೆ ನಮ್ಮ ಕೃತಜ್ಞತೆಯನ್ನೂ ಗೌರವವನ್ನೂ ಸಲ್ಲಿಸೋಣ.

ಡಾ॥ ಎಸ್. ಬಾಲಚಂದ್ರರಾವ್

ಧಾರಾಳತನ ಹೆಚ್ಚಾಗಿ ಕೊಡುವುದರಲ್ಲಿಲ್ಲ; ಸಕಾಲದಲ್ಲಿ ಕೊಡುವುದರಲ್ಲಿದೆ.

—ಜೆ. ಡಿ. ಬ್ರೂಯರ್

ದೇಹಸ್ವಾಸ್ಥ್ಯಕ್ಕಾಗಿ ಯೋಗಾಸನಗಳು

ಯೋಗಾಸನವೆಂದ ಕೂಡಲೆ ಶ್ರೀ ಸಾಮಾನ್ಯನ ಮನದಲ್ಲಿ ಮೂಡುವ ಭಾವನೆಯೆಂದರೆ ಜಟಾವಲ್ಕಲಧಾರಿಗಳಾಗಿ, ತಪೋವನಗಳಲ್ಲಿ ತಪಶ್ಚರ್ಯೆಯಲ್ಲಿರುವ ಋಷಿಮುನಿಗಳು ಅಥವಾ ಸಭೆಸಮಾರಂಭಗಳಲ್ಲಿ ಮೈಮೂಳೆಗಳನು ಬಗ್ಗಿಸಿ ಕೆಲನಿಮಿಷ ಕಾಲ ಸಾರ್ವಜನಿಕರಿಗೆ ವಿಸ್ಮಯ ಮನರಂಜನೆಯನ್ನೊದಗಿಸುವ ಯೋಗಾಸನ ಪ್ರದರ್ಶಕ. ಇದರ ಫಲಶ್ರುತಿಯೇನೆಂದರೆ, ಅದು ತನಗೆ ಸಂಬಂಧಿಸಿದ್ದಲ್ಲವೆಂಬ ನಿರಾಸಕ್ತಿ ಅಥವಾ ತನಗದು ಅಸಾಧ್ಯವೆಂಬ ನಿರಾಶಾ ಭಾವನೆ.

ಆದರೆ ಇದು ಕೇವಲ ತಪ್ಪುಕಲ್ಪನೆಯೆನ್ನದೆ ವಿಧಿಯಿಲ್ಲ. ಯೋಗಾಸನಗಳು ನಮಗೆ ನೇರವಾಗಿ ಹಾಗೂ ನಿಕಟವಾಗಿ ಸಂಬಂಧಿಸಿದ್ದು. ಇದಕ್ಕೆ ಸ್ತ್ರೀಪುರುಷ, ಬಾಲಕ-ವೃದ್ಧ, ರೋಗಿ-ನಿರೋಗಿ, ಬ್ರಹ್ಮಚಾರಿ-ಗೃಹಸ್ಥ, ಆಸ್ತಿಕ-ನಾಸ್ತಿಕ, ಬಡವ-ಬಲ್ಲಿದ ಎಂಬ ಯಾವ ಭೇದವೂ ಇಲ್ಲ. ಎಲ್ಲರಿಗೂ ಯೋಗಾಸನಗಳು ಅಪೇಕ್ಷಣೀಯ ಮಾತ್ರವಲ್ಲ, ಅತ್ಯಗತ್ಯ.

ನಾಣ್ಯಕ್ಕೆ ಎರಡು ಮುಖಗಳಿರುವಂತೆ ನಮ್ಮ ಬಾಳಿಗೂ ಎರಡು ಮುಖಗಳಿವೆ; ಒಂದು ಐಹಿಕ ಮತ್ತೊಂದು ಪಾರಮಾರ್ಥಿಕ. ನಾಣ್ಯದ ಒಂದು ಮುಖವು ನಸಕಲಾಗಿದ್ದು ಇನ್ನೊಂದು ಸರಿಯಾಗಿದ್ದರೂ ಸಹ ಅದು ಹೇಗೆ ಚಲಾವಣೆಗೆ ಬರುವುದಿಲ್ಲವೊ ಅಂತೆಯೇ ಮಾನವನ ಜೀವನದಲ್ಲಿ ಇಹಪರಗಳೆರಡರಲ್ಲಿ ಯಾವುದೊಂದು ಹಿಂದುಳಿದರೂ ಆತ ಪರಿಪೂರ್ಣನಾಗಲಾರ. ಎರಡರ ಬೆಳವಣಿಗೆಯೂ ಸಮಾನವಾಗಿ ಸಮರ್ಪಕವಾಗಿ ನಡೆಯಬೇಕು. ಅವುಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದು ನಿಸ್ಸಹಾಯಕ ಹಾಗೂ ನಿರರ್ಥಕ. ಇಹಪರಗಳೆರಡರ ಸಾಧನೆಗೂ ನಮಗೆ ದತ್ತವಾಗಿರುವ ಏಕೈಕ ಉಪಕರಣವೆಂದರೆ 'ನಮ್ಮ ಶರೀರವೇ'. ಆದುದರಿಂದಲೇ "ಶರೀರಮಾದ್ಯಂ ಖಲುಧರ್ಮಸಾಧನಂ" ಎನ್ನುತ್ತದೆ ಶಾಸ್ತ್ರ. ಅಂದರೆ ಸಕಲ ಧರ್ಮಸಾಧನೆಗೂ ಈ ಶರೀರವೇ ಮೂಲ ಕಾರಣವು. ಇಲ್ಲಿ ಶರೀರವೆಂದರೆ ಸುದೃಢವಾದ ಆರೋಗ್ಯಯುಕ್ತವಾದ ಶರೀರವೆಂದೇ ಅರ್ಥ. ಇದೇ ಮಾತನ್ನು ಉಪನಿಷತ್ತಿನಲ್ಲಿಯೂ ಸಹ ಕಾಣುತ್ತೇವೆ. "ಜೀವಂ ಭದ್ರಾಣಿ ಪಶ್ಯತು" ಅಂದರೆ ಜೀವವನ್ನು ಭದ್ರವಾಗಿ ನೋಡಿಕೊ ಎಂದು. ಇಲ್ಲಿ 'ಜೀವ'ವೆಂದರೆ ಸ್ವಸ್ಥಶರೀರವೆಂದೇ ಅರ್ಥ. ಯೋಗಕ್ಕಾಗಲಿ ಭೋಗಕ್ಕಾಗಲಿ ಸ್ವಸ್ಥಶರೀರದ ಅಗತ್ಯವನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಆರೋಗ್ಯವಂತರಿಂದ ಮಾತ್ರವೇ ಧರ್ಮ ಅರ್ಥ ಕಾಮ–ಮೋಕ್ಷಗಳೆಂಬ ಚತುರ್ವಿಧ ಫಲಪುರುಷಾರ್ಥಗಳನ್ನು ಸಾಧಿಸಲು ಸಾಧ್ಯವೇ ವಿನಃ ದುರ್ಬಲರಿಂದ, ರೋಗಿಷ್ಠರಿಂದ ಎಂದಿಗೂ ಸಾಧ್ಯವಿಲ್ಲ. ಇದನ್ನೇ ಆಯುರ್ವೇದಾಚಾರ್ಯರಾದ ಚರಕರು,

"ಧರ್ಮಾರ್ಥಕಾಮಮೋಕ್ಷಾಣಾಂ ಆರೋಗ್ಯಂ ಮೂಲಮುತ್ತಮಂ"

ಎಂದು ಹೇಳಿದ್ದಾರೆ. ಅಲ್ಲದೆ ಮುಂಡಕೋಪನಿಷತ್ತಿನಲ್ಲಿ

"ನಾಯಮಾತ್ಮಾ ಬಲಹೀನೇನ ಲಭ್ಯಃ"

ಅಂದರೆ ಬಲಹೀನನಿಂದ ಆತ್ಮ ಸಾಕ್ಷಾತ್ಕಾರ ಸಾಧ್ಯವಿಲ್ಲ ಎಂದು ಹೇಳಿದೆ.

ಅಲ್ಲದೆ, ಪ್ರಪಂಚದಲ್ಲಿ ಯಾರೂ ತಾನು ರೋಗಿಯಾಗಿರಬೇಕು, ದುರ್ಬಲನಾಗಿರಬೇಕು ಎಂದು ಇಚ್ಛಿಸುವುದಿಲ್ಲ. ಇದಕ್ಕೆ ಪ್ರತಿಯಾಗಿ ಪ್ರತಿಯೊಬ್ಬನೂ ತಾನು ಆರೋಗ್ಯವಂತನೂ ದೃಢಕಾಯನೂ ಆಗಿರಬೇಕೆಂದು ಬಯಸುತ್ತಾನೆ. ಆದರೆ ಇದು ಕೇವಲ ಬಯಸಿದ ಮಾತ್ರಕ್ಕೆ ಸಿಗುವ ವಸ್ತುವಲ್ಲ. ಇದಕ್ಕೆ ಶಾಸ್ತ್ರೀಯವಾದ, ಕ್ರಮಬದ್ಧವಾದ ಸಾಧನೆ ಅತ್ಯಗತ್ಯ. ಅಂತಹ ಸಾಧನೆಯೆಂದರೆ 'ಯೋಗಾಸನಗಳೇ' ಎಂದು ನಿರ್ವಿವಾದವಾಗಿ ಹೇಳಬಹುದು. ಇದು ಪಾತಂಜಲಪ್ರೋಕ್ತ ಅಷ್ಟಾಂಗಯೋಗದ ಮೂರನೇ ಹಂತ. ಪಾತಂಜಲ ಯೋಗಸೂತ್ರದಲ್ಲಿ "ತತ್ರಸ್ಥಿರಸುಖಮಾಸನಂ" ಅಂದರೆ ಸ್ಥಿರವೂ ಸುಖವೂ ಆಗಿರುವುದೇ ಆಸನ ಎಂದು ಹೇಳಿದೆ. ಆಸನವೆಂದರೆ ಅಂಗದ ವಿನ್ಯಾಸ. ಅಂಗದ ವಿನ್ಯಾಸವೆಂದರೆ ದೇಹದ ತೂಕವು ಸಮತೋಲನವಾಗಿದ್ದು ಶರೀರದ ಯಾವ ಭಾಗಕ್ಕೂ ನೋವಾಗದಂತೆ ಸುಖವಾಗಿ ದೀರ್ಘಕಾಲವಿರಬಹುದಾದ ದೇಹದ ನಿಲವು. ಪಾತಂಜಲ ಯೋಗಸೂತ್ರದ ವ್ಯಾಸ ಭಾಷ್ಯದಲ್ಲಿ ಕೇವಲ ಕೆಲವೇ ಆಸನಗಳನ್ನು ಹೇಳಿದೆ. ಅವುಗಳೇ ಪದ್ಮಾಸನ, ಸ್ವಸ್ತಿಕಾಸನ, ಭದ್ರಾಸನ, ವೀರಾಸನ, ದಂಡಾಸನ, ಸೋಪಾಶ್ರಯ, ಪರ್ಯಂಕ, ಕ್ರೌಂಚ ನಿಷದನ, ಹಸ್ತಿ ನಿಷದನ, ಉಷ್ಟ್ರನಿಷದನ ಇತ್ಯಾದಿ. ನಂತರ ಬಂದ ಯೋಗಾಚಾರ್ಯರುಗಳು ಮುಖ್ಯವಾಗಿ ೮೪ ಆಸನಗಳನ್ನು ಹೇಳಿದ್ದರೂ ಅವು ಶಾಖೋಪಶಾಖೆಗಳಾಗಿ ಕವಲೊಡೆದು ಇಂದು ಸಹಸ್ರಾರು ಆಸನಗಳಾಗಿವೆ. ಘೇರಂಡಸಂಹಿತೆ, ಧ್ಯಾನಬಿಂದೂಪನಿಷತ್ತುಗಳಲ್ಲಿ.

"ಆಸನಾನಿ ಚ ತಾವಂತಿ ಯಾವಂತೋ ಜೀವರಾಶಯಃ"

ಎಂದು ಹೇಳಿದೆ. ಅಂದರೆ ಈ ಸೃಷ್ಟಿಯಲ್ಲಿ ಎಷ್ಟು ಬಗೆಯ ಜೀವರಾಶಿಗಳಿವೆಯೋ

ಅಷ್ಟೇ ಯೋಗಾಸನಗಳೂ ಇವೆ. ಅಷ್ಟೇ ಅಲ್ಲದೆ ಕೆಲವು ವಿಶಿಷ್ಟವಸ್ತುಗಳ ಹೆಸರಿನಲ್ಲಿ, ಪ್ರಾಚೀನ ಋಷಿಗಳ ಹೆಸರಿನಲ್ಲಿ, ದೇಹದ ವಿವಿಧ ಅಂಗಗಳ ಹೆಸರಿನಲ್ಲಿಯೂ ಸಹ ಅನೇಕ ಯೋಗಾಸನಗಳಿವೆ. ಹೀಗೆ ಆಸನಗಳ ಸಂಖ್ಯೆ ಅಪಾರ.

ಈ ಆಸನಗಳೆಲ್ಲವೂ 'ಹಠಯೋಗ'ದಲ್ಲಿ ಉಕ್ತವಾಗಿವೆ. ಹಠಯೋಗವೆಂದರೆ ಅಪಾಯಕಾರಿಯಾದ ಆಮ್ಲವನ್ನು ಕುಡಿಯುವುದು, ಗಾಜನ್ನು ಅಗಿದು ನುಂಗುವುದು, ಉರಿಯ ಒಳಗೆ ಪ್ರವೇಶಿಸುವುದು, ನೀರಿನಮೇಲೆ ನಡೆಯುವುದು ಇಂತಹ ಐಂದ್ರಜಾಲಿಕ ಕೌಶಲ್ಯವನ್ನು ಪ್ರದರ್ಶಿಸುವುದೆಂದು ತಪ್ಪಾಗಿ ಭಾವಿಸುವವರೂ ಇದ್ದಾರೆ. ಇಲ್ಲಿ 'ಹಠ' ಎಂದರೆ 'ಛಲ' ಎಂಬ ಅರ್ಥವೂ ಅಲ್ಲ.

ಹಕಾರೇಣ ಉಚ್ಯತೇ ಸೂರ್ಯಃ ಠಕಾರಶ್ಚಂದ್ರ ಮುಚ್ಯತೇ ।
ಸೂರ್ಯಚಂದ್ರಮಸೋರೈಕ್ಯಂ ಹಠಯೋಗೋನಿಗದ್ಯತೇ ॥

'ಹ' ಎಂದರೆ ಸೂರ್ಯನಾಡಿ; 'ಠ' ಎಂದರೆ ಚಂದ್ರನಾಡಿ. ಈ ಎರಡರ ಐಕ್ಯವೇ ಹಠಯೋಗ. 'ಹಠಯೋಗ ಪ್ರದೀಪಿಕೆ'ಯ ಲೇಖಕರಾದ ಸ್ವಾತ್ಮಾರಾಮರೆಂಬ ಯೋಗಿಗಳು ಈ ಮಾರ್ಗವು ಕಷ್ಟಕರವಾದ ಶಿಸ್ತನ್ನು ನಿಯಮಿಸುವುದರಿಂದ ಇದನ್ನು ಹಠಯೋಗವೆಂದು ಕರೆದಿದ್ದಾರೆ.

ಇಂದು ನಮಗೆ ಯೋಗಾಸನಗಳ ಅಗತ್ಯ ಹಿಂದಿಗಿಂತಲೂ ಅಧಿಕವಾಗಿದೆ. ಇದಕ್ಕೆ ಕಾರಣ ಇಂದಿನ ವಿಜ್ಞಾನಯುಗದಲ್ಲಿ ನಾವು ಸೇವಿಸುತ್ತಿರುವ ನಿಸ್ಸತ್ವ ಆಹಾರ, ಕಲ್ಮಶಯುಕ್ತವಾದ ನೀರು, ಉಸಿರಾಡುವ ವಿಷಯುಕ್ತಗಾಳಿ ಹಾಗೂ ನವನಾಗರೀಕತೆಯ ಹೆಸರಿನಲ್ಲಿ ಆಚರಿಸುತ್ತಿರುವ ಹೊಲಸು ಆಚರಣೆ—ಇವುಗಳಿಂದಾಗಿ ಹಲವು ಬಗೆಯ ರೋಗಗಳಿಗೆ ತುತ್ತಾಗುತ್ತಿದ್ದೇವೆ. ಅಲ್ಲದೆ,

"ಪೂರ್ವಜನ್ಮ ಕೃತಂಪಾಪಂ ರೋಗ ರೂಪೇಣ ಪೀಡ್ಯತೇ"

ಎಂಬ ಆರ್ಯವಾಣಿಯಂತೆ ಕರ್ಮವಶದಿಂದಲೂ ರೋಗಗ್ರಸ್ತರಾಗುತ್ತೇವೆ. ಇವುಗಳ ನಿವಾರಣೆಗೂ ಯೋಗಾಸನಗಳ ನಿತ್ಯಾಚರಣೆ ಅತಿಮುಖ್ಯ.

ಇದೇನಿದು; ರೋಗ ಬಂದರೆ ಔಷಧೋಪಚಾರಗಳಿಲ್ಲವೇ ಎಂದು ಕೇಳಬಹುದು. ಅಲ್ಲದೆ ವೈದ್ಯಶಾಸ್ತ್ರದಲ್ಲಿಯೂ ಸಹ "ವಿಚಿತ್ರೋ ಹಿ ಮಣಿ ಮಂತ್ರೌಷಧೀನಾಂ ಪ್ರಭಾವಃ" ಎಂದು ರೋಗನಿವಾರಣೆಗೆ ಮಣಿ, ಮಂತ್ರ, ಔಷಧಿಗಳು ಹೇಳಲ್ಪಟ್ಟಿವೆ. ಆದರೆ ರೋಗ ಬಂದ ಮೇಲೆ ವಿವಿಧ ಚಿಕಿತ್ಸೆಗಳಿಗೆ ಗುರಿಯಾಗುವ ಬದಲು, ಔಷಧಿಗಳಿಗೆ ಶರಣು ಹೋಗುವ ಬದಲು ರೋಗ ಬಾರದಂತೆ ತಡೆಗಟ್ಟುವುದು ಯೋಗ್ಯವಲ್ಲವೆ? "Prevention is better than cure" ಎಂಬ ಆಂಗ್ಲೋಕ್ತಿಯೂ ಸಹ ಈ ಮಾತನ್ನು ಸಮರ್ಥಿಸು

ತ್ತದೆ. ಈ ದಿಶೆಯಲ್ಲಿ ಯೋಗಾಸನಗಳು ನಮಗೆ ವರಪ್ರದಾನವೆಂದೇ ಹೇಳಬೇಕು.

ಯೋಗಾಸನಗಳಿಂದ ದೇಹಕ್ಕೆ ದೊರೆಯಬಹುದಾದ ಲಾಭವು ಅಂಗಸಾಧನೆ ಆಟೋಟಗಳು, ಕೆಲವು ದೇಹಶ್ರಮದ ಕಾರ್ಯಗಳಿಂದ ದೊರೆಯುವುದಿಲ್ಲವೆ ಎಂದೂ ಸಹ ಪ್ರಶ್ನಿಸಬಹುದು. ನಿಜ, ಇವುಗಳಿಂದ ದೇಹಕ್ಕೆ ವ್ಯಾಯಾಮವು ದೊರೆಯಬಹುದಾದರೂ ಮನಸ್ಸ್ವಾಸ್ಥ್ಯವು ಖಂಡಿತ ದೊರೆಯಲಾರದು. ದೇಹಶಕ್ತಿಯ ಜತೆಗೆ ಮಾನಸಿಕ ಶಕ್ತಿಸಂವರ್ಧನೆಯೂ ಆಗಬೇಕು. ಅಂತಹ ಆರೋಗ್ಯವನ್ನೇ ಪೂರ್ಣಾರೋಗ್ಯ ಎಂದು ಹೇಳುವುದು. ಇಂತಹ ಪೂರ್ಣಾರೋಗ್ಯ ಯೋಗಾಸನಗಳಿಂದ ಮಾತ್ರ ಲಭ್ಯ.

ಯೋಗಾಸನಗಳನ್ನು ಅಗತ್ಯಕ್ಕೆ ತಕ್ಕಂತೆ ನಾಲ್ಕು ವಿಧವಾಗಿ ವಿಂಗಡಿಸಬಹುದು.

೧. ಅಧ್ಯಾತ್ಮ್ಯಸಾಧನಾ ಯೋಗಾಸನಗಳು.

೨. ದೈಹಿಕ ಹಾಗೂ ಮಾನಸಿಕ ಶಕ್ತಿಸಂವರ್ಧನಾ ಯೋಗಾಸನಗಳು.

೩. ದೇಹಸ್ವಾಸ್ಥ್ಯದ ಯೋಗಾಸನಗಳು ಮತ್ತು

೪. ಚಿಕಿತ್ಸಾ ಯೋಗಾಸನಗಳು.

ಹಿಂದೆ ವ್ಯಾಸಭಾಷ್ಯದಲ್ಲಿ ಹೇಳಿದ ಯೋಗಾಸನಗಳೇ ಅಧ್ಯಾತ್ಮಸಾಧನಾ ಯೋಗಾಸನಗಳು. ಇಲ್ಲಿ ಇಷ್ಟು ಆಸನಗಳನ್ನು ಹೇಳಿರುವ ಉದ್ದೇಶವೇನೆಂದರೆ ಪ್ರತಿಯೊಬ್ಬ ವ್ಯಕ್ತಿಯ ದೇಹರಚನೆಯೂ ಭಿನ್ನವಾಗಿದೆ. ಯಾವುದೇ ಒಂದು ಆಸನ ಎಲ್ಲರಿಗೂ ಒಗ್ಗುವುದಿಲ್ಲ. ಆದುದರಿಂದ ಯೋಗಸಾಧಕನು ತನ್ನ ದೇಹ ಪ್ರಕೃತಿಗೆ ಯಾವ ಆಸನವು ಒಗ್ಗುತ್ತದೋ ಅಂತಹ ಒಂದು ಆಸನದಲ್ಲಿ ಕುಳಿತು ಅಧ್ಯಾತ್ಮಸಾಧನೆಗೆ ತೊಡಗಬಹುದು. ಒಂದು ಆಸನದಲ್ಲಿ ಮೈಮನಸುಗಳಿಗೆ ಬಾಧೆಯಿಲ್ಲದಂತೆ ಎರಡುವರೆ ಗಂಟೆಗಳ ಕಾಲ ಕುಳಿತು ಸಾಧನೆಮಾಡಲು ಸಾಧ್ಯವಾದರೆ ಅದನ್ನು 'ಆಸನಸಿದ್ಧಿ' ಎನ್ನುತ್ತಾರೆ.

ಇನ್ನು ಯೋಗಾಸನದ ಪೂರ್ವಸಿದ್ಧತೆ ಮತ್ತು ಆಚರಣೆಯ ಬಗ್ಗೆ ಎರಡು ಮಾತು.

೧. ಆಸನಾಭ್ಯಾಸಕ್ಕೆ ಪ್ರಾತಃಕಾಲ ಅತ್ಯುತ್ತಮ. ಆದರೆ ಸಂಧ್ಯಾಕಾಲದಲ್ಲಿ ದೇಹದ ಅವಯವಗಳು ಚಲನವಲನಗಳು ಅತಿ ಸುಲಭವಾಗುವುದರಿಂದ ಕಠಿಣವಾದ ಆಸನಗಳನ್ನು ಈ ಸಮಯದಲ್ಲಿ ಅಭ್ಯಾಸಮಾಡಿ ನಿತ್ಯಾಚರಣೆಯನ್ನು ಪ್ರಾತಃಕಾಲ ಮಾಡುವುದು ಒಳಿತು.

೨. ಗಾಳಿ ಬೆಳಕು ಸರಾಗವಾಗಿ ಬರುವ, ನಿರ್ಮಲವಾದ, ಪ್ರಶಾಂತವಾದ

ಹಾಗೂ ಸಮತಟ್ಟಾದ ಸ್ಥಳವು ಆಸನಾಭ್ಯಾಸಕ್ಕೆ ಉತ್ತಮ.

೩. ಆಸನವನ್ನೆಂದಿಗೂ ಬರಿನೆಲದ ಮೇಲೆ ಮಾಡಬಾರದು. ಮಂದವಾದ ಜಮುಖಾನ ಅಥವಾ ಕಂಬಳಿಯ ಮೇಲೆ ಅಭ್ಯಸಿಸಬೇಕು. ಇದಕ್ಕೆ ಕಾರಣ ಆಸನಾಭ್ಯಾಸದ ವೇಳೆಯಲ್ಲಿ ನಮ್ಮ ಶರೀರದಲ್ಲಿ ಶಾಖವು ಉತ್ಪತ್ತಿಯಾಗುತ್ತದೆ. ಈ ಶಾಖವು ನೆಲಕ್ಕೆ ಹೋದರೆ ಅದರಿಂದ ಅರ್ಧಾಂಗವಾಯು, ಶೀತಾಂಗವಾಯು ಪಕ್ಷಾಘಾತ, ಶ್ವಾಸಶ್ವಾಸವೇ ಮೊದಲಾದ ವಿವಿಧ ರೋಗಗಳುಂಟಾಗುವ ಸಂಭವವಿದೆ.

೪. ಬೆಳಿಗ್ಗೆ ಸ್ನಾನವಾದನಂತರ ಆಸನಾಭ್ಯಾಸವು ಸುಗಮವಾಗುತ್ತದೆ. ಆದರೆ ಅಭ್ಯಾಸದ ವೇಳೆಯಲ್ಲಿ ಮೈಬೆವರುವುದರಿಂದ ಆಸನದನಂತರ ಸ್ನಾನ ಮಾಡುವುದು ಒಳ್ಳೆಯದು. ರಾತ್ರಿ ವೀರ್ಯಸ್ಖಲನವಾಗಿದ್ದರೆ ಆದರ ಮಾಲಿನ್ಯ ವನ್ನು ತೊಳೆಯದೆ ಅಭ್ಯಾಸಮಾಡಕೂಡದು. ಹಾಗೆ ಮಾಡಿದ್ದೇ ಆದರೆ ನಾನಾ ಬಗೆಯ ಗುಹ್ಯ ರೋಗಗಳಿಗೆ ತುತ್ತಾಗಬೇಕಾಗುತ್ತದೆ.

೫. ಮಲಮೂತ್ರಗಳನ್ನು ತಡೆದು ಯೋಗಾಸನ ಮಾಡಕೂಡದು. ಮಲ ಬದ್ಧತೆಯುಳ್ಳವರು ಮೊದಲು ಶೀರ್ಷಾಸನ, ಸರ್ವಾಂಗಾಸನ ಮತ್ತು ಅದರ ಪ್ರಕಾರಗಳನ್ನು ಮಾಡಿ ಮುಗಿಸಿದ ನಂತರವೇ ಇತರ ಆಸನಗಳಿಗೆ ತೊಡಗ ಬೇಕು.

೬. ಆಹಾರವನ್ನು ಸೇವಿಸಿದ ತಕ್ಷಣ ಅಭ್ಯಾಸಕ್ಕೆ ತೊಡಗಬಾರದು. ಊಟ ವಾದ ಮೇಲೆ ಕನಿಷ್ಠ ಪಕ್ಷ ನಾಲ್ಕು ಗಂಟೆಗಳನ್ನಾದರೂ ಬಿಡಬೇಕು. ದ್ರವಾಹಾರ ತೆಗೆದುಕೊಂಡಿದ್ದರೆ ಅರ್ಧಗಂಟೆ ಬಿಡಬೇಕು. ಹೀಗೆಯೇ ಅಭ್ಯಾಸದ ನಂತರ ಕಡೆಯ ಪಕ್ಷ ಒಂದು ಗಂಟೆಯ ನಂತರ ಘನಾಹಾರವನ್ನೂ, ಅರ್ಧಗಂಟೆಯ ನಂತರ ದ್ರವಾಹಾರವನ್ನೂ ಸೇವಿಸಬಹುದು.

೭. ಅಭ್ಯಾಸದ ಕಾಲದಲ್ಲಿ ನಗುವುದು, ಮುಖವನ್ನು ಅತ್ತಿತ್ತ ತಿರುಗಿಸು ವುದು ಮಾಡಕೂಡದು. ಅಲ್ಲದೆ ಕಣ್ಣುಗಳನ್ನು ತೆರೆದಿರಬೇಕು.

೮. ಕೈಗಡಿಯಾರ, ಕನ್ನಡಕ ಹಾಗೂ ಆಭರಣಗಳನ್ನು ಕಳಚಿಡಬೇಕು. ಗಾಜಿನ ಪಾತ್ರೆ ಕಾಲ್ತೊಡರಾಗುವ ವಸ್ತುಗಳು ದೂರವಿರಬೇಕು.

೯. ಸ್ಥೂಲಕಾಯದವರು ಆಸನಗಳನ್ನು ರೇಚಕದಲ್ಲೇ ಮಾಡುತ್ತಿದ್ದರೆ ಶರೀರದ ಕೊಬ್ಬು ಕರಗಿ ದೇಹದ ತೂಕ ಕಡಿಮೆಯಾಗುತ್ತದೆ.

೧೦. ಮುಂದಕ್ಕೆ ಬಾಗುವ ಆಸನಗಳನ್ನು ರೇಚಕದಲ್ಲೂ ಹಿಂದಕ್ಕೆ ಬಾಗುವ ಆಸನಗಳನ್ನು ಪೂರಕದಲ್ಲೂ ಮಾಡುವುದು ಸಾಮಾನ್ಯ ವಿಧಿ.

೧೧. ಆಸನದ ಕಾಲದಲ್ಲಿ ಉಸಿರಾಟವನ್ನು ಮೂಗಿನ ಮೂಲಕ ನಡೆಸಬೇಕೇ ವಿನಃ ಬಾಯಿಯ ಮೂಲಕ ಅಲ್ಲ.

೧೨. ದೀರ್ಘಕಾಲ ಸಾಧನೆ ಮಾಡುವವರು ಅಭ್ಯಾಸದ ಬಳಿಕ ಮೂತ್ರ ವಿಸರ್ಜನೆ ಮಾಡಿಯೇ ತೀರಬೇಕು. ಇದರಿಂದ ಶರೀರದಲ್ಲಿ ಉಂಟಾದ ಉಷ್ಣಾಧಿಕ್ಯವು ಕಡಿಮೆಯಾಗಿ ಉರಿಮೂತ್ರ, ಮೂತ್ರಕೃಚ್ಛ್ರ ಮುಂತಾದ ರೋಗಗಳು ಬಾರದಂತೆ ತಡೆಯುತ್ತದೆ.

೧೩. ಅಭ್ಯಾಸ ಕಾಲದಲ್ಲಿ ಬರುವ ಬೆವರನ್ನು ಮೈಗೇ ತಿಕ್ಕಿ ಆರಿಸಿದರೆ, ದೇಹಕ್ಕೆ ಕಾಂತಿ, ದೃಢತೆ ಮತ್ತು ಶಕ್ತಿ ಉಂಟಾಗುತ್ತದೆ. ಅತಿ ಬೆವರುವವರು ಬಟ್ಟೆಯಿಂದ ಒರಸಿ ತೆಗೆಯಬಹುದು.

೧೪. ಆಸನಾಭ್ಯಾಸದ ಕೊನೆಯಲ್ಲಿ ಶವಾಸನವನ್ನು ಮಾಡಿಯೇ ತೀರಬೇಕು. ಇದರಿಂದ ಆಸನಾಭ್ಯಾಸದಿಂದುಂಟಾದ ಬಳಲಿಕೆ ನಿವಾರಣೆಯಾಗುವುದಲ್ಲದೆ ರಕ್ತದ ಒತ್ತಡ, ಅಪಸ್ಮಾರ, ಬುದ್ಧಿಭ್ರಮಣೆ, ಅನಿದ್ರೆ ಮುಂತಾದ ರೋಗಗಳು ಪರಿಹಾರವಾಗುತ್ತವೆ.

೧೫. ರಕ್ತದ ಒತ್ತಡ ಇಲ್ಲವೆ ತಲೆತಿರುಗು ಇರುವವರು ಶೀರ್ಷಾಸನ ಮತ್ತು ಸರ್ವಾಂಗಾಸನಗಳನ್ನು ಆರಂಭಿಸಬಾರದು. ಇಂಥವರು ಮೊದಲು ಪಶ್ಚಿಮೋತ್ತಾನಾಸನ, ಅಧೋಮುಖಶ್ವಾನಾಸನ ಮತ್ತು ಉತ್ಥಾನಾಸನಗಳನ್ನು ಮಾಡಿ ಮುಗಿಸಿದ ಬಳಿಕವೇ ಶೀರ್ಷಾಸನ ಹಾಗೂ ಸರ್ವಾಂಗಾಸನಗಳನ್ನು ಮಾಡಬೇಕು. ಈ ಆಸನಗಳನ್ನು ಮಾಡಿದ ಮೇಲೆ ಮತ್ತೆ ಪೂರ್ವೋಕ್ತ ಆಸನಗಳನ್ನು ಮಾಡಬೇಕು.

೧೬. ಲಘು ಮತ್ತು ತೀವ್ರ ರಕ್ತದ ಒತ್ತಡವಿರುವವರಿಗೆ ದೇಹವನ್ನು ಮುಂದಕ್ಕೆ ಬಾಗಿಸಿ ಮಾಡುವ ಆಸನಗಳು ಹೆಚ್ಚು ಫಲಕಾರಿ.

೧೭. ಕಿವಿನೋವು, ಕಣ್ಣುನೋವು, ಮೂಗುನೋವು, ತಲೆನೋವು, ಹಲ್ಲುನೋವು ಇರುವವರು ಶೀರ್ಷಾಸನವನ್ನು ಮಾಡಬಾರದು. ನೋವು ಇಲ್ಲದಾಗ ಶೀರ್ಷಾಸನವನ್ನು ಮಾಡಿದರೆ ಆ ಅಂಗಗಳ ರೋಗಗಳು ನಿವಾರಣೆಯಾಗುತ್ತವೆ.

೧೮. ಸ್ತ್ರೀಯರು ರಜಸ್ವಲೆಯರಾದಾಗ ಆಸನಾಭ್ಯಾಸ ಮಾಡಕೂಡದು. ಆದರೆ ರಕ್ತಸ್ರಾವವು ಎಂದಿಗಿಂತಲೂ ಹೆಚ್ಚಾಗಿದ್ದಲ್ಲಿ ಉಪವಿಷ್ಟಕೋಣಾಸನ, ಬದ್ಧಕೋಣಾಸನ, ವೀರಾಸನ, ಜಾನುಶೀರ್ಷಾಸನ, ಪಶ್ಚಿಮೋತ್ತಾನಾಸನ ಮತ್ತು ಉತ್ಥಾನಾಸನಗಳನ್ನು ಮಾಡಿದರೆ ಸ್ರಾವವು ಕಡಿಮೆಯಾಗುತ್ತದೆ. ಆದರೆ ಶೀರ್ಷಾಸನವನ್ನು ಖಂಡಿತ ಮಾಡಬಾರದು.

೧೯. ಗರ್ಭಿಣಿಯರು ಮೊದಲನೆಯ ಮೂರು ತಿಂಗಳು ಎಲ್ಲಾ ಆಸನಗಳನ್ನೂ ಮಾಡಬಹುದು. ಇದರಿಂದ ಸುಖಪ್ರಸವವಾಗುತ್ತದೆ.

೨೦. ಸ್ತ್ರೀಯರು ಪ್ರಸೂತಿಯಾದ ಒಂದು ತಿಂಗಳ ಕಾಲ ಆಸನಾಭ್ಯಾಸಕ್ಕೆ ತೊಡಗಬಾರದು. ನಂತರ ಸುಲಭವಾದ ಆಸನಗಳಿಂದ ಕ್ರಮಕ್ರಮವಾಗಿ ಮುಂದುವರಿಸಬೇಕು. ಮೂರು ತಿಂಗಳಾದ ಮೇಲೆ ಎಲ್ಲ ಆಸನಗಳನ್ನೂ ಮಾಡಬಹುದು.

೨೧. ಯೋಗಾಸನಗಳನ್ನು ಕ್ರಮವರಿತು ಆಸಕ್ತಿಯಿಂದ ಅಭ್ಯಸಿಸಿದರೆ ದೇಹದಲ್ಲಿ ಲವಲವಿಕೆ, ಮನಸ್ಸಿನಲ್ಲಿ ಉಲ್ಲಾಸ ಮೂಡುವುದರ ಜತೆಗೆ ಅಂಡವಾಯು, ಅತಿಸಾರ, ಆಮ್ಲಪಿತ್ತ, ಉದರಶೂಲೆ, ಉಬ್ಬಸ, ಶೋಭೆ, ಎದೆನೋವು, ಕಂಠಗ್ರಂಥಿ, ಗಲಗ್ರಂಥಿ, ಮಹೋದರ, ಮಧುಮೇಹ, ತಲೆಶೂಲೆ, ನಿಶ್ಶಕ್ತಿ, ಮರೆವು, ಮೂಲವ್ಯಾಧಿ, ಸಂಧಿವಾತ, ಸ್ವಪ್ನಸ್ಖಲನ, ರಾಜಯಕ್ಷ್ಮ, ಮುಟ್ಟಿನದೋಷ, ರಕ್ತದ ಕೊರತೆ, ಪಾರ್ಶ್ವವಾಯು ಮುಂತಾದ ಘೋರ ರೋಗಗಳು ನಿವಾರಣೆಯಾಗುತ್ತವೆ. ಆರೋಗ್ಯವಂತರು ಯೋಗಾಸನಗಳನ್ನು ಮಾಡುವುದರಿಂದ ಈ ಯಾವ ರೋಗಗಳಿಗೂ ಅವರು ಗುರಿಯಾಗುವುದಿಲ್ಲ.

ಪಾತಂಜಲಯೋಗದರ್ಶನದಲ್ಲಿ "ತತೋದ್ವಂದ್ವಾನಭಿಘಾತಃ ಎಂದು ಹೇಳಿದೆ. ಅಂದರೆ ಆಸನಜಯವಾದವನಿಗೆ ಶೀತೋಷ್ಣಗಳೇ ಮೊದಲಾದ ದ್ವಂದ್ವಗಳಿಂದ ಬಾಧೆ ಇರುವುದಿಲ್ಲ.

ಆಸನಗಳ ಸಂಖ್ಯೆ ಅಪಾರವಾಗಿರುವುದರಿಂದ ಎಲ್ಲ ಆಸನಗಳನ್ನೂ ನಿತ್ಯಾಚರಣೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಅಲ್ಲದೆ ಇಂದಿನ ಯಾಂತ್ರಿಕ ಯುಗದಲ್ಲಿ ಜೀವನದ ಜಂಜಾಟದಲ್ಲಿ ಬಿಡುವು ದೊರೆಯುವುದೇ ಕಷ್ಟ. ದಿನಕ್ಕೆ ಒಂದು ಗಂಟೆಯನ್ನಾದರೂ ಯೋಗಾಸನಕ್ಕಾಗಿ ವಿನಿಯೋಗಿಸಿದರೆ ಅದರಿಂದ ಮಹತ್ತರ ಲಾಭವುಂಟಾಗುವುದರಲ್ಲಿ ಸಂದೇಹವೇ ಇಲ್ಲ. ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರ ಗುರೂಜಿಯವರು ನಿತ್ಯದ ಅಭ್ಯಾಸಕ್ಕಾಗಿ ಅಷ್ಟಾದಶ ಆಸನಗಳನು ಶಿಫಾರಸು ಮಾಡಿದ್ದಾರೆ. ಅವು :

೧. ಪದ್ಮಾಸನ
೨. ಬದ್ಧಪದ್ಮಾಸನ
೩. ಮತ್ಸ್ಯಾಸನ
೪. ಸರ್ವಾಂಗಾಸನ
೫. ಪಶ್ಚಿಮೋತ್ತಾನಾಸನ

೧೦. ಅರ್ಧಮತ್ಸ್ಯೇಂದ್ರಾಸನ
೧೧. ಉತ್ಥಿತ ತ್ರಿಕೋಣಾಸನ
೧೨. ಮಯೂರಾಸನ
೧೩. ವಜ್ರಾಸನ
೧೪. ಸಿಂಹಾಸನ

೬. ಹಲಾಸನ
೭. ಭುಜಂಗಾಸನ
೮. ಶಲಭಾಸನ
೯. ಧನುರಾಸನ

೧೫. ಶೀರ್ಷಾಸನ
೧೬. ಶವಾಸನ
೧೭. ಉಡ್ಡೀಯಾನ
೧೮. ಸಾಲಿಕ್ರಿಯಾ

ಇವುಗಳ ಜತೆಗೆ ಸೂರ್ಯನಮಸ್ಕಾರವು ಅತಿ ಶ್ರೇಷ್ಠವಾದ ಆಚರಣೆ. ಇದರಿಂದ ಆಪಾದಮಸ್ತಕದವರೆಗೆ ದೇಹದ ಎಲ್ಲ ಭಾಗಕ್ಕೂ ವ್ಯಾಯಾಮವು ದೊರೆಯುವುದಲ್ಲದೆ ಜೊತೆಯಲ್ಲೇ ಅಧ್ಯಾತ್ಮಸಾಧನೆಯೂ ಆಗುತ್ತದೆ.

ಕೊನೆಯಲ್ಲಿ ಒಂದು ಎಚ್ಚರಿಕೆಯ ಮಾತು. ಆಸನಾಭ್ಯಾಸದಲ್ಲಿ ಕ್ರಮ ತಪ್ಪಿದರೆ ಅದರಿಂದ ಶರೀರಕ್ಲೇಶ, ಮನಸ್ಸಿಗೆ ಅಶಾಂತಿ ಇವು ತಲೆದೋರುತ್ತವೆ. ಆದುದರಿಂದ ಸಾಧಕರು ಯೋಗಾಸನತಜ್ಞರ ಮಾರ್ಗದರ್ಶನ ಪಡೆದು ಅಭ್ಯಸಿಸಬೇಕು. ಅಲ್ಲದೆ ಯೋಗಾಸನಗಳು ಮೋಜಿಗಾಗಿ ನಾಲ್ಕು ದಿನ ಮಾಡಿ ಬಿಡುವಂಥದಲ್ಲ. ಬಾಳಿನ ಪರ್ಯಂತ ಆಚರಣೆಯಲ್ಲಿಟ್ಟುಕೊಳ್ಳಬೇಕಾದ ಅಭ್ಯಾಸ.

ಇತ್ತೀಚಿನ ದಿನಗಳಲ್ಲಿ ಯೋಗಾಸನ ಶಿಬಿರಗಳನ್ನು ಕೆಲವು ಯೋಗಸಂಸ್ಥೆಗಳು ಏರ್ಪಡಿಸುತ್ತಿರುವುದು ಈ ದಿಶೆಯಲ್ಲಿ ಒಂದು ಆಶಾಭಾವನೆಯನ್ನು ಮೂಡಿಸಿದೆ. ಬಹುಶಃ ವಿದೇಶೀಯರ ದೃಷ್ಟಿ ನಮ್ಮ ಯೋಗದರ್ಶನದ ಮೇಲೆ ಬಿದ್ದಿರುವುದೇ ಕಾರಣವಿರಬಹುದು. ಅಂತೂ ಯೋಗಾಸನಗಳು ಕೇವಲ ಋಷಿಮುನಿಗಳಿಗೆ ಮಾತ್ರ ಸಂಬಂಧಿಸಿದ್ದು ; ಪ್ರಾಪಂಚಿಕರಿಗೆ ಅಲ್ಲ, ಎಂಬ ಮೂಢನಂಬಿಕೆ ನಿವಾರಣೆಯಾಗಿ ಅವು ಮಾನವರೆಲ್ಲರ ಸ್ವತ್ತು ; ನಮ್ಮದಲ್ಲವೆಂದು ದೂರೀಕರಿಸುತ್ತಿರುವ ಈ ಮಹಾವಿದ್ಯೆಯನ್ನು ಎಲ್ಲರೂ ತಮ್ಮದಾಗಿಸಿಕೊಂಡು ನಿರೋಗಿಗಳಾಗಿ ಬಾಳಿದರೆ ಈ ಲೇಖನದ ಉದ್ದೇಶ ಸಾರ್ಥಕವಾದೀತು.

"ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ನಿಬೋಧತ."

ಕೆ. ಕೇಶವಮೂರ್ತಿ

ಐಶ್ವರ್ಯವಿದ್ದರೆ ಅನುಭವಿಸಬೇಕು ಅಥವಾ ದಾನ ಮಾಡಬೇಕು, ಕೂಡಿಡಬಾರದು. ಜೇನು-ನೊಣಗಳು ಕೂಡಿಟ್ಟ ಜೇನು ಇತರರ ಪಾಲಾಗುವಂತೆ ಕೂಡಿಟ್ಟ ಹಣವೂ ಇತರರ ಪಾಲಾಗುತ್ತದೆ.

—ಶಾರ್ಙ್ಗಧರ

ನಮ್ಮ ಭೂಮಿ-೨

ಜೀವದ ಹುಟ್ಟು, ವಿಕಾಸ: ಅವರೂ ಸುಮಾರು ೪೦೦ ಕೋಟಿ ವರ್ಷಗಳ ಹಿಂದೆ ಭೂಮಿಯಲ್ಲಿದ್ದ ವಿಚಿತ್ರ ಸ್ಥಿತಿ ಜೀವದ ಹುಟ್ಟಿಗೆ ಪ್ರೇರಕವಾಯಿತು. ಸೂರ್ಯ ವಿಕಿರಣದಿಂದ ಪ್ರಾಚೀನ ಕಡಲಲ್ಲಿ ಒಡೆದ ಅಣುಗಳು ಮತ್ತೆ ಕೂಡಿಕೊಳ್ಳುತ್ತಿದ್ದಂತೆ ಯಾವುದೋ ಹಂತದಲ್ಲಿ ಅಮೈನೋ ಆಮ್ಲ, ನ್ಯೂಕ್ಲಿಕ್ ಆಮ್ಲಗಳ ಅಣುಗಳು ಮೈದಾಳಿದವು. ಎಲ್ಲಿಯೂ ಕಡಿಯದೆ, ಕೊನೆಗಾಣದೆ ನಡೆದ ಜಟಿಲವಾದ ವಿಕಾಸ ಕ್ರಮದಿಂದ ಅವು ಮುಂದಿನ ಅಸಂಖ್ಯಾತ ಜೀವಿ ಜಾತಿಗಳಿಗೆ ಕಾರಣವಾದವು.

ಭೂಮಿಯ ಒಳಗೂ ಮೇಲೂ ಬದಲಾವಣೆಯಾಗುತ್ತಲೇ ಇತ್ತು; ಜ್ವಾಲಾಮುಖಿ ಚಟುವಟಿಕೆ, ಪರ್ವತ ಬೆಳವಣಿಗೆ ನಡೆಯುತ್ತಲೇ ಇತ್ತು. ಒಟ್ಟೊಟ್ಟಿಗೇ ಕಡಲು ಮತ್ತು ನೆಲಭಾಗಗಳಲ್ಲಿ ಜೀವಿಗಳ ವಿಕಾಸವೂ ಆಯಿತು.

೬೦ ಕೋಟಿ ವರ್ಷಗಳಿಗಿಂತ ಹಿಂದಿನ ಆದಿ ಜೀವ ಯುಗದಲ್ಲಿ ನೆಲದ ಮೇಲೆ ಯಾವ ಜೀವಿಜಾತಿಯೂ ಇರಲಿಲ್ಲ. ಪ್ರಾಚೀನ ಜೀವಯುಗದಲ್ಲಿ (ಸುಮಾರು ೬೦-೨೩ ಕೋಟಿ ವರ್ಷಗಳ ಹಿಂದೆ) ಆಗಾಗ ಸಾಗರವು ನೆಲದ ಮೇಲೆ ಏರಿ ಬರುತ್ತಿತ್ತು, ಮತ್ತೆ ಹಿಂದೆ ಸರಿಯುತ್ತಿತ್ತು. ಸಾಗರದಲ್ಲಿ ಜೀವಿಗಳು ಸಮೃದ್ಧವಾಗಿದ್ದವು. ಅಕಶೇರುಕ, ಕಶೇರುಕ, ದ್ವಿಚರಗಳ ವಿಕಾಸವಾಯಿತು. ನೆಲದ ಮೇಲೆ ಸಸ್ಯಗಳು ನೆಲೆಯೂರಿದವು. ಸರೀಸೃಪಗಳು ಹರಿದಾಡಿದವು. ಹಸುರೆಲೆಯ ದೊಡ್ಡದೊಡ್ಡ ಮರಗಳು ಉಷ್ಣವಲಯದಲ್ಲಿ ಸೊಂಪಾಗಿ ಬೆಳೆದು ಮುಂದೆ ಕಲ್ಲಿದ್ದಲ ನಿಕ್ಷೇಪಗಳಿಗೆ ಕಾರಣವಾದವು.

ಮಧ್ಯ ಜೀವಯುಗದಲ್ಲಿ (೨೩-೭ ಕೋಟಿ ವರ್ಷಗಳ ಹಿಂದೆ) ಸಾಗರ ವಿಸ್ತಾರವು ಹೆಚ್ಚಿತು. ದೊಡ್ಡದೊಡ್ಡ ಪರ್ವತಗಳು ಸವೆದು ಸಣ್ಣಗಾದವು. ರಾಕಿ, ಏಂಡಿಸ್ ಪರ್ವತಶ್ರೇಣಿಗಳು ಉದಯಿಸತೊಡಗಿದವು. ಕಡಲಿನಲ್ಲಿ ಮೀನುಗಳು ಹೆಚ್ಚು ವಿಕಾಸಗೊಂಡುವು. ನೆಲದ ಮೇಲೆ ದೈತ್ಯ ಸರೀಸೃಪಗಳ ಪ್ರಭುತ್ವ ಹಾಗೂ ಪಕ್ಷಿ, ಸಸ್ತನಿಗಳ ವಿಕಾಸ ಈ ಯುಗದಲ್ಲಿ ನಡೆದವು.

ಆಧುನಿಕ ಜೀವಯುಗದಲ್ಲೂ (೭ ಕೋಟಿ ವರ್ಷಗಳಿಂದೀಚೆಗೆ) ಪರ್ವತ ಬೆಳವಣಿಗೆ ಮುಂದುವರಿಯಿತು. ಈ ಯುಗದ ಮೊದಲಿಗೆ ದಕ್ಷಿಣ ಭಾರತದಲ್ಲಿ ಜ್ವಾಲಾಮುಖಿ ಚಟುವಟಿಕೆ ಹೆಚ್ಚಿ ಲಾವ ಸಂಚಯನವಾಯಿತು. ಆಲ್ಪ್ಸ್, ಹಿಮಾಲಯ ಪರ್ವತ ಶ್ರೇಣಿಗಳು ಹುಟ್ಟಿಕೊಂಡವು. ಸುಮಾರು ೧೦ ಲಕ್ಷ ವರ್ಷಗಳಿಂದೀಚೆಗೆ ಕೆಲವು ಬಾರಿ ಉತ್ತರ ಗೋಳಾರ್ಧದ ವಿಸ್ತಾರ ಭಾಗ

ಮಂಜುಗಡ್ಡೆಯಿಂದ ಮುಚ್ಚಿಹೋಯಿತು. ಅಂಥ ಕಾಲವನ್ನು ಹಿಮಯುಗ ಎನ್ನುವರು. ಕೆಲವು ಅವಧಿಗಳಲ್ಲಿ ಮಂಜುಗಡ್ಡೆ ಕರಗಿ ಸಮುದ್ರ ಮಟ್ಟವನ್ನು ಏರಿಸುತ್ತಿತ್ತು. ಕರಗಿದ ಮಂಜುಗಡ್ಡೆಯಿಂದ ಅಮೆರಿಕ, ಯೂರೋಪ್ ಖಂಡಗಳಲ್ಲಿ ಸರೋವರಗಳು ಹುಟ್ಟಿಕೊಂಡವು. ಸುಮಾರು ೧೦ ಸಾವಿರ ವರ್ಷ ಗಳಿಂದೀಚೆಗೆ ಮಂಜುಗಡ್ಡೆಯ ಹಾಸು ಕರಗುತ್ತ ಬಂತು. ಆಧುನಿಕ ಯುಗದ ಕೊನೆಗೆ ಮಾನವನ ವಿಕಾಸವೂ ಆಯಿತು. ಕಳೆದ ೧೦ ಸಾವಿರ ವರ್ಷಗಳಲ್ಲಿ ಮನುಷ್ಯ ಜಾತಿ ಭೂಮಿಯ ಎಲ್ಲೆಡೆ ಹರಡಿತು.

ಭೂಮಿಯ ಚರಿತ್ರೆಯಲ್ಲಿ ಜೀವ ಉದಯಿಸಿದ ಕಾಲದಿಂದೀಚೆಗೆ ಭೂಮಿಯ ಮೇಲ್ಮೈ ಮತ್ತು ವಾತಾವರಣದ ಗುಣಲಕ್ಷಣಗಳನ್ನು ಬದಲಾಯಿಸುವಲ್ಲಿ ಜೀವಿಗಳ ಪಾತ್ರ ಅಲ್ಪವೇನಲ್ಲ. ನೀಲಹಸಿರು ಶೈವಲದಂಥ ಪ್ರಾಚೀನ ಸಸ್ಯದಿಂದ ಪ್ರಾರಂಭವಾದ ದ್ಯುತಿ ಸಂಶ್ಲೇಷಣೆಯಿಂದ ಭೂಮಿಯ ವಾತಾವರಣ ಮುಕ್ತ ಆಕ್ಸಿಜನನ್ನು ಪಡೆಯಿತು. ಆಕ್ಸಿಜನಿನ ಇರುವಿಕೆಯಿಂದ ಹೆಚ್ಚು ಜಟಿಲವಾದ ಜೀವಿ ವ್ಯವಸ್ಥೆಗಳು ಅಸ್ತಿತ್ವಕ್ಕೆ ಬರುವಂತಾಯಿತು. ಜೀವ ವಿಕಾಸದಲ್ಲಿ ಇತ್ತೀಚೆಗಿನವನಾದ ಮನುಷ್ಯ ಸಾಗರ, ವಾತಾವರಣ ಮತ್ತು ನೆಲಗಳನ್ನು ಬದಲಾಯಿಸುವ ಅಸಂಖ್ಯ ಚಟುವಟಿಕೆಗಳಲ್ಲಿ ನಿರತನಾಗುವಂತಾಯಿತು.

ಅಖಂಡದಿಂದ ಅನೇಕ ಖಂಡಗಳು : ಹಗುರ ಮೂಲವಸ್ತುಗಳು ಮೇಲಕ್ಕೆ ಚಲಿಸಿ ತಣಿದು ಭೂಮಿಯ ಚಿಪ್ಪಾಯಿತಷ್ಟೆ? ಇದನ್ನು ಭೂಮಿಯ ಶಿಲಾಮಂಡಲ ಎಂದೂ ಕರೆಯುವರು. ತೇಲುವ ತೆಪ್ಪದಂತಿದ್ದ ಈ ಚಿಪ್ಪು ಇಂದಿನ ಭೂಖಂಡಗಳಿಗೆ ಮೂಲವಾದ ನೆಲಭಾಗವಾಗಿತ್ತು. ಇಂಥ ಕಲ್ಪನೆಗೆ ಆಧಾರಗಳೂ ಇವೆ. ಇಂದು ಶೀತವಲಯದಲ್ಲಿರುವ ಕೆಲವು ಭೂಭಾಗಗಳು ಹಿಂದೆ ಉಷ್ಣವಲಯದ ಹವೆಯಲ್ಲಿದ್ದುದನ್ನು ಜೀವಿ ಅವಶೇಷಗಳೂ ಶಿಲೆಗಳೂ ಸೂಚಿಸುತ್ತವೆ. ಬ್ರೆಜಿಲ್, ಮಡಗಾಸ್ಕರ್ ಮತ್ತು ಭಾರತದ ಮಧ್ಯಪ್ರದೇಶ ದಲ್ಲಿ ಒಂದೇಕಾಲದ ಸರೀಸೃಪಗಳು ಅವಶೇಷಗಳು ದೊರೆತಿವೆ. ದಕ್ಷಿಣ ಅಮೆರಿಕ ಮತ್ತು ಆಫ್ರಿಕದ ಕರಾವಳಿಯ ಅಂಕುಡೊಂಕುಗಳನ್ನು ಪಕ್ಕದಲ್ಲಿಟ್ಟು ಜೋಡಿಸಿ ದರೆ ಸುಮಾರಾಗಿ ಸರಿಹೊಂದುತ್ತವೆ. ಅಂದರೆ ಅವು ಹಿಂದೆ ಜೋಡಿಕೊಂಡಿ ದ್ದಿರಲೂ ಸಾಕು. ಈ ಕಾರಣಗಳಿಂದ ಹಿಂದೆ 'ಏಕ ಭೂಖಂಡ' ವಾಗಿದ್ದುದೇ ಇಂದಿನ ಹಲವು ಭೂಖಂಡಗಳಾಗಿವೆ ಎಂಬ ಕಲ್ಪನೆ ಉದಯವಾಯಿತು. ಒಂದರಿಂದ ಹಲವಾದ ಬಗೆ ಹೇಗೆ? ಭೂಮಿಯ ಚಿಪ್ಪಿನ ಕೆಳಗಿನ ಭಾಗವನ್ನು ಭೂಕವಚ ಎನ್ನುವರು. ಇಲ್ಲಿ ಉಂಟಾದ ಅಗಾಧ ಬಲಗಳಿಗೆ ಒಳಗಾಗಿ


ಭೂಮಿಯ ಚಿಪ್ಪು ಅನೇಕ ಫಲಕಗಳಾಗಿ ಒಡೆಯಿತು. ಹಿಮಗಡ್ಡೆಗಳು ನೀರಲ್ಲಿ ತೇಲುವಂತೆ ಭೂಕವಚದ ಸ್ನಿಗ್ಧದ್ರವ್ಯದಲ್ಲಿ ಈ ಫಲಕಗಳ ಮೇಲಿನ ಭೂಖಂಡಗಳು ತೇಲಿದವು. ಭೂಕವಚದಲ್ಲಿರುವ ಬಲಗಳು ಅವನ್ನು ಬೇರೆಬೇರೆ ದಿಕ್ಕುಗಳಿಗೆ ನೂಕಿರಬಹುದು; ಕೆಲವು ಫಲಕಗಳಲ್ಲಿ ಪರಸ್ಪರ ಗುರುತ್ವಾಕರ್ಷಣೆಯಿಂದ ಸನಿಹಕ್ಕೆ ಬಂದಿರಬಹುದು.

ಈ ಕಲ್ಪನೆಯಂತೆ ಪಾಂಜಿಯ (ಅಖಂಡ ಭೂಮಿ) ಎಂಬ ಮೂಲಖಂಡವು ಒಡೆದು ಹೋದ ಮಹಾ ಘಟನೆ ಸುಮಾರು ೨೦ ಕೋಟಿ ವರ್ಷಗಳ ಹಿಂದೆ ನಡೆಯಿತು. ಆ ಘಟನೆಯ ಕಾಲಕ್ಕೆ ಇಂದಿನ ಪೆಸಿಫಿಕ್ ಸಾಗರದ ಪೂರ್ವಿಕ ಸಾಗರ ಭೂಮಿಯುಲ್ಲಿತ್ತು. ಆಫ್ರಿಕ, ಯುರೇಷ್ಯಗಳ ಮಧ್ಯೆ ಇದ್ದ ಟಿಥಿಸ್ ಸಮುದ್ರ ಬಂಮುಕೊಲ್ಲಿಯಾಗಿತ್ತು. ಆಗ ಎರಡು ಭಾರೀಗಾತ್ರದ ಬಿರುಕುಗಳು ಎದ್ದು ಸುಮಾರು ೨ ಕೋಟಿ ವರ್ಷಗಳಲ್ಲಿ ಅಟ್ಲಾಂಟಿಕ್ ಸಾಗರ ಮತ್ತು ಹಿಂದೂ ಮಹಾಸಾಗರಗಳು ಕಾಣಿಸತೊಡಗಿದವು. 'ಲಾರೇಷಿಯ' ಎಂಬ ಉತ್ತರ ಭೂಖಂಡಗಳ ಗುಂಪು 'ಗೊಂಡ್ವಾನ' ಎಂಬ ದಕ್ಷಿಣದ ಭೂಖಂಡಗಳ ಗುಂಪಿನಿಂದ ಬೇರೆಯಾಯಿತು. ಗೊಂಡ್ವಾನವೂ ಅಖಂಡವಾಗಿ ಉಳಿಯಲಿಲ್ಲ. ಆಫ್ರಿಕ, ದಕ್ಷಿಣ ಅಮೆರಿಕ ನೆಲವನ್ನು ಅಂಟಾರ್ಕ್ಟಿಕ-ಆಸ್ಟ್ರೇಲಿಯಗಳಿಂದ ಬೇರೆಯಾಗಿಸುವ ಬಿರುಕು ಕಾಣಿಸಿಕೊಂಡಿತ್ತು. ಅಂಟಾರ್ಕ್ಟಿಕಕ್ಕೆ ಹೊಂದಿಕೊಂಡಿದ್ದ ಭಾರತವೂ ಪ್ರತ್ಯೇಕವಾಗಿ ಸರಿಯತೊಡಗಿತ್ತು. ಆದಕ್ಕೆ ಜಂಬೂದ್ವೀಪವೆಂಬ ಹೆಸರು ಅಂದು ಅನ್ವರ್ಥವಾಗಿತ್ತು. ಸುಮಾರು ೬.೫ ಕೋಟಿ ವರ್ಷಗಳ ಅವಧಿಯಲ್ಲಿ (೧೩.೫ ಕೋಟಿ ವರ್ಷಗಳ ಹಿಂದೆ) ಉತ್ತರ ಅಟ್ಲಾಂಟಿಕ್ ಸಾಗರ ಮತ್ತು ಹಿಂದೂ ಮಹಾಸಾಗರಗಳ ಅಗಲ ಹೆಚ್ಚಾಯಿತು. ಹೊಸತೊಂದು ಬಿರುಕಿನಿಂದಾಗಿ ದಕ್ಷಿಣ ಅಟ್ಲಾಂಟಿಕ್ ಸಾಗರವೂ ಕಾಣಿಸಿಕೊಂಡಿತು. ಯುರೇಷ್ಯ (ಯೂರೋಪ್ ಮತ್ತು ಏಷ್ಯ) ಭೂಖಂಡದ ಫಲಕ ಆವರ್ತಿಸಿದುದರಿಂದ ಟಿಥಿಸ್ ಸಮುದ್ರದ ಪೂರ್ವಭಾಗವು ಮುಚ್ಚಿಹೋಗಿ ಮೆಡಿಟರೇನಿಯನ್ ಸಮುದ್ರವಾಗುವ ಹಂತ ಪ್ರಾರಂಭವಾಯಿತು. ಉತ್ತರಕ್ಕೆ ಸರಿಯುತ್ತಿದ್ದ ಭಾರತವನ್ನೊಳಗೊಂಡ ಫಲಕವು ಬೆಸಾಲ್ಟನ್ನು (ಭಾರವಾದ ಶಿಲಾ ಪದಾರ್ಥ) ಕಾರುವ-ಮುಂದೆ ದಖ್ಖಣ ಪೀಠಭೂಮಿಯಾಗುವ-ಭಾಗದ ಮೇಲೆ ಹಾದು ಹೋಗತೊಡಗಿತ್ತು. ಭಾರತ ಭೂಖಂಡ ಫಲಕವು ಸಾಗಿದ ಮೇಲೂ ಭೂಕವಚದಿಂದ ಬೆಸಾಲ್ಟ್ ದ್ರವ ಉಕ್ಕಿ ಹರಿಯುತ್ತಲೇ ಇತ್ತು. ಇದರಿಂದ ಸಾಗರಾಂತರ್ಗತವಾದ ಏಣು ಉಂಟಾಯಿತು. ಮುಂದೆ ಇದರಲ್ಲಿ ಹವಳ ತುಂಬಿ

ಲಕ್ಷದ್ವೀಪ ಸಮೂಹವಾಯಿತು. ೧೩.೫ ಕೋಟಿ ವರ್ಷಗಳ ತರುವಾಯ (೬.೫ ಕೋಟಿ ವರ್ಷಗಳ ಹಿಂದೆ) ದಕ್ಷಿಣ ಅಟ್ಲಾಂಟಿಕ್ ಸಾಗರವು ವಿಶಾಲವಾಯಿತು. ಕಳೆದ ೬.೫ ಕೋಟಿ ವರ್ಷಗಳಲ್ಲಿ ಭೂಖಂಡಗಳಿಗೆ ನಾವಿಂದು ಕಾಣುವ ರೂಪ ಬಂತು. ಸಾಗರ ತಳದ ಅರ್ಧಾಂಶ ಸಲೆ ಈ ಅಲ್ಪ ಕಾಲದಲ್ಲಿ (ಭೂಮಿಯ ಚರಿತ್ರೆಗೆ ಹೋಲಿಸಿದರೆ ಮಾತ್ರ ಅಲ್ಪ!) ಉಂಟಾಯಿತು. ಉತ್ತರಾಭಿಮುಖವಾಗಿ ಸಾಗಿದ ಭಾರತ ಭೂಫಲಕ ಏಷ್ಯವನ್ನು ತಾಗಿ ನಿಂತಿತು. ಮತ್ತೊಂದು ಬಿರುಕಿನಿಂದಾಗಿ ಆಸ್ಟ್ರೇಲಿಯ ಅಂಟಾರ್ಕ್ಟಿಕ್‌ದಿಂದ ಬೇರೆಯಾಯಿತು. ಹಿಂದೆಯೇ ಉಂಟಾದ ಉತ್ತರ ಅಟ್ಲಾಂಟಿಕ್ ಬಿರುಕು ಲಾರೇಷಿಯವನ್ನು ಒಡೆಯಿತು. ಭಾರತ - ಏಷ್ಯಗಳ ಸಂಘಟಣೆಯಿಂದ ಹಿಮಾಲಯ ಪರ್ವತ ಶ್ರೇಣಿಗಳು ಉದ್ಭವು. ಭೂಖಂಡ ಫಲಕಗಳ ಚಲಿತ ಇನ್ನೂ ಕೊನೆಗೊಂಡಿಲ್ಲ. ಆದ್ದರಿಂದ ಕೋಟ್ಯಾಂತರ ವರ್ಷಗಳ ಅನಂತರ ಭೂಖಂಡಗಳ ರೂಪರೇಷೆ ಇಂದಿನಂತೆ ಇರದು.

(ಸಶೇಷ)

ಅಡ್ಯನಡ್ಕ ಕೃಷ್ಣಭಟ್ಟ



ಮಿತವ್ಯಯವಿಲ್ಲದೇ ಯಾರೂ ಸಿರಿವಂತರಾಗರು. ಮಿತವ್ಯಯ ಸಾಧಿಸುವವರು ಎಂದೂ ಬಡವರಾಗರು.

—ಜಾನಸನ್

ಮೊದಲಿನ ಆಶೆಗಳು ತೀರಿದ ತಕ್ಷಣ ಹೆಚ್ಚಿನ ಆಶೆಗಳು ಅತ್ಯಾವಶ್ಯಕವಾಗಿ ಬಿಡುತ್ತವೆ.

—ಎಮರಸನ್

ನಾಚಿಕೆಯ ನ್ಯೂಟ್ರಿನೋ

ಪ್ರಕೃತಿಯ ಅತ್ಯಂತ ಸಣ್ಣ ವಸ್ತುಗಳೆಂದರೆ ಪ್ರಾಥಮಿಕ ಕಣಗಳು. ಪರಮಾಣುವಿಗಿಂತಲೂ ಲಕ್ಷ ಪಾಲು ಚಿಕ್ಕವಾಗಿರುವ ಈ ಕಣಗಳ ಬಗ್ಗೆ ಮೊದಲ ಅರಿವು ಬರತೊಡಗಿದ್ದು ೧೯೩೦ರ ಸುಮಾರಿನಲ್ಲಿ, ಆದರೂ ಈಗ ಈ ವಿಜ್ಞಾನ ಬೃಹತ್ತಾಗಿ ಬೆಳೆದಿದೆ. ಸುಮಾರು ನೂರು ಬಗೆಯ ಪ್ರಾಥಮಿಕ ಕಣಗಳ ಬಗ್ಗೆ ವಿಷಯಗಳು ವಿವರವಾಗಿ ತಿಳಿದುಬಂದಿವೆ.

ಪರಮಾಣುಗಳೇ ಜನಸಾಮಾನ್ಯರಿಗೆ ಊಹಿಸಲೂ ಕಷ್ಟವಾಗುವಷ್ಟು ಚಿಕ್ಕಗಾತ್ರದವು. ಇವಕ್ಕೂ ಲಕ್ಷ ಪಾಲು ಸಣ್ಣ ಗಾತ್ರದ ಬಗ್ಗೆ ಸಂಶೋಧನೆ ನಡೆಸುವುದೆಂದರೆ ಎಷ್ಟು ಕಷ್ಟ! ಆದರೂ ಬಹಳಷ್ಟು ಯುಕ್ತಿ, ಜಾಣ್ಮೆಗಳನ್ನು ಉಪಯೋಗಿಸಿರುವ ವಿಜ್ಞಾನಿಗಳು ಈ ಸಣ್ಣ ಕಣಗಳನ್ನು ಅಭ್ಯಸಿಸುವ ವಿಧಾನಗಳನ್ನು ಸುಲಭವಾಗಿಸಿದ್ದಾರೆ.

ಆದರೆ ಅತ್ಯಂತ ಪ್ರತಿಭಾವಂತರಿಗೂ ನೀರು ಕುಡಿಸುತ್ತಿರುವ ಒಂದು ಪ್ರಾಥಮಿಕ ಕಣ ಇದೆ! ಇದರ ಹೆಸರು 'ನ್ಯೂಟ್ರಿನೊ'.

ನ್ಯೂಟ್ರಿನೋ ಇರಬಹುದೆನ್ನುವ ಸಂಶಯ ಬರತೊಡಗಿದ್ದು ೧೯೨೦ ರ ಸುಮಾರಿನಲ್ಲಿ. ಆಗ ಪರಮಾಣುವಿನ ಬಗ್ಗೆಯೇ ಇನ್ನೂ ಹೆಚ್ಚಾಗಿ ತಿಳಿದಿರಲಿಲ್ಲ. ಪರಮಾಣುವೆಂದರೆ ಸೌರವ್ಯೂಹದಂತಿರುವ ರಚನೆ ಎಂದು ಸಿದ್ಧವಾಗಿದ್ದರೂ ಪರಮಾಣು ಕೇಂದ್ರ ಹೇಗಿದೆ, ಯಾವುದರಿಂದ ಮಾಡಲ್ಪಟ್ಟಿದೆ, ಹೇಗೆ ಬದಲಾವಣೆಗಳಿಗೆ ಒಳಗಾಗುತ್ತದೆ ಎನ್ನುವುದೆಲ್ಲಾ ಸರಿಯಾಗಿ ತಿಳಿದಿರಲಿಲ್ಲ. ಇದನ್ನು ತಿಳಿಯುವಲ್ಲಿ ಮಾಡುತ್ತಿದ್ದ ಸಂಶೋಧನೆಗಳಲ್ಲಿ ಒಂದು ವಿಚಿತ್ರ ಕಾಣಿಸಿತು.

ಒಂದು ಬಗೆಯ ಪರಮಾಣು ಸ್ವಾಭಾವಿಕವಾಗೇ ವಿದಳನವಾಗಿ ಇನ್ನೊಂದು ಬಗೆಯ ಪರಮಾಣುವಾಗುವುದು ಕೆಲವು ವಸ್ತುಗಳಲ್ಲಿ ಕಂಡುಬಂದಿದ್ದ ಗುಣ. ಸ್ವಾಭಾವಿಕ ವಿದಳನದಲ್ಲಿ ಎರಡನೆಯ ಪರಮಾಣು ಮೊದಲನೆಯದಕ್ಕಿಂತಲೂ ಕಡಿಮೆ ತೂಕದ್ದು. ಹಾಗಿದ್ದ ಮೇಲೆ ತೂಕದಲ್ಲಿನ ವ್ಯತ್ಯಾಸ ಬೇರೆ ರೀತಿಯಲ್ಲಿ ಹಾರಿಹೋಗುತ್ತಿರಬೇಕು. ವಿದಳನವಾದಾಗಲೆಲ್ಲಾ ಬಗೆ ಬಗೆಯ 'ವಿಕಿರಣ'ಗಳೂ ಹೊಮ್ಮುತ್ತವೆ ಎಂದು ಗೊತ್ತಿತ್ತು. ಈ ವಿಕಿರಣಗಳು ಕೊಂಡೊಯ್ಯುತ್ತಿದ್ದ ಶಕ್ತಿ ಎಷ್ಟು ಎಂದು ತಿಳಿಯಲು ಪ್ರಯೋಗಗಳನ್ನು ನಡೆಸಿದರು. ಹಾಗೆ ಅಳೆದು ನೋಡಿದಾಗ ಅನೇಕ ವಿದಳನದಲ್ಲಿ ಈ ಶಕ್ತಿ ಪರಮಾಣು ತೂಕಗಳ

ವ್ಯತ್ಯಾಸದಷ್ಟೇ ಇರುತ್ತಿತ್ತು. ಆದರೆ ಕೆಲವು ರೀತಿಯ ವಿದಳನಗಳಲ್ಲಿ ಮಾತ್ರ ವಿಕಿರಣಗಳು ಕೊಂಡೊಯ್ಯುತ್ತಿದ್ದ ಶಕ್ತಿ ಇರಬೇಕಿದ್ದಕ್ಕಿಂತ ಕಡಿಮೆಯೇ ಇರುತ್ತಿತ್ತು! ಹಾಗಾದರೆ ಶಕ್ತಿ ಇದ್ದಕ್ಕಿದ್ದಂತೆ ಮಾಯವಾಗಿ ಹೋಗುತ್ತಿತ್ತೇ?

ಎಷ್ಟೋ ವರ್ಷಗಳು ತಲೆ ಕೆರೆದುಕೊಂಡರೂ, ಎಷ್ಟೇ ಕಷ್ಟಪಟ್ಟು 'ಕಣ್ಣಲ್ಲಿ ಕಣ್ಣಿಟ್ಟು' ಹುಡುಕಿದರೂ ಪರಮಾಣುಗಳ ತೂಕದಲ್ಲಿದ್ದ ವ್ಯತ್ಯಾಸಕ್ಕೆ ಸಮನಾದ ಶಕ್ತಿ ಪೂರ್ತಿಯಾಗಿ ಸಿಗದೇ ಇದ್ದುದರಿಂದ ೧೯೩೦ರಲ್ಲಿ ಇಟಾಲಿಯನ್ ವಿಜ್ಞಾನಿಯಾದ ಪೌಲಿ ಒಂದು ಸಿದ್ಧಾಂತ ಮಂಡಿಸಿದ. ಶಕ್ತಿ ಮಾಯವಾಗುವುದು ಅಸಾಧ್ಯ. ಆದ್ದರಿಂದ ಬೇರಾವುದೋ ಹೊಸ ರೀತಿಯ ಕಣ ಇರಬೇಕು ಪ್ರಕೃತಿಯಲ್ಲಿ ಎಂದ. ವಿದಳನ ಸಮಯದಲ್ಲಿ ಈ ಹೊಸ ಕಣ ಉತ್ಪತ್ತಿಯಾಗಿ ಸ್ವಲ್ಪ ಭಾಗ ಶಕ್ತಿಯನ್ನು ಪಡೆದುಕೊಂಡು ಯಾವ ಪ್ರಯೋಗಕ್ಕೂ ಸಿಗದೇ ಹಾರಿಹೋಗುತ್ತಿರಬೇಕು ಎಂದ. ವಿದಳನವಾದಾಗ ಬರುವ ಮಿಕ್ಕ ವಿಕಿರಣಗಳ ಗುಣ, ರೀತಿಗಳು ಚೆನ್ನಾಗಿ ತಿಳಿದಿದ್ದುವು. ಅವೆಲ್ಲಕ್ಕಿಂತ ಭಿನ್ನವಾಗಿರಬೇಕಾದ್ದರಿಂದ ಈ ಹೊಸ ಕಣದ ಗುಣಗಳು ವಿಚಿತ್ರವಾಗಿರಲೇಬೇಕಾಗಿತ್ತು. ಉದಾಹರಣೆಗೆ, ಅತ್ಯಂತ ಕಡಿಮೆ ತೂಕ ಹೊಂದಿರಬೇಕಿತ್ತು, ವಿಪರೀತ ವೇಗದಲ್ಲಿ ಹಾರಿಹೋಗುತ್ತಿದ್ದಿರಬೇಕು, ಇತ್ಯಾದಿ. ಜೊತೆಗೆ, ವಿದ್ಯುದಂಶವಿರದೆ ತಟಸ್ಥವಾಗಿರಬೇಕಿತ್ತು. ಅಷ್ಟು ಹೊತ್ತಿಗಾಗಲೇ ಗೊತ್ತಿದ್ದ ವಿದ್ಯುದಂಶವಿರದಿದ್ದ ಇನ್ನೊಂದು ಕಣವೆಂದರೆ ಪರಮಾಣು ಕೇಂದ್ರದಲ್ಲಿರುವ 'ನ್ಯೂಟ್ರಾನ್'. ಆದ್ದರಿಂದ ಅದಕ್ಕಿಂತ ಭಿನ್ನವಾದ ಈ ಎರಡನೆಯ ತಟಸ್ಥ ಕಣಕ್ಕೆ 'ನ್ಯೂಟ್ರಿನೋ' ಎನ್ನುವ ಹೆಸರು ಬಿತ್ತು.

ಹೆಸರಿಟ್ಟರೂ ಅದರ ಇರುವಿಕೆಯನ್ನು ನಂಬುವಂತೆ ಆಗಬೇಕಾದರೆ ಇಪ್ಪತ್ತೈದು ವರ್ಷಗಳೇ ಹಿಡಿದುವು! ಇದರ ಇರುವಿಕೆಯನ್ನು ಅರಿಯಲು ಮಾಡಬೇಕಾಗಿದ್ದ ಪ್ರಯೋಗಗಳು ಬಹಳ ಕಷ್ಟಮಯವಾಗಿದ್ದುವು. ಇಂದಿನಂತೆ ಎಲೆಕ್ಟ್ರಾನಿಕ್ ಉಪಕರಣಗಳು ಕಾಣಬರದಿದ್ದ, ಸರ್ಕಾರಗಳಿಂದ ಭಾರಿ ಮೊತ್ತದ ಸಹಾಯವಿಲ್ಲದಿದ್ದ ಅಂದಿನ ದಿನಗಳಲ್ಲಿ ವಿಜ್ಞಾನಿಗಳು ತಮ್ಮೆಲ್ಲ ಯುಕ್ತಿ ಉಪಯೋಗಿಸಿದರೂ ಫಲಿತಾಂಶ ಬರಲಿಲ್ಲ.

ಕೊನೆಗೂ ಇದರ ಇರುವಿಕೆ ಸಿದ್ಧವಾದದ್ದು ಅಮೆರಿಕನ್ ಸರ್ಕಾರ ಪರಮಾಣುವಿನ ಶಾಂತಿಯುತ ಬಳಕೆಗೆಂದು ವಿದ್ಯುಚ್ಛಕ್ತಿ ಉತ್ಪಾದಿಸುವ ರಿಯಾಕ್ಟರ್‌ಗಳನ್ನು ನಿರ್ಮಿಸಲಾರಂಭಿಸಿದ ಮೇಲೆಯೇ! ರಿಯಾಕ್ಟರ್‌ನಲ್ಲಿ ಆಗುವ ಕ್ರಿಯೆಗಳಲ್ಲಿ ನ್ಯೂಟ್ರಿನೋಗಳು ಯಥೇಚ್ಛವಾಗಿ ಉತ್ಪಾದನೆಯಾಗಬೇಕಾಗಿರುವು

ಡೆಂದು ತರ್ಕಿಸಿದ ಇಬ್ಬರು ವಿಜ್ಞಾನಿಗಳು ೧೯೫೬ರಲ್ಲಿ ರಿಯಾಕ್ಟರ್ ಭವನದ ಹೊರಗಡೆ ತಮ್ಮ ಪ್ರಯೋಗೋಪಕರಣಗಳನ್ನು ಇಟ್ಟು ಕಾದು ಕೂತರು. ಅನೇಕ ತಿಂಗಳುಗಳ ಕಾಲ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿದಾಗ ನ್ಯೂಟ್ರಿನೋ ಇರುವಿಕೆ ಸಂದೇಹವಿಲ್ಲದಂತೆ ಸಿದ್ಧವಾಯಿತು. ಪ್ರಯೋಗ ನಡೆಸಿದ್ದ ಪ್ರೊ| ರೈನಿಸ್ ಮತ್ತು ಪ್ರೊ| ಕೊವಾನ್ ಅವರಿಗೆ ಕೆಲವು ವರ್ಷಗಳ ನಂತರ ನೊಬೆಲ್ ಬಹುಮಾನ ಸಿಕ್ಕಿತು. ಆದರೂ, ಈಗಿನ ಕಾಲದಲ್ಲಿ ಸಂಶೋಧನೆಗಳು ಸಾಗಬೇಕಾದರೆ ವಿಜ್ಞಾನಿಗಳಿಗೆ ಮಾತ್ರ ಪ್ರತಿಭೆಯಿದ್ದು ಬಿಟ್ಟರೆ ಸಾಲದು, ಔದ್ಯೋಗಿಕ ರಂಗಗಳಲ್ಲೂ ಪ್ರಗತಿಯಾಗಬೇಕು, ಸರ್ಕಾರದಿಂದ ಸದಾ ಸಹಾಯ ಬೇಕೇ ಬೇಕು ಎಂದು ಮನದಟ್ಟು ಮಾಡುತ್ತದೆ ನ್ಯೂಟ್ರಿನೋ ಕಂಡುಹಿಡಿಯುವಿಕೆಯ ಕಥೆ.

ಆ ನಂತರ ನಡೆಸಿದ ಅನೇಕ ಸಂಶೋಧನೆಗಳಿಂದ ನ್ಯೂಟ್ರಿನೋ ಬಗೆಗೆ ನಮಗೆ ಹೆಚ್ಚಾಗಿ ತಿಳಿದುಬಂದಿದೆ. ಇದು ಅತ್ಯಂತ ಲಘುವಾದ ಕಣ. ಬಹುಶಃ ಇದಕ್ಕೆ ತೂಕವೇ ಇಲ್ಲದೆಯೂ ಇರಬಹುದು! ಇದೆಯೋ ಇಲ್ಲವೋ ಕಂಡುಹಿಡಿಯಲೂ ಆಗದಿರುವಷ್ಟು ಲಘುವಾದ ಕಣ ಇದು! ಆದರೂ ಕಷ್ಟಪಟ್ಟು ಪ್ರಯತ್ನಿಸು ತ್ತಿದ್ದಾರೆ ವಿಜ್ಞಾನಿಗಳು. ಇತ್ತೀಚೆಗೆ ರಷ್ಯನ್ ವಿಜ್ಞಾನಿಗಳು ತಮ್ಮ ಪ್ರಯೋಗ ವೊಂದರಲ್ಲಿ ಇದಕ್ಕೆ ಸ್ವಲ್ಪ ತೂಕವಿರುವಂತೆ ಕಂಡುಬಂದಿದೆ ಎಂದಿದ್ದಾರೆ. ಇದೇ ಅತಿ ಕುತೂಹಲ ಕೆರಳಿಸಿ ಇನ್ನೂ ಅನೇಕರು ಪ್ರಯೋಗಗಳನ್ನು ಕೈಗೊಳ್ಳುವಂತೆ ಮಾಡಿದೆ. ಈಗ ವೈಜ್ಞಾನಿಕ ವೃತ್ತಗಳಲ್ಲಿ ನ್ಯೂಟ್ರಿನೋ ಬಗೆಗಿನ ಯಾವ ಸುದ್ದಿ ಯಾದರೂ ಕುತೂಹಲಕಾರಿ ಎನ್ನುವುದೇ ಸಾಕು ಇದರ ಮಹತ್ವ ಅರಿವಾಗಲು.


ಅತ್ಯಂತ ವೇಗವಾಗಿ ಚಲಿಸುವುದು ನ್ಯೂಟ್ರಿನೋವಿನ ಇನ್ನೊಂದು ಗುಣ. ಹೆಚ್ಚೂ ಕಡಿಮೆ ಬೆಳಕಿನ ವೇಗದಲ್ಲೇ ಚಲಿಸುತ್ತದೆ! ಆದ್ದರಿಂದಲೇ ಲಘು ವಾಗಿದ್ದರೂ ಬಹಳಷ್ಟು ಶಕ್ತಿಯನ್ನು ಕೊಂಡೊಯ್ಯಬಲ್ಲದು.

ಇಷ್ಟು ಶಕ್ತಿ ಹೊಂದಿ ಅತೀವ ವೇಗದಲ್ಲಿ ಚಲಿಸುವ ಕಣಕ್ಕೆ ಮಿಕ್ಕ ವಸ್ತುಗಳು ಎದುರಾದರೆ ಅವುಗಳು ಛಿದ್ರ ಛಿದ್ರವಾಗಬೇಕೆಂದು ನಾವು ಊಹಿಸಿದರೆ ಅದು ಸಹಜ. ಬಿರುಸಾಗಿ ಬೀಸಿದಾಗ ಸಣ್ಣ ಕಲ್ಲೂ ದೊಡ್ಡ ಗಡಿಗೆಯನ್ನು ಒಡೆದು ಚೂರು ಚೂರಾಗಿ ಮಾಡುವುದಲ್ಲವೇ? ಆದರೆ ನಮ್ಮ ಸಹಜ ನಿರೀಕ್ಷೆಯನ್ನು ಮಣ್ಣಾಗಿಸುತ್ತದೆ ನ್ಯೂಟ್ರಿನೋ! ಪದಾರ್ಥಗಳ ಜೊತೆ ಕ್ರಿಯಾಶೀಲತೆ ಬಹಳ ಕಡಿಮೆ ಇದಕ್ಕೆ. ಶತಕೋಟಿ ನ್ಯೂಟ್ರಿನೋಗಳನ್ನು ನೆಲಕ್ಕೆ ಅಪ್ಪಳಿಸಿದರೆ ಅವು ಗಳಲ್ಲಿ ಒಂದೇ ಒಂದು ಮಾತ್ರ ಯಾವುದಾದರೊಂದು ರೀತಿಯಲ್ಲಿ ಮಣ್ಣಿ

ನೊಂದಿಗೆ ಕ್ರಿಯಾಶೀಲವಾಗುತ್ತದೆ. ಮಿಕ್ಕವೆಲ್ಲಾ ಸಲೀಸಾಗಿ ಭೂಗರ್ಭಕ್ಕಿಳಿದು, ಮುಂದುವರೆದು, ಭೂಗೋಳದ ಆ ಕಡೆ ಭಾಗದಿಂದ ಮೇಲೆದ್ದು ಹಾರಿ ಹೊರಟೇ ಹೋಗುತ್ತವೆ, ಕೂದಲು ಕೂಡಾ ಕೊಂಕಿಸಿಕೊಳ್ಳದೇ!

ನ್ಯೂಟ್ರಿನೋಗೆ ಈ ರೀತಿ ವಿಪರೀತ ನಾಚಿಕೆಯಿರುವುದು ಒಂದು ರೀತಿಯಲ್ಲಿ ನಮಗೇ ಒಳ್ಳೆಯದು! ಇಲ್ಲದಿದ್ದಿದ್ದರೆ ಸೂರ್ಯನಿಂದ, ನಕ್ಷತ್ರ, ನೀಹಾರಿಕೆಗಳಿಂದ ಉತ್ಪತ್ತಿಯಾಗಿ ಪ್ರತಿಕ್ಷಣವೂ ನಮ್ಮ ಮೇಲೆರಗುತ್ತಿರುವ ಕೋಟ್ಯನುಕೋಟಿ ನ್ಯೂಟ್ರಿನೋಗಳು ಇನ್ನು ಕೊಂಚವೇ ಕ್ರಿಯಾಶೀಲವಾಗಿದ್ದಿದ್ದರೂ ಸಾಕು, ಭೂಮಿಯ ಮೇಲೆ ಜೀವಿಗಳು ಉದ್ಭವಿಸಲೇ ಆಗುತ್ತಿರಲಿಲ್ಲ!

ಡಾ. ವಿಜಯ್ ಶ್ರೀಧರ್



ಪ್ರಕೃತಿಯ ನಿಯಮಗಳನ್ನು ತಿಳಿದು ಅಥವಾ ತಿಳಿಯದೆಯೇ ಉಲ್ಲಂಘಿಸುವುದು ಅಸತ್ಯದ ಒಂದು ರೂಪ.

—ಮಹಾತ್ಮ ಗಾಂಧಿ

ಖಂಡನೆ ಅನೇಕ ವೇಳೆ ಉಪಯೋಗಕಾರಿ. ಹೊಗಳಿಕೆ ಮೋಸಪಡಿಸುತ್ತದೆ.

—ಚರ್ಚಿಲ್

ಯಾರ ಹೃದಯದಲ್ಲಿ ಪರೋಪಕಾರ ಗುಣವು ಜಾಗ್ರತವಾಗಿರುತ್ತವೋ ಅವರ ವಿಪತ್ತುಗಳು ದೂರವಾಗುವವು.

—ಮನು

ಸಾರಾಕಚನ್ ಬೆಟ್ಟ ಕುರುಬರು

ಗ್ರೀಸ್ ಮತ್ತು ಆಲ್ಬೇನಿಯ ದೇಶಗಳ ಮಧ್ಯೆ ಇರುವ ಪರ್ವತದ ತಪ್ಪಲು ಪ್ರದೇಶಗಳಲ್ಲಿ ವಾಸಿಸುತ್ತಿರುವ ಅನೇಕ ಆದಿವಾಸಿ ಅಲೆಮಾರಿ ಬುಡಕಟ್ಟುಗಳ ಪೈಕಿ ಸಾರಾಕಚನ್ ಜನರ ಜನಪದ ಬದುಕು ತುಂಬ ವಿಶಿಷ್ಟವಾದುದು. ನಾಗರಿಕ ಸಂಪರ್ಕದಿಂದ ಬಹುದೂರವಿರುವ ಈ ಮಂದಿಯ ದೈನಂದಿನ ಜೀವನ ಹೆಚ್ಚು ಮಾರ್ಪಾಟಿಗೆ ಒಳಗಾಗದೆ ಇರುವುದರಿಂದ, ಕಳೆದ ದಶಕದಲ್ಲಿ ಅವರ ಜೀವನ ರೀತಿಯನ್ನು ಕುರಿತಂತೆ ಮಾನವಶಾಸ್ತ್ರಜ್ಞರು ಅಧ್ಯಯನ ಮಾಡಿದ್ದಾರೆ. ಇದರಿಂದಾಗಿ ಸಾರಾಕಚನರು ಭಾರತದ ತಮಿಳುನಾಡಿನ ನೀಲಗಿರಿ ಬೆಟ್ಟಗಳಲ್ಲಿ ವಾಸಿಸುತ್ತಿರುವ ತೊದವ ಮತ್ತು ಕುರುಬ ಜನರ ಜೀವನ ರೀತಿಗೆ ಬಹಳ ಹತ್ತಿರ ವಾಗಿರುವ ಅಂಶ ತಿಳಿದುಬರುತ್ತದೆ.

ಸಾರಾಕಚನ್ ಜನರ ಪ್ರಧಾನ ವೃತ್ತಿ ಕುರಿಕಾಯುವುದು. ಪ್ರಕೃತಿಯ ವೈಚಿತ್ರ್ಯದಿಂದಾಗಿ ಅವರದು ಸದಾ ಅಲೆಮಾರಿ ಜೀವನ. ಕುರಿಗಳಿಗೆ ಮೇವು ನೀರನ್ನು ಅರಸುತ್ತಾ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗುತ್ತಾರೆ. ಈ ಜನರನ್ನು ಕುರಿತು ಡೇವಿಡ್ ಉರ್ಕುಹರ್ಟ್ ಎಂಬಾತ ನೀಡಿರುವ ವಿವರಣೆ ಇದು: ಈ ಜನರು ಕಷ್ಟ ಸಹಿಷ್ಣುಗಳು, ಅನುಭವಿ ಪರ್ವತಾರೋಹಿಗಳು, ನಿರ್ದಿಷ್ಟ ತಾಣ ಇಲ್ಲದಿರುವವರು, ಆದರೆ ಯಾವ ಸ್ಥಳದಲ್ಲಿ ತೋಳಗಳ ಸಂಖ್ಯೆ ಹೆಚ್ಚಿವೆಯೋ ಮತ್ತು ಹದ್ದುಗಳ ಗೂಡುಗಳಿವೆಯೋ ಅಲ್ಲಿ ಈ ಜನರು ಯಾವಾಗಲೂ ಕಂಡುಬರುತ್ತಾರೆ....!

ಈ ಕುತೂಹಲಕಾರಿ ಜನರು ಬೇಸಿಗೆಯಲ್ಲಿ ಪಿಂಡಸ್ ಪರ್ವತ ಶಿಖರ ಪ್ರದೇಶ ಗಳಿಗೂ ಚಳಿಗಾಲದಲ್ಲಿ ಮ್ಯಾಸಿಡೋನಿಯ ಮತ್ತು ಥೀಸಲಿಯಲ್ಲಿರುವ ಬಯಲು ಪ್ರದೇಶಗಳಿಗೂ ವಲಸೆ ಹೋಗುತ್ತಾರೆ. ಕೆಲವು ಸಾವಿರದಷ್ಟು ಜನಸಂಖ್ಯೆ ಇರುವ(?) ಈ ಜನರನ್ನು ಅವರು ಮಾತನಾಡುವ ಭಾಷೆಯ ಆಧಾರದಿಂದ ಎರಡಾಗಿ ವಿಭಾಗಿಸಲಾಗಿದೆ (೧) ಗ್ರೀಕ್ ಭಾಷೆಯನ್ನಾಡುವ ಶುದ್ಧ ಅಥವಾ ನೈಜ ಸಾರಾಕಚನರು, (೨) ಪಶ್ಚಿಮ ಬಾಲ್ಕನ್ನರ ಒಂದು ಉಪಭಾಷೆಯಾದ ವ್ಲಾಕ್ ಭಾಷೆಯನ್ನು ಮಾತನಾಡುವ ಆಲ್ಬನೊ—ವ್ಲಾಕರು. ಜರ್ಮನ್ ಮೂಲದಿಂದ ಬಂದಿರುವ ವ್ಲಾಕ್ ಎಂಬ ಪದದ ಅರ್ಥ 'ಪರಕೀಯ' ಎಂದು.

ಐತಿಹಾಸಿಕ ಸಂಗತಿಗಳ ಪ್ರಕಾರ ಸಾರಾಕಚನರು ಅಲೆಮಾರಿ ಜನರಲ್ಲ. ಸುಮಾರು ಒಂದು ಶತಮಾನದಿಂದ ಈಚೆಗೆ ಮಾತ್ರವೇ ಈ ಜನರು ವಲಸೆ ಹೋಗುತ್ತಿರುವುದು. ಅದಕ್ಕೆ ಮುಂಚೆ ಅವರು ಮಿಸ್ಸೊಲೋಂಘ್ ಜಿಲ್ಲೆಯಲ್ಲಿ

ಪ್ರಧಾನವಾಗಿ ವಾಸಿಸುತ್ತಿದ್ದರು. ಆದರೆ ಕಳೆದ ಶತಮಾನದಲ್ಲಿ ನಡೆದ ಗ್ರೀಕ್ ಕ್ರಾಂತಿಯ ಅವಧಿಯಲ್ಲಿ ಸಾರಾಕಚನರು ಪರ್ವತ ಪ್ರದೇಶಗಳಲ್ಲೂ ವ್ಲಾಕರು ದನುಬೆ ಕಣಿವೆ ಪ್ರದೇಶದಲ್ಲಿನ ದಕ್ಷಿಣದೆಡೆಗೆ ಇರುವ ಪ್ರದೇಶಗಳಲ್ಲಿ ವಾಸಿಸಲು ತೊಡಗಿದರು.

ಸಾರಾಕಚನರು ಎತ್ತರ ವ್ಯಕ್ತಿಗಳು, ಶ್ರಮಸಹಿಷ್ಣುಗಳು, ಆಯಾಸವನ್ನೇ ಅರಿಯದವರು, ಬಲಶಾಲಿಗಳು. ಅಪರಿಚಿತರನ್ನು ಕಂಡಾಗ ಈ ಬುಡಕಟ್ಟಿನ ಗಂಡಸರು ಸ್ವಾಗತಿಸಿದರೆ, ಹೆಂಗಸರು ಓಡಿಹೋಗಿ ಬಚ್ಚಿಟ್ಟುಕೊಳ್ಳುವರು. ಗಂಡಸರಲ್ಲಿ ಬಹಳಷ್ಟು ಮಂದಿ ಉಣ್ಣೆಯ ಬಿಳಿ ಷರಾಯಿಯನ್ನು ಕಪ್ಪು ಬಣ್ಣದ ತೋಳಿಲ್ಲದ ಅಂಗಿಯನ್ನು ಅಥವಾ ಮೋಟುತೋಳಿನ ಜುಬ್ಬವನ್ನು ಧರಿಸುತ್ತಾರೆ. ಬಾಲ್ಕನ್ ಜನರು ಧರಿಸುವ ಗಿಡ್ಡುಲಂಗವನ್ನು ಕೆಲವರು ಈಗಲೂ ತೊಡುತ್ತಾರೆ. ಈ ಉಡುಪಿಗೆ "ಫುಸ್ತನೆಲ್ಲ" ಎಂದು ಹೆಸರು. ಪ್ರತಿಯೊಬ್ಬ ವ್ಯಕ್ತಿಯೂ ಚರ್ಮದ ದೊಡ್ಡ ನಡುಪಟ್ಟಿಯನ್ನೂ ಚರ್ಮದಿಂದ ಮಾಡಿದ ಸಣ್ಣ ಚೀಲಗಳನ್ನೂ ಮತ್ತು ಕತ್ತಿಗಳನ್ನು ಧರಿಸಿರುತ್ತಾರೆ. ಹೆಂಗಸರು ಕಾಲಿನ ಹರಡಿನವರೆಗೂ ಇರುವ ಉದ್ದನೆಯ ಉಡುಪೊಂದನ್ನು ತೊಟ್ಟಿರುತ್ತಾರೆ. ಮತ್ತು ನಡುವಿಗೆ ನಡುಪಟ್ಟಿ ಕಟ್ಟಿರುತ್ತಾರೆ. ಈ ಜನರು ಧರಿಸುವ ಟೋಪಿಗಳನ್ನು ದೂರದಿಂದ ನೋಡಿದರೆ ಅವು ತಲೆಕೆಳಗಾದ ಬಕೀಟಿನಂತೆ ಕಾಣುತ್ತವೆ. ಈ ಟೋಪಿಗಳು ಬಹಳ ಆಕರ್ಷಕವಾಗಿರುತ್ತವೆ. ಬೆಳ್ಳಿ ಬಣ್ಣದ ಮತ್ತು ಇತರ ಬಣ್ಣದ ದಾರದೆಳೆಗಳಿಂದ ಅವುಗಳನ್ನು ಅಲಂಕರಿಸಿರುತ್ತಾರೆ.

ಸಾರಾಕಚನ್ ಕುರುಬರು ಸಣ್ಣ ಸಣ್ಣ ಗುಂಪುಗಳಲ್ಲಿ ವಾಸಿಸುತ್ತಾರೆ. ಸ್ವಪ್ರೇರಣೆಯ ಪಾಲುದಾರಿಕೆಯ ಆಧಾರದ ಮೇಲೆ ಈ ಗುಂಪುಗಳು ವ್ಯವಸ್ಥಿತಗೊಂಡಿರುತ್ತವೆ. ಪ್ರತಿಯೊಂದು ಗುಂಪಿಗೂ ಒಬ್ಬೊಬ್ಬ ಮುಖಂಡನಿರುತ್ತಾನೇ ಅವನನ್ನು 'ಚೆರ್‌ಲಿಂಗಸ್' ಎಂದು ಕರೆಯುತ್ತಾರೆ. ಅವನ ಅಪ್ಪಣೆ, ಆದೇಶಗಳೆ. ಈ ಅಲೆಮಾರಿ ಜನರ ಕಾನೂನುಗಳು. ತನ್ನ ಜನರ ವಾರ್ಷಿಕ ವಲಸೆಯನ್ನು ನಿಯೋಜಿಸುವ ವ್ಯಕ್ತಿ ಇವನೇ. ಹಲವಾರು ಮಂದಿ ಕುರುಬರು ಒಟ್ಟಿಗೆ ಒಂದೆಡೆ ಸೇರಿ ತಮ್ಮ ಗುಂಪಿನ ಸದಸ್ಯನೊಬ್ಬನನ್ನು ಮುಖಂಡನನ್ನಾಗಿ ಒಮ್ಮತದಿಂದ ಆಯ್ಕೆ ಮಾಡುತ್ತಾರೆ. ಅಲ್ಲದೆ ಅವನ ಮುಂದಾಳುತನದಲ್ಲಿ ನಿಷ್ಠೆಯಿಂದ ನಡೆಯಲು ಒಪ್ಪಿಕೊಳ್ಳುತ್ತಾರೆ. ಒಂದು ವರ್ಷದ ತನಕ ಅವನ ನೇತೃತ್ವದಲ್ಲಿ ಅವನ ಸಲಹೆಯಂತೆ ತಮ್ಮ ಕುರಿಹಿಂಡನ್ನು ಪಾಲಿಸಲು ತೊಡಗುತ್ತಾರೆ. ವರ್ಷ ಕಳೆದ ಅನಂತರ ಜನರ ಅಭಿಪ್ರಾಯದಂತೆ ಆ ಮುಖಂಡನೇ

ಮುಂದುವರಿಯಬಹುದು ಅಥವಾ ಬೇರೊಬ್ಬನನ್ನು ಆಯ್ಕೆ ಮಾಡಲಾಗುತ್ತದೆ. ಓದು ಬರಹ ತಿಳಿಯದ ಈ ಅನಕ್ಷರಸ್ಥ ಕುರುಬರಿಗೆ ಮುಖಂಡನ ಮಾತೇ ವೇದವಾಕ್ಯ. ಅವನು ಹೇಳಿದಂತೆಯೇ ಎಲ್ಲ ಕಾರ್ಯಕ್ರಮಗಳೂ ನಡೆಯು ತ್ತವೆ ಜೀವನ ವಿಧಾನ ರೂಪುಗೊಳ್ಳುತ್ತದೆ.

ಸಾರಾಕಚ್‌ನರು ತಮ್ಮ ಗುಡಿಸಿಲುಗಳನ್ನು ತಾವೇ ಕಟ್ಟಿಕೊಳ್ಳುತ್ತಾರೆ. ಈ ವಿಷಯದಲ್ಲಿ ಹೆಂಗಸರದೇ ಮೇಲುಗೈ. ಹುಲ್ಲು ಅಥವಾ ಸಣ್ಣ ಸಣ್ಣ ಬೀಚ್ ಮರಗಳನ್ನು (ನುಣುಪಾದ ತೊಗಟೆಯುಳ್ಳ ಹೊಳೆವ ಎಲೆಗಳಿಂದ ಕೂಡಿದ ಒಂದು ಜಾತಿಯ ಕಾಡುಮರ) ಉಪಯೋಗಿಸಿ ಗುಡಿಸಿಲುಗಳನ್ನು ನಿರ್ಮಿಸು ತ್ತಾರೆ. ಚಳಿಮಳೆಗಾಲ ಬಿಸಿಲು—ಇವುಗಳನ್ನು ತಡೆಯುವಂತೆ ಗುಡಿಸಲನ್ನು ಕಟ್ಟುವುದರಲ್ಲಿ ಈ ಜನರು ಸಿದ್ಧಹಸ್ತರು. ಗುಡಿಸಿಲುಗಳು ಸಾಮಾನ್ಯವಾಗಿ ಜೇನುಗೂಡಿನಂತಿದ್ದು, ವೃತ್ತಾಕಾರದ ಮೇಲ್ಛಾವಣಿಯನ್ನು ಹೊಂದಿರುತ್ತವೆ. ಬೀಚ್‌ಮರದ ಗುಡಿಸಿಲೊಂದನ್ನು ನಿರ್ಮಾಣ ಮಾಡಲು ಎಂಬತ್ತು ಸಣ್ಣ ಸಣ್ಣ ಬೀಚ್‌ಮರಗಳು ಅವಶ್ಯಕ. ನಲವತ್ತು ಮರಗಳನ್ನು ತಳಭಾಗಕ್ಕೆ ಬಳಸಿದರೆ ಉಳಿದವನ್ನು ಮೇಲ್ಛಾವಣಿ ಕಟ್ಟಲು ಬಳಸುವರು. ಪ್ರವೇಶ ದ್ವಾರಕ್ಕಾಗಿ ಒಂದು ಬದಿಗೆ ದೊಡ್ಡ ರಂಧ್ರವನ್ನು ಕೊರೆದಿರುತ್ತಾರೆ. ಈ ರಂಧ್ರದ ಮೂಲಕವೇ ವ್ಯಕ್ತಿಯ ಆಗಮನ ಮತ್ತು ನಿರ್ಗಮನ. ಗುಡಿಸಿಲಿನ ಒಳಗೆ ಬರಿ ಮಣ್ಣಿನ ನೆಲ. ಮಣ್ಣನ್ನು ತುಳಿದು ಗಟ್ಟಿಮಾಡಿರುತ್ತಾರೆ. ಅಷ್ಟೆ. ನೆಲ ಸಮತಟ್ಟಾ ಗಿದ್ದು ಮಂದಿ ಮಲಗಲು ಕೂಡಲು ಓಡಾಡಲು ಅನುಕೂಲವಾಗಿರುತ್ತದೆ. ಅವರಲ್ಲಿ ಹಾಸಿಗೆಯಾಗಲಿ, ಕುರ್ಚಿಯಾಗಲಿ, ಬಳಕೆಯಲ್ಲಿಲ್ಲ. ಇದರ ಬದಲು ಕೆಲವು ಅಡುಗೆ ಮಡಕೆಗಳು, ಕುರಿ ಮತ್ತು ಆಡುಗಳಿಗೆ ಕಟ್ಟುವ ಹಿತ್ತಾಳೆ ಅಥವಾ ತಾಮ್ರದ ಗಂಟೆಗಳು ಮತ್ತು ಮನೆಯ ಹೆಣ್ಣು ನೇಯಲು ಒಂದು ಕೈಮಗ್ಗ—ಇವು ಈ ಅಲೆಮಾರಿ ಕುರುಬರ ಆಸ್ತಿ. ಗುಡಿಸಿಲಿನ ಒಳಗೋ ಅಥವಾ ಪಕ್ಕದಲ್ಲೋ ತಾವು ಸಾಕಿರುವ ಕುರಿಗಳಿಗಾಗಿ ಒಂದು ದೊಡ್ಡಿಯನ್ನು ಕಟ್ಟಿರುತ್ತಾರೆ. ವ್ಯಕ್ತಿಯು ಸಾಕಿರುವ ಕುರಿಗಳ ಸಂಖ್ಯೆಗನುಗುಣವಾಗಿ ದೊಡ್ಡಿ ದೊಡ್ಡದಾಗಿರಬಹುದು ಅಥವಾ ಚಿಕ್ಕದಾಗಿರಬಹುದು.

ಸಾರಾಕಚನ್ ಕುರುಬರದು ತುಂಬ ಸರಳ ಜೀವನ. ಅವರ ಮುಖ್ಯ ಆಹಾರ: ಮುಸುಕಿನ ಜೋಳದ ಬ್ರೆಡ್ಡು, ಹಾಲು, ಬೆಣ್ಣೆ ಮತ್ತು ಮಾಂಸ. ಮಾಂಸ ದೂಟ ಸಾಮಾನ್ಯವಾಗಿ ತಾವು ಸಾಕಿರುವ ಮಂದೆಯ ಒಂದು ಜೀವಿ ಸತ್ತಾಗ ಮಾತ್ರ ಮಾಡುವಂಥದು. ಮತ್ತೊಬ್ಬ ವ್ಯಕ್ತಿಯ ಸಹಾಯ, ಸಹಕಾರವನ್ನು

ಹೆಚ್ಚಾಗಿ ಬಯಸದ ಈ ಕುರುಬರ ಜೀವನದ ನಿತ್ಯ ಬಳಕೆಯ ಅಮೂಲ್ಯ ವಸ್ತುಗಳೆಂದರೆ ಉಪ್ಪು, ಕಾಫಿ, ಸಕ್ಕರೆ ಮತ್ತು ಹೊಗೆಸೊಪ್ಪು. ನಾಗರಿಕ ಪ್ರಭಾವದಿಂದಾಗಿ ಈ ವಸ್ತುಗಳು ಅವರಲ್ಲಿ ಈಗ ಸೇರ್ಪಡೆಯಾಗಿರಬಹುದು. ರಾಳಮರದ ಚಕ್ಕೆ ಚೂರು, ತೊಗಟೆಗಳನ್ನು ದೀಪಗಳ ಬದಲಿಗೆ ಉಪಯೋಗಿಸುತ್ತಾರೆ. ಬೆಂಕಿ ಹೊತ್ತಿಸಲು ಅವರಲ್ಲಿ ಬೆಂಕಿಪೊಟ್ಟಣವಿಲ್ಲ! ಬದಲಾಗಿ ಅವರು ಚಕಮುಕಿ ಕಲ್ಲನ್ನು ಮತ್ತು ಕರಿಕು ಬಟ್ಟೆ ಅಥವಾ ಯಾವುದಾದರೂ ಒಣ ವಸ್ತುವನ್ನು ಉಪಯೋಗಿಸುತ್ತಾರೆ.

ಅವರ ಸಾಮಾಜಿಕ ಜೀವನದಲ್ಲಿ ಗಂಡಿಗೆ ಮತ್ತು ಹೆಣ್ಣಿಗೆ ಪ್ರತ್ಯೇಕವಾದ ಮತ್ತು ನಿರ್ದಿಷ್ಟವಾದ ಕೆಲಸ ಕಾರ್ಯಗಳಿದ್ದರೂ ಮನೆಯ ಹೆಣ್ಣೇ ಅಧಿಕ ಕೆಲಸ ಮಾಡುತ್ತಾಳೆ. ಶ್ರಮದಾಯಕ ಕಾರ್ಯಗಳನ್ನು ಪೂರ್ಣಗೊಳಿಸುವವಳು ಅವಳೇ! ಗಂಡಸರು ತಮ್ಮ ಸಾಂಪ್ರದಾಯಿಕ ಶೈಲಿಯಲ್ಲಿ ಕುರಿ ಹಿಂಡನ್ನು ಹುಲ್ಲುಗಾವಲಿಗೆ ತಂದು ಮೇಯಿಸುವುದೇ ವೃತ್ತಿಯಾಗಿದೆ. ಜೊತೆಗೆ ಹಾಲನ್ನು ಕರೆಯುವುದು, ಬೆಣ್ಣೆಮಾಡುವುದು ಗಂಡಸರ ಪಾಲಿನ ಕೆಲಸ. ತೋಳಗಳನ್ನು ಓಡಿಸುವ ಸಲುವಾಗಿ ದೈತ್ಯನಾಯಿಗಳನ್ನು ತಮ್ಮ ಮಕ್ಕಳಂತೆಯೇ ಅವರು ಪ್ರೀತಿಯಿಂದ ಸಾಕಿ ಸಲಹುತ್ತಾರೆ.

ಮನೆಯ ಹೆಣ್ಣು ಎಲ್ಲ ಕೆಲಸಗಳನ್ನು ಮಾಡುತ್ತಾಳೆ. ಗುಡಿಸಲನ್ನು ಕಟ್ಟಲು ಸಹಾಯ ಮಾಡುವುದು, ಅಡುಗೆ ಮಾಡುವುದು, ಶುಚಿಮಾಡುವುದು, ಕೈಮಗ್ಗದಿಂದ ನೇಯುವುದು, ಮಕ್ಕಳಪಾಲನೆ ಪೋಷಣೆ, ಕುಟುಂಬದ ಸದಸ್ಯರ ಆರೋಗ್ಯ ರಕ್ಷಣೆ—ಮುಂತಾದವು ಹೆಣ್ಣಿನ ಪಾಲಿನ ಕೆಲಸಗಳು.

ಬೇಸಿಗೆಯ ದಿನಗಳಲ್ಲಿ ಉಣ್ಣೆಯನ್ನು ತೊಳೆಯಲು ಅನುಕೂಲವಾಗುವಂತೆ ಅವರು ನಿರಂತರವಾಗಿ ನೀರು ಹರಿಯುವ ತಾಣವನ್ನು ಅರಸುತ್ತಾರೆ. ಬೇಸಿಗೆಯಲ್ಲಿ ಉಣ್ಣೆಯನ್ನು ಹದಮಾಡಿ ಎಳೆಗಳನ್ನಾಗಿ ಮಾಡುವ ಕಾರ್ಯ ನಡೆಯುತ್ತದೆ. ಚಳಿಗಾಲದಲ್ಲಿ ಹೆಂಗಸರು ಉಣ್ಣೆಯ ದಾರಗಳಿಂದ ನಡುವಂಗಿ, ಷರಾಯಿ ಮತ್ತು ಕಾಲುಚೀಲಗಳನ್ನು ಹೆಣೆಯುತ್ತಾರೆ. ಜೊತೆಗೆ ಸ್ಕರ್ಟ್‌ಗಳು, ಜಡ್ಡಿ ಷರ್ಟುಗಳು ಮುಂತಾದವನ್ನು ತಯಾರಿಸಲು ಕಲಿತಿದ್ದಾರೆ. ಹೆಂಗಸರು ಸದಾಕಾಲ ಕಾರ್ಯನಿರತರಾಗಿಯೇ ಇರುತ್ತಾರೆ. ತಮ್ಮ ಇರುವಿಕೆಯನ್ನು ಸೂಚಿಸಲು ತಾಮ್ರದ ಅಥವಾ ಹಿತ್ತಾಳೆಯ ಗಂಟೆಗಳನ್ನು ಬಳಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಗಂಟೆಗಳನ್ನು ಬಾರಿಸುವುದರ ಮೂಲಕ ಸಂಭಾಷಣೆಗಳನ್ನು ನಡೆಸುತ್ತಾರೆ; ಸೂಚನೆಗಳನ್ನು ಕೊಡುತ್ತಾರೆ.

ಸಾರಾಕಚನ್ ಕುರುಬರ ಜೀವನಕ್ರಮವನ್ನು ಶ್ರದ್ಧೆಯಿಂದ, ತಾಳ್ಮೆಯಿಂದ ಅಧ್ಯಯನ ಮಾಡಿರುವ ಶ್ರೀಮತಿ ಮಾರ್ಗರೆಟ್ ಹ್ಯಾಸ್‌ಲಕ್ ಅವರು ಅನೇಕ ಕುತೂಹಲಕರ ಅಂಶಗಳನ್ನು ಪ್ರಕಟಪಡಿಸಿದ್ದಾರೆ: (೧) ಈ ಜನರ ಜೀವನದಲ್ಲಿ ಕುರಿಗಳಿಗೆ ಮಹತ್ವದ ಸ್ಥಾನವಿದೆ. (೨) ಹಾಲು ಮೊಸರು ಬೆಣ್ಣೆಗಳಿಗೆ ಪೂಜನೀಯ ಸ್ಥಾನವಿದೆ. (೩) ಹೆಂಗಸರು ಹಾಲನ್ನು ಕರೆಯುವಂತಿಲ್ಲ. (೪) ಪ್ರಾಣಿಯ ಹಿಂಗಾಲುಗಳ ಮುಂದೆ ಕುಳಿತು ಮಧ್ಯೆ ಕೈಹಾಕಿ ಹಾಲನ್ನು ಕರೆಯುವ ಈ ಜನರ ಪದ್ಧತಿ ತುಂಬ ವಿಶಿಷ್ಟವಾದುದು. (೫) ವಿದ್ಯುದ್ದೀಪ, ವಿದ್ಯುತ್ ಉಪಕರಣಗಳು ಅವರಿಗೆ ಗೊತ್ತಿಲ್ಲ. (೬) ಲೈಂಗಿಕ ಜೀವನದಲ್ಲಿ ಹೆಣ್ಣಿನದೇ ಹೆಚ್ಚು ಪಾತ್ರ. ಹೆಣ್ಣು ಮುಟ್ಟಾದ ದಿನಗಳಲ್ಲೂ ಸಂಭೋಗ ಕ್ರಿಯೆ ನಿಷಿದ್ಧವಲ್ಲ. (೭) ದೆವ್ವ ಭೂತ ಪಿಶಾಚಿಗಳನ್ನು ಓಡಿಸಲು ದೇವರು ಸೃಷ್ಟಿಸಿರುವ ಒಂದು ಪ್ರಬಲ ಆಯುಧ—ಮಿಂಚು. (೮) ಮೂವರ ಆಗಮನವು ದೇವರು ಮುನಿದಿರುವ ಸಂಕೇತ. (೯) ಬೆಕ್ಕು ನಾಯಿಗಳಲ್ಲಿ ಪರಸ್ಪರ ಹೊಂದಾಣಿಕೆಯಿದ್ದಿದ್ದರೆ, ನಾಯಿ ಪ್ರಾಣಿರಾಜ್ಯದ ಒಡೆಯನಾಗುತ್ತಿತ್ತು—ಇತ್ಯಾದಿ.

ಮಹಾಯುದ್ಧ ನಡೆದ ಅವಧಿಯಲ್ಲಿ ಈ ಅಲೆಮಾರಿ ಕುರುಬರಲ್ಲಿ ಅನೇಕರು ನಾಶವಾದರು. ಯುದ್ಧದ ಪರಿಣಾಮದಿಂದಾಗಿ ಅವರ ಸಾಮಾಜಿಕ ಸಾಂಸ್ಕೃತಿಕ ಅಂಶಗಳಿಗೆ ಹೆಚ್ಚು ಪೆಟ್ಟುಬಿದ್ದರೂ ಸಹ ಉಳಿದಿರುವ ಕೆಲವು ಮಂದಿ ಈಗಲೂ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರುತ್ತಿರುವುದು ಸಮಾಧಾನಕರ ಸಂಗತಿ.

ಆರ್. ರಾಮಕೃಷ್ಣ

ಪರದೇಶದಲ್ಲಿ ವಿದ್ಯೆಯೇ ಮಿತ್ರ, ಮನೆಯಲ್ಲಿ ತಾಯಿಯೇ ಮಿತ್ರಳು,
ರೋಗಿಗೆ ಔಷಧಿಯೇ ಮಿತ್ರ, ಮೃತನಾದವನಿಗೆ ಧರ್ಮವೇ ಮಿತ್ರ.

—ಚಾಣುಕ್ಯ ನೀತಿ

ಕಾಮಾತಿಶಯದಿಂದ ಹುಟ್ಟುವ ರತಿ, ಜೂಜು, ಬೇಟೆ ಕುಡಿತಗಳೆಂಬ
ನಾಲ್ಕು ದುಃಖಗಳಿಂದ ಮನುಷ್ಯನು ಸಂಪತ್ತನ್ನು ಕಳೆದುಕೊಳ್ಳುತ್ತಾನೆ.

—ವಾಲ್ಮೀಕಿ

ಪುಸ್ತಕ ವಿಮರ್ಶೆ

ಕುವೆಂಪು ಸಾಹಿತ್ಯ; ಕೆಲವು ಅಧ್ಯಯನಗಳು—ಸಂಪುಟ ೨: ದೇಜಗೌ; ಪ್ರಕಾಶಕರು: ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾಪರಿಷತ್ತು, ಕವಿಶೈಲ, ಜಯಲಕ್ಷ್ಮೀಪುರಂ, ಮೈಸೂರು ೧೨, ಪುಟ iv + ೨೫೬, ಬೆಲೆ ೧೫-೦೦; ೧೯೮೨.

ಇದು ಒಟ್ಟು ಹದಿನಾಲ್ಕು ವಿಮರ್ಶಾ ಲೇಖನಗಳ ಸಂಕಲನ. ಇಲ್ಲಿ ಕುವೆಂಪು ಅವರ ಕವನದಿಂದ ಹಿಡಿದು ಮಹಾಕಾವ್ಯ ಹಾಗೂ ಜೀವನ ಚರಿತ್ರೆಯ ವರೆಗೆ ವಿಚಾರ ವಿಮರ್ಶೆ ನಡೆದಿದೆ. ಇವುಗಳಲ್ಲಿ ವಿಮರ್ಶಾಕೃತಿಗಳಾದ 'ನೆನಪಿನ ದೋಣಿಯಲ್ಲಿ ಯಾತ್ರೆ'ಯನ್ನು ಕುರಿತಲ್ಲದೆ 'ಕುವೆಂಪು ಶಿಶುಸಾಹಿತ್ಯ'ಗಳ ವಿವೇಚನೆಯೂ ಇದೆ. 'ರಾಮಾಯಣ ದರ್ಶನಂ' ಮಹಾ ಕಾವ್ಯಕ್ಕೆ ಸಂಬಂಧಿಸಿ ದಂತೆ ಎರಡು ಲೇಖನಗಳು, 'ನೆನಪಿನ ದೋಣಿಯಲ್ಲಿ' ಕುರಿತಂತೆ ಮೂರು ಲೇಖನಗಳು ಇಲ್ಲಿ ಸಂಕಲಿತವಾಗಿವೆ.

ಮೊದಲ ಲೇಖನ 'ಶ್ರೀ ಕುವೆಂಪು ವ್ಯಕ್ತಿ, ಸಾಧನೆ, ಸಿದ್ಧಿ.' ಮುಂದಿನ ಲೇಖನಗಳ ಅಡಿಪಾಯದಂತಿದೆ. ಕುವೆಂಪು ಅವರ ಬಾಲ್ಯ ಜೀವನಸಾಧನೆ, ಕಾವ್ಯ ಜೀವನಕ್ಕೆ, ವೈಚಾರಿಕ ಮನೋಧರ್ಮಕ್ಕೆ, ದರ್ಶನ ಸಿದ್ಧಿಗೆ ಹೇಗೆ ಪ್ರೇರಕವಾಯಿತೆಂಬುದನ್ನು ಹೇಳುತ್ತದೆ. ವಿಮರ್ಶಕರೇ ಹೇಳುವಂತೆ "ಅಧ್ಯಾತ್ಮ ಸಾಧನೆ ಕಾವ್ಯಕ್ರಿಯೆ ಹಾಗೂ ಅವರ ಜೀವನ ಇವು ಮೂರು ಒಂದರೊಡ ನೊಂದು ಬೆಸೆದುಕೊಂಡು ಅವು ಅಭೇದವೆಂಬಂತೆ ಏಕವಾಹಿನಿಯಾಗಿ ಪ್ರವಹಿಸು ತ್ತವೆ" (ಪು. ೬) '....ತತ್ವ ದರ್ಶನವೆಂತೋ ವೈಚಾರಿಕತೆಯೂ ಅವರ ಬಾಳಿನ ಒಂದು ಭಾಗವಾಗಿವೆ' ಎಂಬ ಅಭಿಪ್ರಾಯಗಳು ಅರ್ಥಪೂರ್ಣವಾಗಿವೆ

ಕುವೆಂಪು ಸಾಹಿತ್ಯ ವ್ಯಾಸಂಗಕ್ಕೆ ಬೇಕಾದ ಕೀಲಿ ಕೈಗಳನ್ನು ಅವರೇ ನಾನಾ ಕಡೆ ಒದಗಿಸಿದ್ದಾರೆಂಬುದನ್ನು ಉದಾಹರಣೆಗಳೊಂದಿಗೆ 'ವಿಮರ್ಶೆಯ ಕೆಲವು ಸೂತ್ರಗಳು' ಲೇಖನದಲ್ಲಿ ಸ್ಪಷ್ಟಪಡಿಸಿದೆ. ಕಾವ್ಯ ಮೀಮಾಂಸೆಗೆ ಸಂಬಂಧಿಸಿದ ಸೂತ್ರ ರಚನೆಯ ಜತೆಗೆ ವಿಮರ್ಶಕರು ಅನುಸರಿಸಬೇಕಾದ ವಿಮರ್ಶಾ ಸೂತ್ರಗಳನ್ನು ಕವಿ ರಚಿಸಿದ್ದಾರೆ. ಅವುಗಳನ್ನು ಗ್ರಹಿಸಿದರೆ ಮಾತ್ರ ಅವರ ಸಾಹಿತ್ಯವನ್ನು ಪೂರ್ಣವಾಗಿ ಅರಿಯಲುಸಾಧ್ಯ ಎಂಬುದು ಈ ಲೇಖನ ದಿಂದ ವ್ಯಕ್ತವಾಗುತ್ತದೆ. ಏಕೆಂದರೆ ಕುವೆಂಪುರವರು ಕೇವಲ "ಸೃಜನ ಶೀಲ ಸಾಹಿತಿ ಮಾತ್ರವಲ್ಲ, ಶ್ರೇಷ್ಠ ಕಾವ್ಯ ಮೀಮಾಂಸಕರೂ ಅಹುದು" (ಪು. ೧೮)

'ಶ್ರೀ ರಾಮಾಯಣ ದರ್ಶನದಲ್ಲಿ ಮಂಡೋದರಿ'ಯ ಪಾತ್ರ ಚಿತ್ರಣದಲ್ಲಿ ಮೂಲದಲ್ಲಿ ಮಂಡೋದರಿಗಿಲ್ಲದ ಸ್ಥಾನವನ್ನು ಹೇಗೆ ಕುವೆಂಪು ತುಂಬಿಸಿದ್ದ ರೆಂಬುದನ್ನು ವಿಮರ್ಶಕರು ಸವಿವರವಾಗಿ ಪ್ರತಿಪಾದಿಸಿದ್ದಾರೆ. "ಕವಿಯ ಔದಾರ್ಯದಿಂದಾಗಿ ಅವಳು ಮಹಾ ಪತಿವ್ರತೆಯಾಗಿದ್ದಾಳೆ ಸಾಧಕಳಾಗಿದ್ದಾಳೆ, ಪತಿ ಹಿತೈಷಿಯಾಗಿದ್ದಾಳೆ, ಧರ್ಮದೇವತೆಯಾಗಿದ್ದಾಳೆ. ರಾವಣನ ಸಾಧನೆಗೆ,

ಅವನ ಹಿರಿಮೆಗೆ, ಅವನ ವಿಜಯಕ್ಕೆ ಅವಳೇ ಸರ್ವಕಾರಣ. ಶ್ರೀ ರಾಮ ಸತಿ ಮೈಥಿಲಿ ಸಹ ಅವಳ ಪ್ರಭಾವದಿಂದ ಮಹಾತಪಸ್ವಿನಿಯಾಗುತ್ತಾಳೆ (ಪು. ೩೬) ಎಂಬ ಅಭಿಪ್ರಾಯಗಳು, ಕುವೆಂಪು ಅವರ ದಾರ್ಶನಿಕ ಪ್ರತಿಭೆಯನ್ನು ಅರಿತವರಿಗೆ ಮಾತ್ರವೇ ಅರ್ಥವಾದೀತು. ಈ ದೃಷ್ಟಿಯಿಂದಲೇ ಮಂಡೋದರಿ "ರಾಮಾಯಣವನ್ನು ರಾವಣ ವಿಜಯಕಥೆಯನ್ನಾಗ ಮಾರ್ಪಡಿಸಿದ್ದಾಳೆಂಬ ವಿಮರ್ಶಕರ ನಿಲವು ಹೆಚ್ಚು ಅರ್ಥವತ್ತಾದುದು; ಅಂಗೀಕಾರ ಯೋಗ್ಯವಾದುದು.

ಮೂಲ ರಾಮಾಯಣದ ಎಲುಬುಗೂಡನ್ನು ತೆಗೆದುಕೊಂಡು ಇಂಥ ದರ್ಶನಪೂರ್ಣ ಮಹಾಕಾವ್ಯವನ್ನು ನಿರ್ಮಿಸಿದರೆಂಬುದನ್ನು ಮುಂದಿನ ಲೇಖನ 'ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ'ದಲ್ಲಿ ಸ್ಪಷ್ಟೀಕರಿಸಿದೆ. "ಶ್ರೀ ರಾಮಾಯಣ ದರ್ಶನಂ ಮೂಲ ಕೃತಿಯಿಂದ ಅನೇಕ ವಿಧಗಳಲ್ಲಿ ಬೇರೆಯಾಗುತ್ತದೆ. ವಸ್ತು ಸಂವಿಧಾನದಲ್ಲಿ, ಸನ್ನಿವೇಶ ಸೃಷ್ಟಿಯಲ್ಲಿ, ಪಾತ್ರ ರಚನೆಯಲ್ಲಿ, ವರ್ಣನೆಗಳಲ್ಲಿ ಮತ್ತು ಘಟನೆಗಳ ಹಾಗೂ ಮಾನವ ವಿಚಾರಗಳ ಸಾಂಕೇತಿಕತೆಯಲ್ಲಿ ಕಾವ್ಯಸತ್ಯ, ಲೋಕಸತ್ಯ ಮತ್ತು ಆಧ್ಯಾತ್ಮಿಕ ಸತ್ಯಗಳು ಈ ಕಾವ್ಯದಲ್ಲಿ ಸಮರಸವಾಗಿ ಮಿಲನಗೊಂಡು ಪೂರ್ಣತೆಯಲ್ಲಿ ಸಿದ್ಧಿ ಪಡೆಯುತ್ತದೆ (ಪು. ೫೧) ಎಂಬ ವಿಮರ್ಶಕರ ಹೇಳಿಕೆಗಳು ಕವಿ ಕುವೆಂಪು ಅವರ ದರ್ಶನ ದೃಷ್ಟಿಯನ್ನು ಅರ್ಥಪೂರ್ಣವಾಗಿ ಧ್ವನಿಸುತ್ತದೆ.

ಕುವೆಂಪು ಅವರ ಮೊದಲ ಮೂರು ದಶಕಗಳ ಆತ್ಮಕತೆಯನ್ನೊಳಗೊಂಡ ಒಂದು ಸಾವಿರದ ನೂರ ಮೂವತ್ತು ಮೂರು ಪುಟಗಳ 'ನೆನಪಿನ ದೋಣಿಯಲ್ಲಿ' ಕುರಿತು "ನೆನಪಿನದೋಣಿಯಲ್ಲಿ ಯಾತ್ರೆ' ಲೇಖನದಲ್ಲಿ "ಕವಿಯ ಅಂತಶ್ಚೇತನದ ವಿಕಾಸ ಹಾಗೂ ಆಧ್ಯಾತ್ಮ ಸಾಧನೆಯ ಪ್ರಗತಿಯೇ ಹೊರತು ಬರಿಯ ಬಾಹ್ಯ ಘಟನೆಗಳಲ್ಲ. ಅರ್ಧ್ವೈತನದ ಈ ತುದಿಯಲ್ಲಿ ನಿಂತು ಹಿಂದಕ್ಕೆ ಕಣ್ಣು ಹೊರಳಿಸಿದಾಗ ಕುವೆಂಪು ಸಾಹಿತ್ಯ ಲೋಕದ ಕಾರಣ ಪುರುಷರೆಂಬ, ವಿಧಿಯೇ ಅವರ ಜೀವನ ನಾಟಕಕ್ಕೆ ರಂಗಮಂಚವನ್ನು ಸಿದ್ಧಪಡಿಸುತ್ತಿತ್ತೆಂಬ, ಮನುಷ್ಯ ರೂಪದ ಮಾತಾಪಿತರಿಗಿಂತ ಮಿಗಿಲಾಗಿ ನಿಸರ್ಗ ಮಾತೆಯೇ ಅವರ ಕ್ಷೇಮ ಕಲ್ಯಾಣಗಳ ಹೊಣೆಹೊತ್ತಿದ್ದಳೆಂಬ ಸಾರಸ್ವತ ಶಕ್ತಿಯೇ ನಾನಾರೂಪದ ಪ್ರಣಾಳಿಕೆಗಳ ಮೂಲಕ ಅವರ ಕವಿ ಚೇತನವನ್ನು ರೂಪಿಸುತ್ತಿತ್ತೆಂಬ ಸಂಗತಿ ಈ ಕೃತಿಯ ಪುಟಪುಟಗಳಲ್ಲಿ ಅನುರಣನಗೊಳ್ಳುತ್ತಿದೆ (ಪು. ೬೨) ಎಂಬ ವಿಮರ್ಶಕರ ಈ ಅಭಿಪ್ರಾಯಗಳು ಇಡೀ ಆತ್ಮಕತೆಯ ಸ್ವರೂಪವನ್ನು ಅಭಿವ್ಯಕ್ತಪಡಿಸುತ್ತದೆ.

ಶ್ರೀ ಕುವೆಂಪು ಅವರ ಎಪ್ಪತ್ತೇಳನೆಯ ಜನ್ಮ ದಿನೋತ್ಸವ ಸಮಾರಂಭದಲ್ಲಿ

'ನೆನಪಿನ ದೋಣಿಯಲ್ಲಿ' ಕೃತಿಯನ್ನು ಕುರಿತ ವಿಚಾರಗೋಷ್ಠಿಯಲ್ಲಿ ಆರು ಮಂದಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಕಲನ 'ನೆನಪಿನ ದೋಣಿಯಲ್ಲಿ ಯಾತ್ರೆ'ಯಲ್ಲಿ ಲೇಖಕರು—ನಾನಾ ವಿಮರ್ಶಕರ ದೃಷ್ಟಿ ಭಿನ್ನಭಿನ್ನವಾದುದು. ಒಂದು ವಸ್ತು ಒಬ್ಬನಿಂದ ಮತ್ತೊಬ್ಬನಿಗೆ ಬೇರೆ ಬೇರೆಯಾಗಿ ಕಾಣಬಹು ದೆಂಬುದನ್ನು ಹೇಳಿ ಅಂತೆಯೇ ಸತ್ಯ ಪ್ರಕಾಶಕ್ಕೆ ಬರುವ ಪ್ರಬಂಧಕಾರರ ಕ್ರಿಯೆ ಪ್ರತಿಕ್ರಿಯೆಗಳನ್ನೂ, ಖಂಡನೆ ಮಂಡನೆಗಳನ್ನು ಸ್ವಾಗತಿಸಿದ್ದಾರೆ. ವಿಮರ್ಶೆಯ ಅಗ್ನಿಕುಂಡದಲ್ಲಿ ಮಿಂದು ಹೊರಬಂದಾಗ ಮಾತ್ರ ಸಾಹಿತ್ಯಲೋಕಗೌರವಕ್ಕೆ ಭಾಜನವಾಗುತ್ತದೆ' ಎಂಬುದು ವಿಮರ್ಶಕರ ಸ್ಪಷ್ಟ ಅಭಿಪ್ರಾಯ.

ಮುಂದಿನ ಲೇಖನ 'ನೆನಪಿನ ದೋಣಿಯಲ್ಲಿ' ಪರಿಚಯವನ್ನು ಕುರಿತದ್ದು. ಈ ಆತ್ಮಕಥೆ ವಸ್ತುನಿಷ್ಠವಾಗಿದೆ, ಸತ್ಯ ಪ್ರಾಮಾಣಿಕತೆಗಳ ಪಡಿಯಚ್ಚಾಗಿದೆ. ಕವಿಗೆ ಕಾವ್ಯ ಒಂದು ಅಭಿವ್ಯಕ್ತಿ ಮಾಧ್ಯಮವಾದರೆ, ಕವಿಯೇ ನೇರವಾಗಿ ನಿರೂಪಿಸುವ ಆತ್ಮಕಥೆ 'ಅವರ ಸಾಹಿತ್ಯ ಪೂರಕ್ಕೆ ಪೂರಕ' "ನೆನಪಿನ ದೋಣಿ ಯಲ್ಲಿ" ಈ ಆತ್ಮಕಥೆಗೆ ಸಮುಚಿತವೂ, ಸಾರ್ಥಕವೂ, ಸಾಂಕೇತಿಕವೂ, ಧ್ವನಿ ಪೂರ್ಣವೂ ಆದ ಹೆಸರು ಇಲ್ಲಿ ಕವಿಯೇ ಅಂಬಿಗನಾಗಿ ಜೀವನವಾಹಿನಿಯಲ್ಲಿ ತೇಲುತ್ತಾನೆ. ಅದನ್ನು ದಾಟುತ್ತಾನೆ. ಹುಟ್ಟುಹಾಕುತ್ತ ಗತಜೀವನದ ಕಡೆಗೆ ಹಿನ್ನೋಟವೆಸೆಯುತ್ತಾನೆ." (ಪು. ೯೭) ಎಂಬ ಸಾಲುಗಳು ಆತ್ಮಕಥೆಯ ಹೆಸರಿನ ಸಾರ್ಥಕತೆಗೆ ಸಾಕ್ಷಿಯಾಗಿವೆ.

೧೯೩೦ರಷ್ಟು ಹಿಂದೆಯೇ ಅರ್ಥಸಾಧಕ ಪತ್ರಿಕೆಯಲ್ಲಿ ಅಚ್ಚಾಗಿದ್ದ ಕುವೆಂಪು ರವರ ಕಿರುಕಾವ್ಯ 'ಸಮುದ್ರ ಲಂಘನ' ಒಂದು ಖಂಡಕಾವ್ಯ. ಇದರ ವಸ್ತು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ 'ಇರ್ದುದು ಮಹೇಂದ್ರಾಚಲಂ' ಸಂಚಿಕೆಯ ಕೊನೆಯ ಭಾಗವನ್ನು ಇಡೀ 'ಸಾಗರೋಲ್ಲಂಘನಂ'ಸಂಚಿಕೆಯನ್ನೂ ಆಕ್ರಮಿಸಿಕೊಂಡಿದೆ ಎಂದು ವಿಮರ್ಶಕರು ಅಭಿಪ್ರಾಯಿಸಿದ್ದಾರೆ. ಇಲ್ಲಿ ಬಳಸಿ ರುವ ಛಂದಸ್ಸುಕೂಡ ಸಾಕಷ್ಟು ವೈವಿಧ್ಯದಿಂದ ಕೂಡಿದೆ. ಈ ಭಾಮಿನಿ ಷಟ್ಪದಿ ಕಾವ್ಯದಲ್ಲಿ ಕವಿ ದ್ವಿತೀಯ ಪ್ರಾಸವನ್ನು ಕೈಬಿಟ್ಟಿರುವುದು ಕಾಣುತ್ತದೆ. ಮೂರು ನಾಲ್ಕು ಮಾತ್ರೆಗಳ ಬೇಸರವನ್ನು ಕಳೆಯಲು ಅಲ್ಲಲ್ಲಿ ಐದು ಮತ್ತು ನಾಲ್ಕು ಮಾತ್ರೆಗಳ ಲಯವನ್ನು ತಂದಿರುವುದನ್ನು ಉದಾಹರಣೆಗಳೊಡನೆ ಸ್ಪಷ್ಟೀಕರಿ ಸಿದೆ. ಮಹಾಕಾವ್ಯದ 'ಮಹಾಛಂದಸ್ಸಿನ' ಸೃಷ್ಟಿಗೆ ಇಂಥ ಹಲವು ಸಾಧನೆಗಳು ಕಾರಣವೆಂಬುದೂ ಇದರಿಂದ ವ್ಯಕ್ತವಾಗುತ್ತದೆ.

'ಮುಕ್ತಿರಾಹು' ಕವಿತೆಯನ್ನು ಕುರಿತು—"ಇಲ್ಲಿ ಕ್ರಿಯೆಯ ಮೂಲಕವೇ ಕತೆ ವೇಗ ವೇಗವಾಗಿ ಹಿಗ್ಗುತ್ತದೆ ಯಾದ್ದರಿಂದ ಇವನ್ನು ಕಥನ ಕಾವ್ಯವೆಂದು ಕರೆಯಲಡ್ಡಿಯಿಲ್ಲ"ವೆಂಬ ಅಭಿಪ್ರಾಯ; 'ರಾಹು' ಪದ ಇಲ್ಲಿಗೆ ಹೊಂದಿಕೊಳ್ಳ

ಬೇಕಾದರೆ ಅಟ್ಟಿಸಿಕೊಂಡು ಬಂದು ಹಿಡಿಯುವ ಶಕ್ತಿಯೆಂದು ಅರ್ಥೈಸಿಕೊಳ್ಳ ಬೇಕಾಗುತ್ತದೆಂಬ ವಿಮರ್ಶಕರ ಅರ್ಥಸ್ಪಷ್ಟತೆ ಯಾರೂ ಒಪ್ಪುವಂಥಾದ್ದು. ಕವಿ ಪರಮಾತ್ಮ ಮತ್ತು ಜೀವಾತ್ಮ—ಈ ಎರಡು ಪಾತ್ರಗಳ ಮೂಲಕ ಸಮಾಜ ದಲ್ಲಿನ ಮೌಢ್ಯವನ್ನೂ ವಿಚಾರಹೀನ ಆಚರಣೆಗಳನ್ನು ಹೇಗೆ ವಿಡಂಬಿಸಿದ್ದಾ ರೆಂಬುದನ್ನು ಈ ಲೇಖನ ಸ್ಪಷ್ಟಪಡಿಸುತ್ತದೆ.

'ಅದ್ಭುತ ರಾಮಾಯಣ ಅಥವಾ ವಾಲ್ಮೀಕಿಗೊಂದು ಎಚ್ಚರಿಕೆ' ಎಂಬ ವಿಡಂಬನಾತ್ಮಕ ಕವಿತೆ, ವಿಶ್ವವಿದ್ಯಾನಿಲಯ ಕವಿಗೆ ಎಚ್ಚರಿಕೆಯ ನೋಟೀಸು ಕೊಟ್ಟ ಸಂದರ್ಭದಲ್ಲಿ ಮೂಡಿ ಬಂದದ್ದು. ಇವನ್ನು ಕುರಿತಂತೆ—"....ಇದರಲ್ಲಿ ಔಷಧೀಯ ಗುಣವಿದ್ದರೂ ಕಟುತ್ವವಿಲ್ಲ. ಹಾಸ್ಯವಿದ್ದರೂ ಜಿಹಾಸೆಯಿಲ್ಲ, ಕೊಂಕಿದ್ದರೂ ಬಿಂಕವಿಲ್ಲ. ವೈಯಕ್ತಿಕತೆ ಸಕಾಲಿಕತೆಯನ್ನು ಮೀರಿ ಸಾಮು ದಾಯಕತೆ ಮತ್ತು ಸಾರ್ವಕಾಲಿಕತೆಯ ನ್ನೊಳಗೊಳ್ಳುವುದರಿಂದ, ಯಾವುದೋ ಒಂದು ಪ್ರಸಂಗದಲ್ಲಿ ಹತ್ತು ಹಲವಾರು ಪ್ರಸಂಗಗಳು ಪ್ರತಿಬಿಂಬಿಸುವುದರಿಂದ ಇದೊಂದು ಶ್ರೇಷ್ಠ ಸಂಕೀರ್ಣ ವಿಡಂಬನೆಯಾಗುತ್ತದೆ" (ಪು. ೧೩೬) ಎಂಬ ವಿಮರ್ಶಕರ ಹೇಳಿಕೆ ಅರ್ಥಪೂರ್ಣವಾಗಿದೆ.

ಐದು ಪ್ರಬಂಧಗಳನ್ನೊಳಗೊಂಡ 'ಕುವೆಂಪು ಶಿಶು ಸಾಹಿತ್ಯ' ಎಂಬ ವಿಮರ್ಶಾ ಕೃತಿಯನ್ನು ವಿವೇಚಿಸುತ್ತ ಲೇಖಕರು ಕುವೆಂಪುರವರ 'ಬೊಮ್ಮನ ಹಳ್ಳಿಯ ಕಿಂದರಿಜೋಗಿ'ಯನ್ನು 'ಮಕ್ಕಳ ಮಹಾಕಾವ್ಯ'ವೆಂದು ಕರೆದಿದ್ದಾರೆ. ಇದು 'ಕತೆಗೆ ಕತೆ, ನಾಟಕಕ್ಕೆ ನಾಟಕ, ಕಾವ್ಯಕ್ಕೆ ಕಾವ್ಯ' ಎಂದಿದ್ದಾರೆ.

ಸುಮಾರು ಐವತ್ತಾರು ಪುಟಗಳ ಹರವನ್ನು ಪಡೆದಿರುವ 'ಶ್ರೀ ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ'ಯನ್ನು ಕುರಿತ ಲೇಖನದಲ್ಲಿ ಕಥೆ, ಕವನ, ಕಾದಂಬರಿ ಯಿಂದ ಹಿಡಿದು ಮಹಾಕಾವ್ಯದವರೆಗೆ ಕುವೆಂಪು ಅವರ ವೈಚಾರಿಕ ಮನೋಭಾವ ಪ್ರತಿಬಿಂಬಿತವಾಗಿದೆ. 'ವೈಚಾರಿಕತೆ' ಎಂಬ ಪದಕ್ಕೆ ಸ್ಥೂಲ ವಾದ ಅರ್ಥವನ್ನು ಕೊಡಲಾಗಿದೆ. ಪುರೋಹಿತಶಾಹಿಯಲ್ಲಿ; ಮತ, ಆಚರಣೆ, ಮೂಢನಂಬಿಕೆಗಳಲ್ಲಿ; ರೈತನ ಬದುಕಿನ ಚಿತ್ರಣದಲ್ಲಿ; ಹೂವಿನಿಂದ ಹಿಡಿದು 'ಯಃಕಶ್ಚಿತ್' ಗೊಬ್ಬರದವರೆಗಿನ ಅನುಭವದ ಅಭಿವ್ಯಕ್ತಿಯಲ್ಲಿ ಚಾರಿಕತ್ವೈವೆ ಯನ್ನು ತಂದಿದ್ದಾರೆಂಬುದನ್ನು ಲೇಖಕರು ಕುವೆಂಪು ಅವರ ಸಾವಿತ್ಯ ಪ್ರಕಾರ ಗಳ ಆಧಾರದಿಂದ ಕಂಡರಿಸಿದ್ದಾರೆ. ಲೇಖಕರ ಮಾತಿನಲ್ಲೇ ಹೇಳುವುದಾದರೆ 'ವೈಚಾರಿಕತೆಗೂ ಹಲವು ಮುಖಗಳುಂಟು ಮಗ್ಗುಲುಗಳುಂಟೆಂಬುದನ್ನು ವಿವರಣೆಗಳ ಮೂಲಕ ಸಾಬೀತು ಪಡಿಸಲಾಗಿದೆ. 'ವೈಚಾರಿಕತೆಯೇ ಅವರ ಬಾಳ ಉಸಿರು, ವೈಜ್ಞಾನಿಕತೆಯೇ ಅವರ ಜೀವನ ವಿಧಾನ, ಆಧ್ಯಾತ್ಮಿಕತೆಯೇ ಅವರ ಬದುಕಿನ ಗುರಿ' (ಪು. ೨೦೪) ಎಂಬ ಅಭಿಪ್ರಾಯಗಳೂ ಕುವೆಂಪು ಅವರ ಜೀವನದಲ್ಲೆಂತೋ ಅಂತೆಯೇ ಅವರ ಸಾಹಿತ್ಯ ಕ್ಷೇತ್ರಕ್ಕೂ ಅನ್ವಯಿಸುತ್ತದೆ.

ಆಧುನಿಕ ಕನ್ನಡ ಛಂದಸ್ಸಿನ ಇತಿಹಾಸದ ತಿರುವಿಗೆ ಕಾರಣರಾದ ಮೂರು

ನಾಲ್ಕು ಮಂದಿಗಳಲ್ಲಿ ಕುವೆಂಪುರವರೂ ಒಬ್ಬರು. ಸುಮಾರು ೧೯೨೬ ರಲ್ಲೇ 'ಪೂವು' ಎಂಬ ಚೊಚ್ಚಲ ಕವನದಲ್ಲಿ ನೂತನ ಶೈಲಿಯನ್ನು ತಂದ ಕುವೆಂಪು ತಮ್ಮ ಮಹಾಕಾವ್ಯದವರೆಗೂ ಛಂದೋ ವೈವಿಧ್ಯವನ್ನು ತಂದು ಆಧುನಿಕ ಸಾಹಿತ್ಯಕ್ಕೆ ದೊಡ್ಡ ಕಾಣಿಕೆಯನ್ನಿತ್ತಿದ್ದಾರೆಂಬುದು 'ಕುವೆಂಪು ಛಂದಸ್ಸಿನ ವಿಕಾಸ' ಲೇಖನದಿಂದ ವ್ಯಕ್ತವಾಗುತ್ತದೆ. ಲಯ ವೈವಿಧ್ಯವನ್ನು ಸಾಧಿಸುವಲ್ಲಿ ಕವಿ ಹಲವೆಡೆ ದ್ವಿತೀಯಾಕ್ಷರ ಪ್ರಾಸವನ್ನು ತಿರಸ್ಕರಿಸಿದ್ದಾರೆ. ಷಟ್ಪದಿ ರಚನೆಯಲ್ಲಿ ವೈವಿಧ್ಯತರುವಲ್ಲಿ ಚತುಷ್ಪದಿ, ಅಷ್ಟಪದಿಗಳ ರಚನೆಯೂ ಆಗಿದೆ—ಎಂಬೆಲ್ಲವುಗಳನ್ನು ಲೇಖಕರು ಉದಾಹರಣೆಗಳೊಡನೆ ಸ್ಪಷ್ಟಪಡಿಸಿದ್ದಾರೆ. ಮಹಾಕಾವ್ಯದ ಮಹಾಛಂದಸ್ಸು ಈ ಕವಿಯ ಸೃಷ್ಟಿ. ಅವರೇ ಕರೆದುಕೊಂಡಿರುವ 'ನಾಟ್ಯ ಛಂದಸ್ಸು ಮಹಾಛಂದಸ್ಸಿನ ಒಂದು ಶಾಖೆ' ಎಂದಿದ್ದಾರೆ. "ಕೆಲವೊಮ್ಮೆ ಮೌನವೇ ಮಾತಾಡುವಂತಿರುವುದು ಅವರ ಛಂದೋ ವಿಲಾಸದ ಭಂಗಿಯಾಗುತ್ತದೆ ಎಂಬ ಅಭಿಪ್ರಾಯವೂ ಕುವೆಂಪುರವರ ಛಂದೋ ವೈವಿಧ್ಯಕ್ಕೆ ಕನ್ನಡಿ ಹಿಡಿದಿದೆ.

ಈ ಸಂಕಲನದಲ್ಲಿ ಸಂಕಲಿತವಾಗಿರುವ ಕಡೆಯ ಲೇಖನ 'ಟೀಕೆಗಳಿಗೆ ಉತ್ತರ' ದಲ್ಲಿ ಕುವೆಂಪುರವರು ೧೯೭೪ರಲ್ಲಿ ಮಾಡಿದ ಭಾಷಣವೊಂದಕ್ಕೆ ಸುಮಾರು ಮೂವತ್ತಕ್ಕೂ ಹೆಚ್ಚು, ಟೀಕೆಗಳೋಪಾದಿಯಲ್ಲಿ ಬಂದ ಪತ್ರಗಳಿಗೆ ಉತ್ತರ ವಿದೆ. ಇಂಥ ಲೇಖನವೊಂದು ವಿಮರ್ಶಾ ಗ್ರಂಥದಲ್ಲಿ ಸೇರಿರುವುದು ಇದೇ ಮೊದಲು. ಪುರೋಹಿತಶಾಯಿ ನಿರ್ನಾಮವಾಗಬೇಕು ಜಾತೀಯತೆ ಮಾಯವಾಗಬೇಕು ಎಂಬ ಭಾಷಣದಲ್ಲಿ ಬಂದ ಪ್ರಸ್ತಾಪವನ್ನು ತಪ್ಪಾಗಿ ಅರ್ಥೈಸಿಕೊಂಡ ಹಲವು ಮಂದಿ ಹಿರಿಯರು, ಕಿರಿಯರು, ಸಂಘ-ಸಂಸ್ಥೆಗಳು, ಮಠಾಧಿಪತಿಗಳು ರೊಚ್ಚಿಗೆದ್ದು ಕುವೆಂಪುರವರನ್ನು ಪ್ರಶ್ನಿಸಿದ್ದಾರೆ. ಅವರೆಲ್ಲರಿಗೆ ಉತ್ತರರೋಪಾದಿಯಲ್ಲಿ ಈ ಲೇಖನ ಮೂಡಿದೆ. ಕುವೆಂಪುರವರು ದ್ವೇಷಿಸುವುದು ಬ್ರಾಹ್ಮಣ ಜಾತಿಯನ್ನಲ್ಲ ಬ್ರಾಹ್ಮಣ್ಯಕ್ಕಂಟಿಕೊಂಡು ಬಂದಿರುವ ಕೆಲವು ವಿಚಾರಹೀನ ಸಂಪ್ರದಾಯ ಹಾಗೂ ನಂಬಿಕೆಗಳನ್ನು ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಿದೆ. "ಅವರು ನಡೆದು ನುಡಿದರೇ ಹೊರತು ನುಡಿದು ಮರೆತವರಲ್ಲ" ಎಂಬ ಕುವೆಂಪು ಅವರ ಬಗೆಗಿನ ಮಾತುಗಳು ಅವರ ವ್ಯಕ್ತಿತ್ವವನ್ನೆಂತೋ ಅಂತೆಯೇ ಅವರ ಮನೋಧರ್ಮವನ್ನು ಪ್ರತಿಬಿಂಬಿಸುತ್ತದೆ.

ಹೀಗೆ ಹಲವು ಲೇಖನಗಳನ್ನೊಳಗೊಂಡ ಈ ವಿಮರ್ಶಾ ಕೃತಿಯ ಮೊದಲ ಸಂಪುಟ ೧೯೭೭ರಲ್ಲೇ ಅಚ್ಚಾಗಿದೆ. ಪ್ರಸಿದ್ಧ ವಿದ್ವಾಂಸರೂ ವಿಮರ್ಶಕರೂ ಆದ ದೇಜಗೌರವರ ನಿರರ್ಗಳವಾದ ಶೈಲಿ, ಸ್ಪಷ್ಟ ಅಭಿಪ್ರಾಯಗಳು ಕೃತಿಯ ಬೃಹತ್ತಿಗೆಂತೋ ಅಂತೆಯೇ ಮಹತ್ತಿಗೂ ಕಾರಣವಾಗಿದೆ.

ಒಟ್ಟಿನಲ್ಲಿ ಕುವೆಂಪುರವರ ಸಾಹಿತ್ಯದ ನಾನಾ ಪ್ರಕಾರಗಳನ್ನು ಕುರಿತ ಈ ಅಧ್ಯಯನ ಈ ನಿಟ್ಟಿನಲ್ಲಿ ಕೆಲಸ ಮಾಡುವ ವಿದ್ವಾಂಸರಿಗೆ, ಸಂಶೋಧಕರಿಗೆ ಉತ್ತಮ ಮಾರ್ಗದರ್ಶಕವಾಗಿದೆ.

ಹೆಚ್. ಬಿ. ಯಶೋಧರ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಕೃಷ್ಣಮೂರ್ತಿಪುರಂ : : ಮೈಸೂರು-೪

Reg. No. KRNN. 29
WPP 6

LICENSE No. 21
LICENSED TO POST WITHOUT PREPAYME

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು

ತರಿಸಿ ಓದಿರಿ

Edited by R. Boraiah, Printed by H. G. Ramaswamy Iyeng Manager, Karnataka State Adult Education Council Pre and Published by Karnataka State Adult Education Counc Mysore city (India)